ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 10

ಮಾರ್ಚ್ 08, 2009

ರೂ. 5/-

ಜನಶಕ್ತಿ

ಕನ್ನಡ ವಾರಪತ್ರಿಕೆ



ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆಗಳು









ಭಾರತದ ಕೃಷಿರಂಗಕ್ಕೆ ಇನ್ನೊಂದು ಕುತ್ತು

ಬಳ್ಳಾರಿ ಬಂದ್ : ಯಡ್ಡಿ-ರೆಡ್ಡಿಗಾರು ಮುಖಕ್ಕೆ ಜನರ ಗುದ್ದು



ರಾಜ್ಯದಲ್ಲಿ, ರಾಜಧಾನಿಯಲ್ಲಿ ಚಳುವಳಿಗಳೋ... ಚಳುವಳಿಗಳು...

ಮೈಸೂರು : 'ಆಪರೇಷನ್ ಕಮಲ'ಕ್ಕೆ ಮುಖಭಂಗ

ಮಂಗಳೂರು : ಸಂಕಟಗಳ ಬಗೆಗೆ ಸೊಲ್ಲೆತ್ತದ ಕೇಸರಿಪಡೆ

ಮಾರ್ಚ್ 2 ರಿಂದ 5 ದುಡಿವ ಜನತೆ ಸಂಘರ್ಷದತ್ತ



ಬಜೆಟ್ ಪ್ಯಾಕೇಜ್: ಹುತ್ತವ ಬಡಿದರೆ ಹಾವು ಸಾಯ್ತದೇ ಅಯ್ಯಾ?

ಮೂರು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಮತಾಂತರ ಎಂಬ ದುರ್ಗಮ ಅರಣ್ಯದಲ್ಲಿ ಒಂದು ಪಯಣ

ಮೊದಲ ಬಾರಿಗೆ ನಾಗಪುರದಲ್ಲಿ ದಲಿತ ಬಂಗಾರು ಲಕ್ಷ್ಮಣ್ ಅವರನ್ನು ಭಾಜಪದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಆ ಸಭೆಯಲ್ಲಿ ಆರ್‌ಎಸ್‌ಎಸ್ ನ ಸುದರ್ಶನ್ ಕೂಡಾ ಇದ್ದರು. ಬಂಗಾರು ಲಕ್ಷ್ಮಣ್, 'ಭಾಜಪದಲ್ಲಿ ಮುಸ್ಲಿಂ ಮತ್ತು ದಲಿತರನ್ನು ಸೇರಿಸಿಕೊಳ್ಳುವ ಕೆಲಸವಾಗಬೇಕು' ಎಂದು ಹೇಳಿಕೆ ಕೊಟ್ಟರು. ಎಂದೂ ಅಂಬೇಡ್ಕರ್ ಪ್ರತಿಮೆಯನ್ನು ಕಣ್ಣೆತ್ತಿ ನೋಡದ ಸಂಘ ಪ್ರಮುಖ ಸುದರ್ಶನ್ ಅಂದು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬಂದರು.

ಹಸಿ ಹಸಿ ನಾಟಕ

ಇದೊಂದು ಹಸಿ ಹಸಿ ನಾಟಕ ಎಂದು ಎಲ್ಲರಿಗೂ ತಿಳಿದ ವಿಚಾರ. ಆದರೆ ಅದಕ್ಕಿಂತ ದುರಂತದ ಸಂಗತಿಯೆಂದರೆ, ಆ ಕಾರ್ಯಕ್ರಮ ಮುಗಿದ ಮೇಲೆ ಕಾಂಗ್ರೆಸ್ಸಿನ ಒಂದು ಗುಂಪು ಅಲ್ಲಿಗೆ ಹೋಗಿ ಮೂರ್ತಿಯನ್ನು ತೊಳೆದು ಶುದ್ಧೀಕರಣ ಮಾಡಿತು! ಈ ಹಾಸ್ಯಾಸ್ಪದ ಸ್ಥಿತಿ ಏನನ್ನು ಸೂಚಿಸುತ್ತದೆ?

ವರ್ಣಜಾತಿ ವ್ಯವಸ್ಥೆಯು ಭಾರತದಲ್ಲಿ ನೆಲೆಗೊಂಡ ಎಲ್ಲಾ ಮತಧರ್ಮಗಳಲ್ಲೂ ಹಾಸುಹೊಕ್ಕಾಗಿದೆ. ಅಸ್ಪಶ್ಯತೆಯಿಂದ, ಅಮಾನವೀಯ ಜಾತಿವ್ಯವಸ್ಥೆಯಿಂದ ಪಾರಾಗಲು 'ಮತಾಂತರ' ಮದ್ದಲ್ಲ. ಮತಾಂತರ ಜಾತಿ ವ್ಯವಸ್ಥೆಯ ವಿರುದ್ಧ ಒಂದು ಬಂಡಾಯ ಎನ್ನಬಹುದೇ ಹೊರತು ಮತಾಂತರವು ಕೆಳಜಾತಿಯ ಜನರ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳನ್ನು ಮೂಲಭೂತವಾಗಿ ಬದಲಾಯಿಸುವುದಿಲ್ಲ. ಪಾಳೇಗಾರೀ ಭೂಮಿ ಸಂಬಂಧಗಳಲ್ಲಿ ಕ್ರಾಂತಿಕಾರೀ ಪರಿವರ್ತನೆಯಾಗದೆ ಮತ್ತು ಅದರ ಆಧಾರದಲ್ಲಿರುವ ಮೇಲಂತಸ್ತಿನ (Superstructure) ಜಾತಿವ್ಯವಸ್ಥೆ ನಾಶವಾಗುವುದಿಲ್ಲ. ಬ್ರಾಹ್ಮಣ ವಿರೋಧಿ ಚಳುವಳಿ, 'ಮತಾಂತರ' ಎಲ್ಲವೂ ಹುತ್ತವನ್ನು ಬಡಿಯುವ ಕೆಲಸವಷ್ಟೇ ಹೊರತು ಅದರಿಂದ ಹಾವು ಮಾತ್ರ ಸಾಯುವುದಿಲ್ಲ.

ಜಾತಿ: ವಿವಿಧ ಮುಖಗಳು

ಭಾರತದಲ್ಲಿನ ಪ್ರಮುಖ ಮತಗಳಲ್ಲಿರುವ ಜಾತಿಗಳ ಬಗ್ಗೆ ಗಮನಿಸುವ. ಇಸ್ಲಾಂನಲ್ಲಿ ಶೇಕ್, ಸೈಯದ್, ಮೊಗಲ್, ಪಠಾನ್ ಎಂಬ ಸ್ತರಗಳಿವೆ. ಕೇವಲ ಇರಾಕಿನಲ್ಲಿಯೇ ಶಿಯಾ, ಸುನ್ನಿ, ಕುರ್ದ್‌ರು ಬೇರೆ ಬೇರೆ ಪಂಥದವರು. ಇಸ್ಲಾಮಿನಲ್ಲಿ 'ಅಶ್‌ರಾಫ್' ಎಂದರೆ ವಿದೇಶೀ (ಅರಬಿ) ಮೂಲದ ಮುಸ್ಲಿಮರು ಹಾಗೂ ಉಚ್ಚ ಜಾತಿಯಿಂದ ಮತಾಂತರಗೊಂಡ ಮುಸ್ಲಿಮರು. ಕೆಳಜಾತಿಯಿಂದ ಮತಾಂತರಗೊಂಡವರೆಲ್ಲಾ 'ಅಜಲಾಫ್' ಎಂಬ ಜಾತಿಗೆ ಸೇರಿದವರು. ಇನ್ನು ಅಸ್ಪಶ್ಯ ಮುಸ್ಲಿಮರೂ ಇದ್ದಾರೆ. ಅವರು 'ಕಮೀನಾ' ಕೆಳಗಿನವರು. ಅವರಿಗೆ 'ಅರ್‌ಜಾಲ್' ಎಂದು ಕರೆಯುತ್ತಾರೆ. ಇವರೊಂದಿಗೆ ಇತರ ಮುಸ್ಲಿಮರು ಬೆರೆಯುವುದಿಲ್ಲ. ಇವರಿಗೆ ಮಸೀದಿಗಳೂ ಬೇರೆ. ಮೇಲ್ಜಾತಿಯ ಮುಸ್ಲಿಮರ ಸಾರ್ವಜನಿಕ ಸ್ಮಶಾನದಲ್ಲಿ ಇವರು ತಮ್ಮ ಹೆಣಗಳನ್ನು ಹುಗಿಯುವಂತಿಲ್ಲ. ಈ ರೀತಿ ದಲಿತ ವರ್ಗವು ಮುಸ್ಲಿಂ ಸಮುದಾಯದಲ್ಲೂ ಇದೆ. ಅವರು ಅಸ್ಪಶ್ಯರಲ್ಲ. ಆದರೆ, ಅವರ ಪರಿಸ್ಥಿತಿ ಅಸ್ಪಶ್ಯರಿಗಿಂತ ಭಿನ್ನವಾಗಿಯೇನೂ ಇಲ್ಲ. ಮಂಡಲ್ ಆಯೋಗದ ವರದಿಯ ಚರ್ಚೆಯ ಸಂದರ್ಭದಲ್ಲಿ ಸುಪ್ರೀಮ್ ಕೋರ್ಟ್ ಎಲ್ಲಾ ಅಲ್ಪಸಂಖ್ಯಾತ ಸಮುದಾಯಗಳಲ್ಲೂ ಜಾತಿ ವ್ಯವಸ್ಥೆ ಇರುವುದನ್ನು ಒಪ್ಪಿಕೊಂಡಿದೆ. ತನ್ನ ನಿರ್ಣಯಗಳಲ್ಲಿ ಅದು ದಲಿತ ಮುಸ್ಲಿಮ್ ಜಾತಿಯನ್ನು ಉಲ್ಲೇಖಿಸಿದೆ. ತಮಿಳುನಾಡಿನ ಲಬ್ಬಯಿ, ರವುಥರ್, ಮಾರಕಾಯರ್ ಮುಸ್ಲಿಂ ಜಾತಿಗಳನ್ನು ಪರಿಶಿಷ್ಟ ಜಾತಿಗಳಲ್ಲಿ ಸೇರಿಸಿದೆ. "All India backward Muslim committee" ಕಳೆದ 15 ವರ್ಷಗಳಿಂದ ಸಂವಿಧಾನದ ಅನುಚ್ಛೇದ 341ನ್ನು ಪರಿಷ್ಕರಣೆ ಮಾಡಿ ದಲಿತ ಮುಸ್ಲಿಮರಿಗೆ ಮೀಸಲಾತಿ ನೀಡಬೇಕೆಂದು ಒತ್ತಾಯಿಸುತ್ತಿದೆ. ಅದರೆ ಇದನ್ನು ಮುಸ್ಲಿಂ ಮೇಲು ಜಾತಿಯವರು ವಿರೋಧಿಸುತ್ತಿದ್ದಾರೆ.

ಇದು ಒಂದು ವಾಸ್ತವವಾದರೆ, ಇನ್ನೊಂದು ತಮಾಷೆಯೆಂದರೆ- ಭೈರಪ್ಪನಂತವರು ಮುಸ್ಲಿಮ, ಕ್ರೈಸ್ತರಿಗೆಲ್ಲಾ ಒಂದೇ ಐಡೆಂಟಿಯನ್ನು ನೀಡುವ ಮೂರ್ಖತನ ಮಾಡುತ್ತಾರೆ. ಒಬ್ಬ ಮುಸ್ಲಿಮನಾಗಿರುತ್ತಾ, ಕ್ರೈಸ್ತನಾಗಿರುತ್ತಾ ನಾನಾ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಐಡೆಂಟಿಟಿಗಳಿಂದ ಕೂಡಿರುತ್ತಾನೆ ಹಾಗೂ ಆತ ವಾಸಿಸುವ ಸಾಂಸ್ಕೃತಿಕ ಪರಿಸರದಿಂದ ಆತ ಬೇರೆಯಾಗಿರುವುದಿಲ್ಲ ಎಂಬ ಸಂಗತಿ ಹಳದಿ ಕಣ್ಣಿನವರಿಗೆ ಕಾಣಿಸುವುದಿಲ್ಲ. ಒಂದೇ ಮತವನ್ನು ಒಪ್ಪಿಕೊಂಡಿರುವ ಜನರ ಸಾಮಾಜಿಕ ವ್ಯವಹಾರದಲ್ಲಿ ಬಹಳಷ್ಟು ಅಂತರಗಳಿರುತ್ತವೆ. ಈ ಕುರಿತು ನಾನು ಅಮರ್ತ್ಯಸೇನ್ ಅವರನ್ನು ಉದಾಹರಿಸಲು ಬಯಸುತ್ತೇನೆ. (Idnetity and Violence: The illusion of Destiny: Amartyasen)

ಮುಸ್ಲಿಂ ಸಮುದಾಯದ ಬೇರೆ ಬೇರೆ ಸಂಸ್ಥೆಗಳು ಮತ್ತು ಸಂಪನ್ಮೂಲಗಳ ಮೇಲೆ ಮೇಲುಜಾತಿಯ ಮುಸ್ಲಿಮರ ಹಿಡಿತ ಎಷ್ಟಿದೆಯೆಂಬುದನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು (ಪ್ರಸ್ತುತ ಕೋಷ್ಟಕವನ್ನು ಇಮ್ತಿಯಾಜ್ ಅಹ್ಮದ್ ಅವರ "ಭಾರತೀಯ ಮುಸ್ಲಿಂ ಸಮಾಜ್ ಕೀ ಆಂತರಿಕ್ ಕಮ್‌ಜೋರಿಯ್ಯಾ ಔರ್ ಉನ್‌ಕಾ ಇಲಾಜ್" ಎಂಬ ಲೇಖನದಲ್ಲಿ ಉಲ್ಲೇಖಿಸಿದ ಅಲೀ ಅನ್ವರ್ ಕೊಟ್ಟ ದಾಖಲೆ.)

ಸಂಸ್ಥೆಯ ಹೆಸರು	ಸದಸ್ಯರ ಸಂಖ್ಯೆ	ಮೇಲುಜಾತಿ/ ವರ್ಗದ ಸದಸ್ಯರು	ಕೆಳಜಾತಿಯ ಸದಸ್ಯರು
1. ಮುಸ್ಲಿಂ ಪರ್ಸನಲ್ ಲಾ ಬೋರ್ಡ್‌ನ ಪದಾಧಿಕಾರಿಗಳು	11	10	01
2. ಬೋರ್ಡಿನ ಕಾರ್ಯಕಾರಿ ಸದಸ್ಯರು	39	36	03
3. ಮಿಲ್ಲಿ ಕೌನ್ಸಿಲಿನ ಸದಸ್ಯರು	48	44	04
4. 'ಇಮಾರತ್-ಎ-ಶರೀಯಾ'ದ (ಬಿಹಾರ್ ಮತ್ತು ಒರಿಸ್ಸಾ) ವ್ಯವಸ್ಥಾಪಕರು	21	19	02
5. ಅದಾವ್-ಎ-ಶರೀಫ್ ಪಟ್ನಾದ ಪದಾಧಿಕಾರಿಗಳು	11	08	03

ವೈವಿಧ್ಯತೆ

ಇಂದಿನ ವಿಶ್ವದಲ್ಲಿ ಈ ಅಂತರವನ್ನು ಕಾಣುವುದು ಕಷ್ಟವಲ್ಲ. ಉದಾ: ಸೌದಿ ಅರೆಬಿಯಾದ ಹಳ್ಳಿಗಾಡಿನ ಮುಸ್ಲಿಮ್ ಸ್ತ್ರೀಯರಲ್ಲಿ ಪ್ರಚಲಿತವಿರುವ ರೀತಿ ರಿವಾಜುಗಳು ತುರ್ಕಿಸ್ತಾನದ ನಗರಗಳಲ್ಲಿರುವ ಸ್ತ್ರೀಯರಿಂದ ಬೇರೆಯಾಗಿವೆ. ತುರ್ಕಿಯಲ್ಲಿ ಆಧುನಿಕ ಯುರೋಪಿನ ಪೋಶಾಕನ್ನು ಧರಿಸುತ್ತಾರೆ. ಮುಖವನ್ನು ಮುಚ್ಚಿಕೊಳ್ಳುವುದಿಲ್ಲ. ಅಂತೆಯೇ ಬಾಂಗ್ಲಾದೇಶದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಮುಂದುವರಿದ ಸ್ತ್ರೀಯರು ಮತ್ತು ಹಿಂದುಳಿದ ಸ್ತ್ರೀಯರಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ, ಹಾಗೆಂದು ಅವರೆಲ್ಲರೂ ಮುಸಲ್ಮಾನರೇ. ಅವರ ಸಮಗ್ರ ಇತಿಹಾಸದಲ್ಲಿ ಬೇರೆ ಬೇರೆ ಗುರುತುಗಳ ಅಂತೆಯೇ ಸಂಬಂಧಗಳ ಪ್ರಭಾವವು ಇದ್ದೇ ಇರುತ್ತದೆ. ಈ ಕುರಿತು 14ನೆಯ ಶತಮಾನದ ಇಬ್ಬರು ಮುಸ್ಲಿಮರ ನಡುವಿನ ಒಂದು ವಿವಾದದ ಕಡೆಗೆ ನಾನು ತಮ್ಮ ಗಮನ ಸೆಳೆಯುತ್ತೇನೆ: ಇಬ್ನಬತೂತಾ ಕ್ರಿ. ಶ. 1304ರಲ್ಲಿ ಟೆಂಜಿಯರ್ ನಗರದಲ್ಲಿ ಹುಟ್ಟಿದ. ಆತ ಏಶಿಯಾ ಮತ್ತು ಆಫ್ರಿಕಾ ಪ್ರವಾಸದಲ್ಲಿ ತನ್ನ ಜೀವನದ 30 ವರ್ಷಗಳನ್ನು ಕಳೆದ. ಇಂದು ಮಾಲಿ ಮತ್ತು ಘಾನಾ ಎಂಬ ಹೆಸರಿನಲ್ಲಿ ಪ್ರಸಿದ್ಧವಾದ ದೇಶಗಳ ನಡುವಿನ ಪ್ರದೇಶದಲ್ಲಿ ಆತ ಆಶ್ಚರ್ಯಕರವಾಗಿ ಸಂಗತಿಯೊಂದನ್ನು ಕಂಡ. ಟಿಂಬೂಕಟುವಿನ ಸಮೀಪದ ಇವಾಲ್ತನ ಪಟ್ಟಣದ ಕಾಜಿಯೊಬ್ಬ ಇಬ್ನಬೂತನ ಪ್ರಿಯಮಿತ್ರನಾಗಿದ್ದ. ಆದರೆ ಕಾಜಿಯ ಕುಟುಂಬದಲ್ಲಿ ಆತ ಕಂಡ ದೃಶ್ಯ ಮಾತ್ರ ಆತನಲ್ಲಿ ಜುಗುಪ್ಸೆ ಮಾಡಿಸಿತು. ಬತೂತಾ ಬರೆಯುತ್ತಾನೆ -

'ನನ್ನ ಫ್ರೆಂಡ್'

"ಒಂದು ದಿನ ನಾನು ಕಾಜಿಯನ್ನು ಭೇಟಿಯಾಗಲು ಆತನ ಮನೆಗೆ ಹೋದೆ. ಒಳಗೆ ಬರಲು ಅನುಮತಿ ಪಡೆದು ನಾನು ಆತನ ಕೋಣೆಗೆ ಹೋದೆ. ಆತನ ಬಳಿ ಪರಮ ಸುಂದರಿಯಾದ ಯುವತಿಯೊಬ್ಬಳು ಕುಳಿತ್ತಿದ್ದಳು. ಆಕೆಯನ್ನು ಕಂಡು ನಾನು ಸಂಕೋಚದಿಂದ ಹಿಂತಿರುಗಲು ತೊಡಗಿದೆ. ಆದರೆ, ಆಕೆಗೆ ಯಾವ ಸಂಕೋಚವೂ ಇರಲಿಲ್ಲ. ಆಕೆ ನಕ್ಕಳು. ಕಾಜಿಯೆಂದ- 'ನೀವು ಏಕೆ ಹಿಂತಿರುಗಿ ಹೋಗುತ್ತಿದ್ದೀರಿ. ಈಕೆ ನನ್ನ ಫ್ರೆಂಡ್.' ಆತನ ಈ ವ್ಯವಹಾರ ನನ್ನಲ್ಲಿ ಆಶ್ಚರ್ಯವನ್ನು ಮೂಡಿಸಿತು.

ಇಬ್ನಬತೂತನಿಗೆ ಆ ಕಾಜಿ ಒಬ್ಬನ ವ್ಯವಹಾರದಿಂದಲಷ್ಟೇ ಆಶ್ಚರ್ಯವಾಗಲಿಲ್ಲ. ಇನ್ನೊಬ್ಬ ವ್ಯಕ್ತಿ 'ಅಬೂ ಮಹಮ್ಮದ್ ಎಂದಕಾನ್ ಅಲ್ ಮುಸುಫಿ' ಎನ್ನುವಾತನೂ ಬತೂತನ ಮಿತ್ರ. ಆತನನ್ನು ಒಳ್ಳೆಯ ಮುಸಲ್ಮಾನ ಎಂದು ಜನ ಎನ್ನುತ್ತಿದ್ದರು. ಆತ ಮೊರಕ್ಕಾಗೂ ಹೋಗಿ ಬಂದಿದ್ದ. ಆತನ ಮನೆಗೆ ಬತೂತ ಹೋದಾಗ ಅಲ್ಲಿ ಒಬ್ಬಳು ಹೆಂಗಸು ಒಬ್ಬ ಗಂಡಸಿನೊಡನೆ ಕುಳಿತುಕೊಂಡು ಮಾತನಾಡುತ್ತಿದ್ದಳು. ಬತೂತಾ ಬರೆಯುತ್ತಾನೆ:

ನಾನು ಕೇಳಿದೆನು 'ಈ ಹೆಂಗಸು ಯಾರು?' ಮುಸುಫಿಯೆಂದ 'ಆಕೆ ನನ್ನ ಹೆಂಡತಿ' ನಾನೆಂದೆ 'ಆ ವ್ಯಕ್ತಿಯೊಡನೆ ಆಕೆಗೇನು ಸಂಬಂಧ?' ಆತನೆಂದ 'ಅವನು ಅವಳ ಫ್ರೆಂಡ್'' ಆಗ ನಾನೆಂದೆ 'ನೀನು ನಮ್ಮ ದೇಶದಲ್ಲಿ ಇದ್ದೆ. ಶರಿಯತ್ತಿನ ನಿಯಮಗಳನ್ನು ನೀನು ಬಲ್ಲೆ. ಈ ರೀತಿಯ ವ್ಯವಹಾರ ಸರಿಯೇ?' ಅದಕ್ಕೆ ಆತನೆಂದ 'ನಮ್ಮಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧ ನಡೆಯುತ್ತದೆ. ಇದನ್ನು ಒಳ್ಳೆಯ ವ್ಯವಹಾರ ಎಂದು ತಿಳಿಯಲಾಗುತ್ತದೆ. ಇದನ್ನು ಸಂದೇಹದಿಂದ ನೋಡುವುದಿಲ್ಲ. ನಿಮ್ಮ ದೇಶದ ಹೆಂಗಸರ ಹಾಗೆ ನಮ್ಮ ದೇಶದ ಹೆಂಗಸರು ಇಲ್ಲ'. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನಾನು ಹಿಂದಕ್ಕೆ ಬಂದೆ. ಇನ್ನೊಮ್ಮೆ ನಾನು ಅಲ್ಲಿಗೆ ಹೋಗಲಿಲ್ಲ. ಆತ ಹಲವು ಬಾರಿ ಕರೆದ. ಆದರೆ, ನಾನು ಹೋಗಲಿಲ್ಲ! ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಹಮ್ಮದ್ ಮತ್ತು ಇಬ್ನಬತೂತನ ನಡುವಿನ ಅಂತರವು ಮತಕ್ಕೆ ಸಂಬಂಧಿಸಿದುದಲ್ಲ. ಇಬ್ಬರೂ ಮುಸಲ್ಮಾನರು. ಆದರೆ, ಇಬ್ಬರ ಆಚಾರಗಳು ಬೇರೆ!

ನಾನು ಇಷ್ಟು ದೀರ್ಘವಾಗಿ ಏಕೆ ಅಮರ್ತ್ಯಸೇನರನ್ನು ಉಲ್ಲೇಖಿಸಿದೆನೆಂದರೆ, ಭಾರತದಲ್ಲಿ ಸಾವಿರಾರು ಬಗೆಯಲ್ಲಿ ಜೀವಿಸುವ ಅಥವಾ ಸಾಂಸ್ಕೃತಿಕ ವೈವಿಧ್ಯದ ಮುಸ್ಲಿಮರಿದ್ದಾರೆ, ಕ್ರೈಸ್ತರಿದ್ದಾರೆ, ಹಿಂದುಗಳಿದ್ದಾರೆ. ಮತದ ನಂಬಿಕೆಯೆಂಬುದು ವ್ಯಕ್ತಿಯ ಜೀವನದ ಒಂದು ಅತೀ ಸಣ್ಣ ವಿಚಾರ. ಇದನ್ನು ಬಿಟ್ಟು ಸಾವಿರಾರು ಐಡೆಂಟಿಟಿಗಳಿವೆ, ವೈವಿಧ್ಯಗಳಿವೆಯೆಂಬುದನ್ನು ಮತಾಂತರಿಸುವವರು ಮತ್ತು ಮತಾಂತರವನ್ನು ವಿರೋಧಿಸುವವರು ಅರ್ಥಮಾಡಿಕೊಳ್ಳಬೇಕಾಗಿದೆ.

ಇನ್ನು ಕ್ರೈಸ್ತರ ಬಗೆಗೆ ನೋಡೋಣ: ಮೊತ್ತ ಮೊದಲಿಗೆ ಕೇರಳಕ್ಕೆ ಒಂದು ನೆಲಸಿದವನು ಸ್ಯೆಂಟ್ ಥಾಮಸ್. ಆತ ಅಲ್ಲಿ ಚರ್ಚುಗಳನ್ನು ಸ್ಥಾಪಿಸಿದ. ಮೊದಲ ಕ್ರೈಸ್ತರು ಉಚ್ಚ ಜಾತಿಯ ಹಿಂದುಗಳಿಂದ ಮತಾಂತರಗೊಂಡವರು. ಸ್ಯೆಂಟ್ ಥಾಮಸ್ ತಂದ 'ಪವಿತ್ರಸಂದೇಶ'ಗಳನ್ನು ಕೆಳಜಾತಿಯವರ ಕಿವಿಗೆ ಬೀಳದಂತೆ ಆತ ಜಾಗ್ರತೆ ವಹಿಸುತ್ತಿದ್ದ. ಅವರು ಕೇಳಿಸಿಕೊಂಡರೆ ಆ ಪವಿತ್ರ ಸಂದೇಶಗಳು ಮಲಿನವಾಗುತ್ತವೆ. ಆಗ ಮತಾಂತರಗೊಂಡವರೇ 'ಸೀರಿಯನ್ ಕ್ರೈಸ್ತರು'. ಆದ್ದರಿಂದಲೇ ಅವರು ಹೆಚ್ಚು ಪ್ರಚಾರಕ್ಕೆ ಇಳಿಯಲಿಲ್ಲ.

(ಮುಂದುವರಿಯುವದು)

ಸಂಪಾದಕೀಯ

ಪ್ರಜಾಸತ್ತಾತ್ಮಕ ಹಕ್ಕುಗಳ ದಮನ

ಒಂದೆಡೆ ಸಂಘ ಪರಿವಾರ ಇನ್ನೊಂದೆಡೆ ಬಿಜೆಪಿ ಸರ್ಕಾರ ಪ್ರಜಾಸತ್ತಾತ್ಮಕ ಹಕ್ಕುಗಳ ದಮನವನ್ನೇ ಗುರಿಯಾಗಿಸಿಕೊಂಡಿವೆ. ಪ್ರತಿಭಟನೆ, ಬಿನ್ನಾಭಿಪ್ರಾಯವನ್ನೇ ಸಹಿಸದ ಈ ವರ್ತನೆ ಪ್ರಜಾಪ್ರಭುತ್ವಕ್ಕೆ ಗಂಡಾಂತರ ತಂದಿದೆ.

ಪ್ರಜಾಪ್ರಭುತ್ವೀಯ ಪದ್ಧತಿಯಲ್ಲಿ ಯಾವುದೇ ಸರ್ಕಾರವೂ ತನ್ನ ರೀತಿ, ನೀತಿ ನಡವಳಿಕೆಗಳ ಬಗ್ಗೆ ಟೀಕೆಗಳು ಬಂದಾಗ ಅವುಗಳನ್ನು ಸ್ವೀಕರಿಸಿ ವಿಮರ್ಶಿಸಿ, ಸಮಚಿತ್ತದ ಪ್ರತಿಕ್ರಿಯೆ ನೀಡಬೇಕಾಗಿರುವುದು ಸಹಜವಾಗಿದೆ. ಇದು ಒಪ್ಪಿತ ಮೌಲ್ಯವಾಗಿದೆ. ಅದರಲ್ಲಿಯೂ ವಿಧಾನಸಭೆಯಲ್ಲಾಗಲಿ, ಸಾರ್ವಜನಿಕವಾಗಿಯಾಗಲಿ, ವಿರೋಧಪಕ್ಷಗಳು ಮತ್ತು ನಾಗರೀಕರು ಭಿನ್ನಾಭಿಪ್ರಾಯ ಅಥವಾ ಕೇಳಿಕೆಗಳನ್ನು ಮಂಡಿಸಿದಾಗ ಇನ್ನೂ ಹೆಚ್ಚಿನ ಗಂಭೀರತೆಯ ಪ್ರತಿಕ್ರಿಯೆಯನ್ನು ನಾಗರೀಕ ಸರ್ಕಾರ ಮತ್ತು ಆಳುವ ಪಕ್ಷವು ತೋರಬೇಕಾಗುತ್ತದೆ. ಅಭಿಪ್ರಾಯ ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವದ ಅಂತ: ಸತ್ವದ ಅನಿವಾರ್ಯ, ಅಂತರ್ಗತ ಮೌಲ್ಯಗಳಾಗಿರುವಾಗ ಪಕ್ಷಭೇದದ ರಾಜಕೀಯ ಸಂಕುಚಿತತೆಯಾಚೆ ನಿಂತು ಸಮಸ್ತ ಜನತೆಯ ಲಕ್ಷವೇ ಪ್ರಧಾನವೆಂದು ಪರಿಗಣಿಸಬೇಕಾಗುತ್ತದೆ. ಇಂತಹ ನಡವಳಿಕೆಯನ್ನು ತೋರುವುದು ಅಧಿಕಾರದಲ್ಲಿರುವವರ ಹೊಣೆಯಾಗಿದೆ.

ಆದರೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಇಂತಹ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಕಿಂಚಿತ್ತೂ ಗೌರವ ತೋರುವುದು ಅಗತ್ಯವೆಂದು ಭಾವಿಸಿಯೇ ಇಲ್ಲವೆಂಬುದು ಅದರ ಪ್ರತಿಹಂತದ ನಡವಳಿಕೆಗಳಿಂದ ಕಾಣುತ್ತಿದೆ. ವಿರೋಧ ಪಕ್ಷಗಳ ಅಭಿಪ್ರಾಯಗಳನ್ನು ಪರಿಗಣಿಸುವುದಿರಲಿ ಎಲ್ಲವನ್ನೂ ಸಾರಾಸಗಟವಾಗಿ ತಿರಸ್ಕರಿಸಿ ಬುಲ್ಡೋಜ್ ಮಾಡಲಾಗುತ್ತಿದೆ. ಪ್ರತಿಭಟನೆಯ ದನಿಗೆ ಕಿವಿಗೊಡದೇ ಅದನ್ನು ತೋಳ್ಬಲ, ಆಡಳಿತದ ಯಂತ್ರ ಬಳಸಿ ದಮನಗೊಳಿಸುತ್ತಿದೆ. ಜನತೆಯ ವಿಷಯದಲ್ಲಿಯೂ ಇದೇ ವಿಧಾನಗಳನ್ನು ಆರಂಭದಿಂದಲೂ ಅನುಸರಿಸುತ್ತಾ ಬರಲಾಗಿದೆ. ಹಸಿರು ಶಾಲು ಹೊದ್ದಿದ್ದ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ 'ಕಾಳಜಿ' ಮೆರೆದ ಕೆಲವೇ ದಿನಗಳಲ್ಲಿ ಗೊಬ್ಬರ, ಬೀಜ ಕೇಳಿದ ರೈತರ ಮೇಲೆ ಗೋಲಿಬಾರ್ ನಡೆಸಿ ಇಬ್ಬರು ರೈತರನ್ನು ಬಲಿತೆಗೆದುಕೊಳ್ಳಲಾಯಿತು. ಇದೇ ದಾವಣಗೆರೆ, ಧಾರವಾಡ ಇತರೆಡೆಗಳಲ್ಲಿ ಮುಂದುವರೆಯಿತು. ಈಗಲೂ ಬಳ್ಳಾರಿ ಬಳಿ ವಿಮಾನ ನಿಲ್ದಾಣದ ನಿರ್ಮಾಣಕ್ಕೆಂದು ಎಕರೆ ಕೃಷಿ ನಡೆಸುತ್ತಿರುವ ನೀರಾವರಿಯುಳ್ಳ ಫಲವತ್ತಾದ ಭೂಮಿಯನ್ನು ಕಬಳಿಸುವುದರ ವಿರುದ್ಧ ರೈತರು ದನಿ ಎತ್ತಿದಾಗ ಪರಸ್ಪರ ಚರ್ಚಿಸಿ ಒಂದು ಪರಿಹಾರ ಸೂಕ್ತ ಕಂಡುಕೊಳ್ಳಲೂ ಸಹ ಮುಂದಾಗದೇ ಲಾಠಿ, ಬೂಟು, ಏಟುಗಳಿಂದ ಬಂಧೂಕು, ಬಯೋನೆಟ್‌ಗಳನ್ನು ತೋರಿಸಿ ದಮನಿಸಲು ಯತ್ನಿಸಲಾಯಿತು. ಸುಳ್ಳು ಕೇಸ್‌ಗಳನ್ನು ಹಾಕಿ ಹಿಂಸಿಸಲು ಹಿಂಜರಿದಿಲ್ಲ.

ಸರ್ಕಾರದ ಈ 'ಭಾಷೆ'ಯನ್ನು ಪ್ರತಿಭಟಿಸಿ ವಿರೋಧಪಕ್ಷಗಳು ಮುಷ್ಕರ, ಹರತಾಳ ಬಳ್ಳಾರಿ ಜಿಲ್ಲಾ ಸ್ವಯಂಪ್ರೇರಿತ ಬಂದ್‌ಗೆ ಕರೆ ನೀಡಿದ್ದಾಗ ಬಳ್ಳಾರಿ ನಗರದಲ್ಲಿಯೇ ಶಾಂತರೀತಿಯ ಧರಣಿಗೂ ಅವಕಾಶ ನೀಡದೇ ಮಾಜಿ ಸಚಿವರು, ರಾಜ್ಯ ನಾಯಕರುಗಳನ್ನು ಬಂಧಿಸಿ ನಿರ್ಬಂದಿಸಿತು. ವಿಚಿತ್ರವೆಂದರೆ ಹಾವೇರಿಯಾಗಲಿ, ಬಳ್ಳಾರಿಯಲ್ಲಾಗಲಿ ಸರ್ಕಾರ ರಕ್ಷಿಸಬಯಸಿದ್ದು ಕಾಳಸಂತೆಖೋರರನ್ನು, ಇಲ್ಲಿ ಅಕ್ರಮಗಣಿಗಾರಿಕೆ, ಭೂಮಾಫಿಯಾಗಳ ದಂಧೆಖೋರರನ್ನು, ಅದರಲ್ಲಿಯೂ ಅವರದ್ದೇ ಪಕ್ಷದ ನಾಯಕರನ್ನು. ಇಲ್ಲಿ ಜನತೆಯ, ರಾಜ್ಯದ ಹಿತಾಶಕ್ತಿಗಳಿಗಿಂತ ಇವರದ್ದೇ ಮುಖ್ಯ ಎಂಬುದು ಪ್ರತಿ ಹೆಜ್ಜೆಯಲ್ಲಿಯೂ ಸಾಬೀತು ಮಾಡಿದೆ. ತಮ್ಮ ಸರ್ಕಾರದ ಜನಪ್ರಿಯತೆ ಸಹಿಸಿದವರ ಕೃತ್ಯ ಎಂಬುದನ್ನು ಈ ನಾಯಕರು ಪ್ರತಿ ಬಾರಿಯೂ ಹೇಳುತ್ತಿದ್ದಾರೆ. ಇದೇ ಮಾತು, ಸಮರ್ಥನೆ ಬಜರಂಗದಳ, ಶ್ರೀರಾಮಸೇನೆಗಳಂತಹ ಗೂಂಡಾಗಳ ಕೃತ್ಯಗಳಿಗೂ ವಿಸ್ತರಣೆಯಾಗಿದೆ. ಉಡುಪು, ಆಹಾರ, ಆಚಾರ, ವಿಚಾರ, ಸಾಮಾಜಿಕ ಸಂಬಂಧಗಳನ್ನು ನಿಯಂತ್ರಿಸುವ, ನಿರ್ಬಂಧಿಸುವ ಪುಂಡರ ಪಡೆಗೆ ಸರ್ಕಾರ ಮಾನ್ಯತೆ ನೀಡುತ್ತಾ ಸಂವಿಧಾನೇತರ ಶಕ್ತಿಗಳನ್ನು ಸೃಷ್ಟಿಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಕುತ್ತು ತರುವ ಅಪಾಯಕಾರಿಯಾದ ಬೆಳವಣಿಗೆ.

ಇತ್ತೀಚೆಗೆ ಮಾಧ್ಯಮಗಳ ನೀತಿ ಸಂಹಿತೆ ಬಗ್ಗೆ ಮಾತನಾಡಿದ್ದ ಸರ್ಕಾರ ಸಾರ್ವಜನಿಕ ಪ್ರತಿಭಟನೆ, ಧರಣಿ ಇತ್ಯಾದಿಗಳನ್ನು ನಿರ್ಭಂಧಿಸಿ ನಿಯಂತ್ರಿಸುವ ಹೊಸ ಆದೇಶಗಳನ್ನು ಜಾರಿಗೆ ತರುತ್ತಿರುವುದು ಬಳ್ಳಾರಿ ಬಂದ್‌ನ ಸಂದರ್ಭದಲ್ಲಿ ಕಂಡಿದೆ. ಇಲ್ಲಿ ಪೊಲೀಸ್ ಇಲಾಖೆ ಮಾದರಿ ನೀತಿಸಂಹಿತೆ ಸುತ್ತೋಲೆ ಹೊರಡಿಸಿದೆ. ಅಂತಹ ಪ್ರಗತಿಪರ ಬುದ್ಧಿಜೀವಿಗಳು, ಪತ್ರಕರ್ತರು, ಹೋರಾಟಗಾರರ ಬೇಟೆಗೂ ನಡೆದಿರುವ ಯತ್ನ ನೆನಪಿಸಿಕೊಳ್ಳಬೇಕು.

'ಆಪರೇಷನ್ ಕಮಲ' ದಂತಹ ಅನೈತಿಕ, ಅಕ್ರಮಗಳ ಮೂಲಕ ಬಹುಮತ ಸರಿಪಡಿಸಿಕೊಂಡ ಬಿಜೆಪಿಯು ಸಂಘ ಪರಿವಾರದ ಮೂಲ ಚಿಂತನೆಯಾದ ಫ್ಯಾಸಿಸ್ಟ್ ಆಡಳಿತ ಅದರ ಮೌಲ್ಯಗಳ ಜಾರಿಗೆ ಸತತವಾಗಿ ಯತ್ನಿಸುತ್ತಿದೆ. ಒಂದೆಡೆ ಜನತೆಯ ಪ್ರಶ್ನೆಗಳು, ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆಯ ಬಗ್ಗೆ ಕಡು ತಿರಸ್ಕಾರ ಹಾಗೂ ಹೆಚ್ಚುತ್ತಿರುವ ಧಾಳಿಗಳು, ಇನ್ನೊಂದೆಡೆ ಸಂಸ್ಕೃತಿ ಅಭಿವೃದ್ಧಿಯ ತೋರಿಕೆಯ ಮಾತುಗಳು. ಇಂತಹ ಎಡಬಿಡಂಗಿ ತೋರಿಕೆಯ ವರ್ತನೆಗಳ ನಡುವೆ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸಲು ಅವಕಾಶವನ್ನು ಯಾರೂ ಕೊಡಬಾರದು. ಕರ್ನಾಟಕವನ್ನು ಗುಜರಾತ್ ಆಗಿಸುವ ಹಾದಿಯಲ್ಲಿರುವ ಬಿಜೆಪಿ ಪ್ರಯತ್ನಗಳ ವಿರುದ್ಧ ದೃಢ ಹೋರಾಟಕ್ಕೆ ಎಲ್ಲಾ ಶಕ್ತಿಗಳೂ ದುಮುಕಬೇಕಿದೆ.

ಹನಿ ನೀರಿಗೆ ಹಾಹಾಕಾರ ಗಂಗಾಜಲ 'ಹಂಚಿಕೆ'ಯಲ್ಲಿ ಸರ್ಕಾರ



ಬೆಂಗಳೂರಿನಲ್ಲಿ ವಕೀಲಿಕೆ ಮಾಡಿಕೊಂಡಿರುವ ಹಿರಿಯ ಮಿತ್ರರೊಬ್ಬರು ಆಧುನಿಕ ಕೃಷಿ, ಸಾವಯವ ಕೃಷಿ ಎಂದೂ ಜಾಗತೀಕರಣದ 'ಹಿತಗಾಳಿಯಿಂದಾಗಿ' ವಿದೇಶಕ್ಕೆ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಿ ಜಾಗತಿಕ ಮಾರುಕಟ್ಟೆ ಪ್ರವೇಶಿಸಿ ಯಶಸ್ವಿ ಲಾಭಮಾಡಿ ಕಾರ್ಪೊರೇಟ್ ಕೃಷಿಕರಾಗಬಹುದೆಂದೂ ಕೋಲಾರದಲ್ಲಿರುವ ಪೂರ್ವಿಕರ ಭೂಮಿಯೊಂದಿಗೆ ಇನ್ನೊಂದಿಷ್ಟು ಖರೀದಿಸಿ ಆಧುನಿಕ ಕೃಷಿಗೆ ಇಳಿದಿದ್ದಾರೆ. ಕೃಷಿಯ ಹೊಸ ಹೊಸ ಪ್ರಯೋಗಗಳನ್ನೇನೋ ಅವರು ಮಾಡಿದರು. ಫಸಲೂ ಬಂತು. ಆದರೆ ಉತ್ತಮ ಧರವಾಗಲೀ, ವಿದೇಶಕ್ಕೆ ರಫ್ತು ಮಾಡುವ 'ಸೌಭಾಗ್ಯ'ವಾಗಲಿ ಬರಲೇ ಇಲ್ಲ. ನಾಟಿ ಮಾಡುವಾಗ ಇದ್ದ ವೆನಿಲಾ ಬೆಲೆ ಈಗ ಸೊಂಪಾಗಿ ಬೆಳೆದು ನಿಂತಾಗ ಶೇ.10 ರಷ್ಟು ಇರಲಿಲ್ಲ. ಬೆಳೆ ಬಾರ ಹೆಚ್ಚಾಗಿ ನೆಲ ನೋಡುತ್ತಿದ್ದರೆ ಇವರು ಆಕಾಶ ನೋಡಿದರು. ಉಳಿದದ್ದರ ಗೋಳು ಹೀಗೆಯೇ. ಕೊನೆಗೆ ಸಾವಯವ ಕೃಷಿಯ ಸ್ಕೀಮಿನಲ್ಲಿ ಈಗ ತರಕಾರಿ ಬೆಳೆದು ನಾವೇ ಬೆಳೆದ ತರಕಾರಿ ಬಾಳೆಹಣ್ಣು, ಅಕ್ಕಿ, ರಾಗಿ ಎಷ್ಟು ರುಚಿ ಎಂದೆಲ್ಲಾ ತಿನ್ನಬೇಕಾಗಿದೆ.



ಗಂಗಾಜಲ ಹಂಚಿಕೆಯ ಹಿಂದೆ ಗುಪ್ತ ಅಜೆಂಡಾ!

ಕೃಷಿಕರ ಚಿಂತೆ

ಮಾರುಕಟ್ಟೆ 'ಬೆಲೆ' ಇದು ಹಲವು ವರ್ಷಗಳಿಂದಲೂ ಭಾಧಿಸುತ್ತಿರುವ ಪ್ರಶ್ನೆಗಳೇ. ಇಲ್ಲಿ ಉತ್ತರಕ್ಕಾಗಿ ಕಾದರೂ ಉಳಿದಿರುವುದು ಪ್ರಶ್ನೆಗಳೇ! ಉತ್ತರ ಸಿಕ್ಕಿಲ್ಲ. ಆದರೆ ಮಳೆ, ಚಳಿಗಾಲವೂ ರೈತರ ಪಾಲಿಗೆ ಬಿರುಬೇಸಿಗೆಯೇ ಆಗಿರುವಾಗ ಇನ್ನೂ ಬೇಸಿಗೆ ಬರುತ್ತಿರುವಂತೆ ರೈತರ ಪಾಡು ಏನಾಗಬೇಕು? ವಕೀಲ ಮಿತ್ರರಂಥವರ ಚಿಂತೆ ಈಗಂತೂ ಇಮ್ಮಡಿಯಾಗಿದೆ. ಈ ವರ್ಷದಲ್ಲಾದ ಮಳೆಯ ಕೊರತೆಯಿಂದಾಗಿ ಕೆರೆ, ಕುಂಟೆ, ಭಾವಿಗಳಲ್ಲಿ ನೀರು ಇಲ್ಲವಾಗುತ್ತಿದೆ. ಬತ್ತುತ್ತಿದೆ. 124 ತಾಲ್ಲೂಕುಗಳು ಬರಗಾಲ ಎದುರಿಸಿವೆ. ಫೆಬ್ರವರಿಯಲ್ಲೇ ಹೀಗಾದರೆ ಮಾರ್ಚ್, ಏಪ್ರಿಲ್‌ಗಳಲ್ಲಿ ಗತಿಯೇನು? ಜನ, ದನಗಳ ಪಾಡೇನು? ಇದು ಲಕ್ಷಾಂತರ ಕೃಷಿಕರ ಚಿಂತೆ.

ನಿಜ ಕೋಲಾರವೇನೋ ಅತ್ಯಧಿಕ ಕೆರೆ ಕುಂಟೆಗಳಿರುವ ಜಿಲ್ಲೆ. ಆದರೆ ಅಲ್ಲಿ ನೀರಿಲ್ಲ. ಅಂತರ್ಜಲ, ಕುಸಿಯುತ್ತಲೇ, ಜಲದ ಮೂಲ ಬೆನ್ನತ್ತಿ ಆಳಕ್ಕೆ ಕೈಚಾಚಿ ಖಾಲಿ ಬೊಗಸೆ ಹೊರಗೆಳೆಯುತ್ತಿರುವುದು ನಡೆದೇ ಇದೆ. ಅಂತರ್‌ಜಲ ಹೆಚ್ಚಿಸುವ ಪ್ರಯತ್ನಗಳು ಸರ್ಕಾರದಿಂದ ಹೆಚ್ಚು ಆಗುತ್ತಿಲ್ಲ. ಕೃಷಿಗೂ ಕುಡಿವ ನೀರಿಗೂ ಸಹ ತತ್ವಾರವಿರುವ ಅಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ ಶಾಶ್ವತ ಕುಡಿವ ನೀರು, ನೀರಾವರಿ ವ್ಯವಸ್ಥೆಗೆ ಅಗತ್ಯವಿರುವ ಯೋಜನೆ, ಅದರ ಜಾರಿಗೆ ಕ್ರಮಗಳನ್ನು ಕೈಗೊಳ್ಳಿರೆಂದು ದಶಕಗಳಿಂದ ಆಗ್ರಹಗಳಿದ್ದರೂ ದೃಢಕ್ರಮಗಳೇ ಇಲ್ಲವಾಗಿವೆ. ಬಂದು ಹೋದ ಸರ್ಕಾರಗಳೂ, ಈಗ ಅಭಿವೃದ್ಧಿಯನ್ನೇ ಮೂಲಮಂತ್ರವನ್ನಾಗಿ ಪಠಿಸುವ ಯಡಿಯೂರಪ್ಪನವರ ಸರ್ಕಾರವೂ ಈ ದಿಶೆಯಲ್ಲಿ ಕಿಂಚಿತ್ತೂ ಕಾಳಜಿ ವ್ಯಕ್ತಪಡಿಸುತ್ತಿಲ್ಲ. ಕ್ರಮ ಕೈಗೊಳ್ಳುತ್ತಿಲ್ಲ.

ದುರುಪಯೋಗ

ಆದರೆ ತಾನು ಉಸ್ತುವಾರಿ ವಹಿಸಿಕೊಂಡಿರುವ, ಶಾಸಕನಾಗಿ ಆಯ್ಕೆಯಾಗಿರುವ ಕೋಲಾರ ಜಿಲ್ಲೆಯ ನೀರಿನ ಪ್ರಶ್ನೆಯೊಂದನ್ನಾದರೂ ಬಗೆಹರಿಸದೇ ಇರುವ ಹಗರಣಗಳ ವೀರ ಸಚಿವ ಕೃಷ್ಣಯ್ಯ ಶೆಟ್ಟಿ ಈಗ ಇಡೀ ರಾಜ್ಯದ ಜನರಿಗೆ 'ಗಂಗಾಜಲ' ಕುಡಿಸುವ ಪುಣ್ಯ ಕಾರ್ಯಕ್ರಮ ಮುಗಿಸಿದ್ದಾರೆ. ಇದೇ ಮಹಾಶಯರು ಲಾಡು, ಕ್ಯಾಲೆಂಡರ್ ಹಂಚಿಕೆ ಮಾಡಿದ್ದರು. ಮಹಾ ಶಿವರಾತ್ರಿ ದಿನದಂದು ಗಂಗಾ ನದಿಯಿಂದ (ತರಿಸಲಾಗಿದೆಯೆಂದು ಹೇಳಲಾದ) 50 ಸಾವಿರ ಲೀಟರ್ ನೀರನ್ನು ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಸ್ಥಾನಗಳಿಗೆ ಹಂಚಿ, ಶಿವಲಿಂಗ ಶುದ್ದೀಕರಣಕ್ಕೂ, ತೀರ್ಥವೆಂದು ಭಕ್ತರಿಗೆ ಹಂಚಲು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಕಳಿಸಿದ್ದಾರೆ. ಪವಿತ್ರ ಜಲದಿಂದ ಪಾಪಿಗಳ ಜೀವನ ಪಾವನವಾಗಲೆಂದು. ಅದೆಷ್ಟೇ ಪವಿತ್ರವೆಂದರೂ ಗಂಗಾ ನದಿ ನೀರನ್ನು ಮಲೀನಗೊಳಿಸಲಾಗಿದೆ ಎಂಬುದು ತಿಳಿಯದ ವಿಷಯುವೇನಲ್ಲ. ಆದಾಗ್ಯೂ ನಮ್ಮ ಜನರಿಗೆ ವಿಶೇಷವಾಗಿ ಕೃಷಿಕರಿಗೆ ಗಂಗೆ'ಯೆಂಬುದು ಭಾವನಾತ್ಮಕವಾಗಿ ಸಂಬಂಧ ಪಡೆದಿದೆ. ಆ ನದಿಯ ಫಲವತ್ತಾದ ಭೂಮಿ ಉದ್ದಕ್ಕೂ ನಾಗರೀಕತೆ

ಪುಟ 11 ಕ್ಕೆ

ಮಂಡ್ಯ : ಉದ್ಯೋಗ ಕಳೆದುಕೊಂಡವರು ಹುಟ್ಟೂರಿನತ್ತ

ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮ ಭಾರತದ ಮೇಲೆ ಮತ್ತು ಕರ್ನಾಟಕದ ಮೇಲೆ ಬೀರಿರುವ ಕರಾಳ ಪರಿಣಾಮ ಎಂತಹ ಕಲ್ಲೆದೆಯನ್ನು ನಡುಗಿಸುವಂತಹುದು. ಸಂಪೂರ್ಣ ಕೃಷಿ ಪ್ರಧಾನವಾದ ಸಣ್ಣ ಮತ್ತು ಅತಿಸಣ್ಣ ರೈತರು ಮತ್ತು ಕೃಷಿ ಕೂಲಿಕಾರರೇ ಶೇ. 85 ರಷ್ಟು ಇರುವ ಮಂಡ್ಯಜಿಲ್ಲೆಯಲ್ಲೂ ಕೂಡ ಜಾಗತಿಕ ಆರ್ಥಿಕ ಹಿಂಜರಿತ ತನ್ನ ಪ್ರಭಾವವನ್ನು ಬೀರಿದೆ. ಕೃಷಿ ಬಿಕ್ಕಟ್ಟಿನ ಆಳವಾದ ಪರಿಣಾಮಗಳನ್ನು ಅನುಭವಿಸುತ್ತಾ ರೈತರ ಆತ್ಮಹತ್ಯೆಗೆ ಹಾಗೂ ಹೆಣ್ಣು ಭ್ರೂಣ ಹತ್ಯೆಗೆ ಕುಖ್ಯಾತಿ ಪಡೆದಿದ್ದ ಜಿಲ್ಲೆ ಗಾಯದ ಮೇಲೆ ಉಪ್ಪು ಸವರಿದಂತೆ ಈ ಬೆಳವಣಿಗೆಯಿಂದ ತತ್ತರಿಸುತ್ತಿದೆ.

ಕುಟುಂಬ ನಿರ್ವಹಣೆಗೆ ಮಂಡ್ಯ ಜಿಲ್ಲೆಯ ಜನತೆ ಬೆಂಗಳೂರಿನ ಕೂಲಿಯನ್ನು ನಂಬಿದ್ದು, ಪ್ರತಿಯೊಂದು ರೈತಾಪಿ ಬಡ ಕುಟುಂಬದಿಂದಲೂ ಬೆಂಗಳೂರಿಗೆ ವಲಸೆ ಇದೆ. 15 ವರುಷದ ಹಿಂದೆ ಕೇವಲ ಹುಡುಗರು ಅಥವಾ ಪುರುಷರು ವಲಸೆ ಇತ್ತು. ನಂತರದ ದಿನಗಳಲ್ಲಿ ಹುಡುಗಿಯರು ಮತ್ತು ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಊರಿನ ಕುಟುಂಬಗಳ ನಿರ್ವಹಣೆಗೆ ಬೆಂಗಳೂರಿಗೆ ವಲಸೆ ಹೋಗಲು ಪ್ರಾರಂಭಿಸಿದರು. ಈ ವಲಸೆ ಎಷ್ಟು ಸಾರ್ವತ್ರಿಕವಾಗಿದೆ ಎಂದರೆ ಬೆಂಗಳೂರಿನಲ್ಲಿ ಕೆಲಸದಲ್ಲಿ ಇರದ ಯಾವೊಂದು ಕುಟುಂಬವು ಸಿಗಲಾರದು.

ವಾಪಸ್ ಊರಿಗೆ

ಮಂಡ್ಯ ಜಿಲ್ಲೆಯಲ್ಲಿ ಯುವಕರು ಅದರಲ್ಲೂ ದಲಿತ ಯುವಕರನ್ನು ನೋಡಬೇಕಾದರೆ ಊರಿನ ದೊಡ್ಡಹಬ್ಬಗಳಿಗಾಗಿ ಕಾಯಬೇಕು. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಬೆಂಗಳೂರಿನಲ್ಲಿ ಲಕ್ಷಾಂತರ ಉದ್ಯೋಗಗಳು ಕಡಿತಗೊಂಡ ಪರಿಣಾಮ ಮಂಡ್ಯಕ್ಕೆ ತಟ್ಟಿದ್ದು, ಈಗಾಗಲೇ ಗಾರ್ಮೆಂಟ್ಸ್, ಟ್ರಾವೆಲ್ಸ್‌ನಲ್ಲಿ ಕೆಲಸದಲ್ಲಿದ್ದವರು ವಾಪಸ್ಸು ಬರಲಾರಂಭಿಸಿದ್ದಾರೆ. ಮನೆಗೆ ಹಣ ಕಳುಹಿಸುವುದು ಕಡಿಮೆ ಆಗಿದೆ ಹಾಗೂ ನಿಂತು ಹೋಗಿದೆ. ನೆಮ್ಮದಿ ಕೇಂದ್ರಗಳಲ್ಲಿ ತಿಂಗಳುಗಟ್ಟಲೆ ಕ್ಯೂನಲ್ಲಿ ನಿಂತು ರೇಷನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದ್ದರಲ್ಲಿ ಇದು ಪ್ರತಿಫಲನಗೊಂಡಿದೆ ಇದರಿಂದಾಗಿ ಇರುವ ಅತಿಸಣ್ಣ ಭೂಮಿಯ ಮೇಲೆ ಒತ್ತಡ ಹೆಚ್ಚಿದೆ ಜೊತೆಗೆ ಕೂಲಿಗೆ ಪೈಪೋಟಿ ಹೆಚ್ಚಿದೆ.

2005 ರಿಂದ 2008 ರ ಮಧ್ಯದ ತನಕ ಮಂಡ್ಯ ಜಿಲ್ಲೆಯಲ್ಲಿ ಹಣದ ವಹಿವಾಟು ದಾಖಲೆ ಪ್ರಮಾಣದಲ್ಲಿತ್ತು. ಇದಕ್ಕೆ ಮುಖ್ಯವಾದ ಕಾರಣ ಬೆಂಗಳೂರಿನ ಶ್ರೀಮಂತರು ಇಲ್ಲಿನ ಜಮೀನು ಖರೀದಿಗೆ ಆಸಕ್ತಿ ವಹಿಸಿದುದ್ದು. 1 ಎಕರೆ ಜಮೀನಿಗೆ 10 ಲಕ್ಷದಿಂದ 80 ಲಕ್ಷದ ತನಕ ಮಾರುಕಟ್ಟೆ ಇತ್ತು. ಈ ಅವಧಿಗಳಲ್ಲೆ ದಾಖಲೆ ಪ್ರಮಾಣದಲ್ಲಿ ಮದುವೆಗಳು ವಿಜೃಂಭಣೆಯಿಂದ ನಡೆದವು. ಈಗ ಬಾಣಾಂತನಕ್ಕೆ ಕಾಸಿಲ್ಲದ ಪರಿಸ್ಥಿತಿ ಬಂದೊದಗಿದೆ. ಜಮೀನು ಮಾರಾಟ ಪ್ರಕ್ರಿಯೆ ಸಂಪೂರ್ಣ ನಿಂತು ಹೋಗಿದ್ದು ರಿಯಲ್ ಎಸ್ಟೇಟ್ ನಂಬಿದ್ದ ಎಷ್ಟೋ ಜನ ಸಾಲಗಾರರಾಗಿದ್ದಾರೆ. ನಗರಗಳ ನಿವೇಶನಗಳಿಗೂ ಬೇಡಿಕೆ ಕುಸಿದಿದೆ. ಇದರಿಂದಾಗಿ ಜೀವನ ವೆಚ್ಚದ ಮೇಲೆ ಉಂಟಾಗಿರುವ ಗಂಭೀರ ಪರಿಣಾಮದಿಂದಾಗಿ ಸರ್ಕಾರಿ ಆಸ್ಪತ್ರೆಗಳ ಮೇಲಿನ ಅವಲಂಬನೆ, ರೇಷನ್ ಕಾರ್ಡ್‌ಗಾಗಿ ಹಾಹಾಕಾರ, ಉದ್ಯೋಗಕ್ಕಾಗಿ ಪರದಾಟ ಹಲವು ಪಟ್ಟು ಹೆಚ್ಚಿದೆ.

ಜಿಲ್ಲೆಯ ಪ್ರಮುಖ ಬೆಳೆಗಳಾದ ರಾಗಿ, ಭತ್ತ, ಕಬ್ಬು, ರೇಷ್ಮೆ ಬೆಳೆಗಳ ಬೆಲೆ ಕಳೆದ ವರ್ಷಕ್ಕಿಂತ ಶೇ. 25 ರಷ್ಟು ಏರಿಕೆ ಕಂಡಿದೆ. ಈ ಅಂಶ ಮಾತ್ರವೇ ಜಾಗತಿಕ ಆರ್ಥಿಕ ಪರಿಣಾಮದ ಭೀಕರತೆಯ ಕೆಂಡವನ್ನು ಮುಚ್ಚಿದ ಬೂದಿಯಾಗಿದೆ ಈ ಬೆಲೆಗಳ ಕುಸಿತ ಪ್ರಾರಂಭವಾದರೆ ಮಂಡ್ಯ ಜಿಲ್ಲೆಯ ಜನರ ಬದುಕು ಕೃತಕ ಉಸಿರಾಟ ವ್ಯವಸ್ಥೆ ನಿಂತ ರೋಗಿಯ ಪರಿಸ್ಥಿತಿಯಂತಾಗುತ್ತದೆ.

ರೈತರಿಗೆ ಇರುವಂತೆ ಭೂಮಿಯ ಸಾಮಾಜಿಕ ಸುರಕ್ಷೆ ಇಲ್ಲದ ಅಸಂಘಟಿತ ಕಾರ್ಮಿಕರು, ಕರಕುಶಲಕರ್ಮಿಗಳ ಬದುಕು ನರಕಯಾತನೆಯಾಗಿದೆ. ಒಂದೊಂದು ಕ್ಷೇತ್ರದ ಕಾರ್ಮಿಕರ ಪರಿಸ್ಥಿತಿ ಒಂದೊಂದು ಮಹಾದುಸ್ಥಿತಿಯ ಕಥೆಯನ್ನು ಹೇಳುತ್ತದೆ. ಇದರಲ್ಲಿ ಅತ್ಯಂತ ಹೆಚ್ಚು ಕರಾಳತೆಯಲ್ಲಿರುವವರು ಚಿನ್ನ- ಬೆಳ್ಳಿ ಕೆಲಸಗಾರರು.

ಚಿನ್ನ ಗಗನಕ್ಕೆ - ಬದುಕು ಪಾತಾಳಕ್ಕೆ

ಜಗತ್ತಿನ ಹೂಡಿಕೆದಾರರೆಲ್ಲ ಚಿನ್ನದ ಖರೀದಿಗೆ ಮುಗಿ ಬಿದ್ದಿದ್ದು 10 ಗ್ರಾಂ ಚಿನ್ನದ ಬೆಲೆ 17 ಸಾವಿರ ಗಡಿದಾಟಿದೆ. ಇದರಿಂದ ಯಾರಿಗೆ ಎಷ್ಟು ಲಾಭವಾಗಿದೆಯೋ ಇಲ್ಲವೋ ಮಂಡ್ಯದ ಚಿನ್ನದ ಕುಸುರಿ ಕೆಲಸಗಾರರು ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿದಂತೆಲ್ಲ ಒಡವೆ ಮಾಡಿಸುವವರ ಸಂಖ್ಯೆ ಇಲ್ಲವಾಗಿ, ಈ ಕೆಲಸವೆ ನಂಬಿ ಕುಲುಮೆ ಕಾಯಿಸುತ್ತಾ ಕುಳಿತ ಜಿಲ್ಲೆಯ 1500 ಕ್ಕೂ ಹೆಚ್ಚು ಕುಟುಂಬಗಳು ಬೀದಿ ಪಾಲಾಗಿವೆ.

ಮಂಡ್ಯ ನಗರ ಒಂದರಲ್ಲೇ 750 ಕುಟುಂಬಗಳು ಇದನ್ನು ನಂಬಿ ಜೀವನ ಸಾಗಿಸುತ್ತಿವೆ. ಸುಮಾರು 300 ಕುಟುಂಬಗಳು ಕೇರಳದಿಂದ ವಲಸೆ ಬಂದಿರುವ ಆಚಾರಿಗಳು, ಊಟಕ್ಕೂ ಕಷ್ಟ ಪಡುವವರಾಗಿ, ಸಾಲಗಾರರಾಗಿ ಆತ್ಮಹತ್ಯೆ ಮೊರೆಹೋಗಿದ್ದಾರೆ. ಕಳೆದ 3 ತಿಂಗಳಲ್ಲಿ ಮಡ್ಯ ನಗರ ಒಂದರಲ್ಲೇ 5 ಜನ ಆತ್ಮಹತ್ಯೆ ಈಡಾಗಿದ್ದಾರೆ. ಬೇರೆ ಕೆಲಸ ಗೊತ್ತಿಲ್ಲದೆ ಹಾಗೂ ಕೆಲಸ ಇಲ್ಲದೆ, ಯಾವುದೇ ರೇಷನ್ ಕಾರ್ಡ್ ಪಡೆಯಲಾಗದೆ ಸಾವು - ಬದುಕಿನ ಮಧ್ಯೆ ನರಳಾಡುತ್ತಿದ್ದಾರೆ.

ಕಟ್ಟಡ ಕಾರ್ಮಿಕರು

ಜಿಲ್ಲೆಯಲ್ಲಿ ಸುಮಾರು 25 ಸಾವಿರ ಕಟ್ಟಡ ಕಾರ್ಮಿಕರ ಕುಟುಂಬಗಳು ಇವೆ. ಗ್ರಾಮೀಣ ಭಾಗದಲ್ಲಿರುವ ಆಳವಾದ ಕೃಷಿ ಬಿಕ್ಕಟ್ಟಿನಿಂದ ಇವರ ಸಂಖ್ಯೆ ಏರುತ್ತಲೇ ಇದೆ ಇದಕ್ಕೆ ತಕ್ಕಂತೆ ಕೆಲಸವಾಗಲಿ, ಕೂಲಿಯಾಗಲಿ ಏರುತ್ತಿಲ್ಲ. ಸಿಮೆಂಟ್ ಮತ್ತು ಕಬ್ಬಿಣದ ಬೆಲೆಯಲ್ಲಿನ ದಾಖಲೆ ಹೆಚ್ಚಳದಿಂದ ಒಟ್ಟು ಕೆಲಸದ ಲಭ್ಯತೆ ಶೇ. 50 ಕ್ಕೆ ಕುಸಿದಿತ್ತು. ಈಗ ಈ ಬೆಲೆಗಳು ಇಳಿದಿದ್ದರೂ ಕೆಲಸದ ಪ್ರಮಾಣ ಏರುತ್ತಿಲ್ಲ ನಿರಂತರ ಕೂಲಿ ಸಿಗದೆ ಮಧ್ಯೆ ಮಧ್ಯೆ ಕೃಷಿ ಕೂಲಿ ವಾಪಸ್ಸು ಹೋಗಲಾಗುತ್ತಿದೆ. ಬೆಂಗಳೂರು ಮತ್ತ ಮೈಸೂರು ಮಧ್ಯ ಒಡಾಡುವ ಜನರ ಅಗತ್ಯಗಳಿ ನಿರ್ಮಾಣವಾಗುತ್ತಿದ್ದ ವ್ಯಾಪಾರ ವಹಿ ಮಳಿಗೆಗಳು, ವಾಣಿಜ್ಯ ಸಂಕೀರ್ಣಗಳ ನಿರ್ಮಾ ಕುಸಿದಿದೆ. ಗ್ರಾಮೀಣ ಉದ್ಯೋಗ ಖಾತ ಯೋಜನೆಯಲ್ಲಿ ಉದ್ಯೋಗ ಬಯಸುವ ಕಟ್ಟ ಕಾರ್ಮಿಕರನ್ನು ತಿರಸ್ಕರಿಸಲಾಗುತ್ತಿದೆ. ದಿನನಿತ್ಯ ಕೂಲಿಗೂ ದಿನನಿತ್ಯದ ಊಟಕ್ಕೂ ನೇ ಸಂಬಂಧವಿರುವ ಕಟ್ಟಡ ಕಾರ್ಮಿಕರ ಕುಟುಂಬಗಳ ಹಸಿವಿನಿಂದ ಬಳಲುತ್ತಿವೆ.

ಆಟೋಮೊಬೈಲ್ ರಿಪೇರಿ ಕ್ಷೇತ್ರ

ದ್ವಿಚಕ್ರ ವಾಹನಗಳ ಮಾರಾಟ ಹಾಗೂ ಅದ ಬಿಡಿ ಭಾಗಗಳ ಮಾರಾಟದಲ್ಲಿ ಉಂಟಾಗಿರು ಕುಸಿತದಿಂದ ಈ ಕ್ಷೇತ್ರದಲ್ಲಿ ಉದ್ಯೋ ಮಾಡುತ್ತಿರುವವರನ್ನು ತಟ್ಟಿದೆ. ಬಹುತೇಕ ಮುಸ್ಲಿ ಯುವಕರೇ ಕೆಲಸ ಮಾಡುವ ಈ ವಿಭಾಗದಲ್ಲಿ ಹೊ ವಾಹನಗಳು ಸರ್ವಿಸ್‌ಗೆ ಬರುತ್ತಿಲ್ಲ ಎಂದು ದೂರ ಸರ್ವೆ ಸಾಮಾನ್ಯವಾಗಿದೆ.

ಸಾರಿಗೆ ಕ್ಷೇತ್ರ

ಡಿಸಲ್ ಬೆಲೆಯ ವಿಪರೀತ ಹೆಚ್ಚಳದಿಂದಾ ಸರಕು ಸಾಗಾಣಿಕೆ ವಾಹನಗಳು ಸೇರಿದಂ ಪ್ರಯಾಣಿಕರನ್ನು ಸಾಗಿಸುವ ಖಾಸಗಿ ಸಾರಿಗೆ ಕ್ಷೇತ್ರದ ದುಡಿಯುತ್ತಿರುವ ಜನರು ಬೆಲೆ ಏರಿಕೆಯಿಂ ತತ್ತರಿಸುತ್ತಿದ್ದಾರೆ. ಡಿಸೇಲ್ ಗಣನೀಯ ಪ್ರಮಾಣದ ಕಡಿಮೆಯಾಗದೆ ಸರಕಿಗಿಂತ ಸರಕು ಸಾಗಾಣಿ ದುಬಾರಿಯಾಗಿ ವಹಿವಾಟು ಗಣನೀಯವಾ ಕುಸಿದಿದೆ.

ಜಿಲ್ಲೆಯ ಪ್ರವಾಸಿ ತಾಣಗಳಾದ ಮುತ್ತತ್ತಿ ಶಿವನಸಮುದ್ರ, ಬಲಮುರಿ, ಮೇಲುಕೋಟೆ ಮತ್ತಿತರ ಸ್ಥಳಗಳಿಗೆ ಬರುತ್ತಿದ್ದ ಐಟಿ ಉದ್ಯೋಗಿಗಳ ಸೇರಿದಂತೆ ಮತ್ತಿತರ ಪ್ರವಾಸಿಗರು ಗಣನೀಯ ಸಂಖ್ಯೆಯಲ್ಲಿ ಕಡಿಮೆಯಾಗಿ ಈ ಸಂಬಂಧದ ಎಲ ವ್ಯಾಪಾರದ ಮೇಲೂ ಪರಿಣಾಮ ಬೀರಿದೆ.

■ ಟಿ. ಯಶವ

ಹೋಳಿ ಹುಣ್ಣಿಮೆಗೆ ಕೇಸರೀ ಬಣ್ಣ!

ಕ್ಯಾತೆ ● ಶ್ರೀ

'ನಮಸ್ಕಾರ ಸನ್ಮಾನ್ಯ ಸಚಿವ ಕೃ. ಶೆಟ್ಟಿಯವರಿಗೆ.'

'ನಮಸ್ಕಾರ, ನಮಸ್ಕಾರ.'

'ಶಿವರಾತ್ರಿಯ ದಿನ ಗಂಗಾಜಲದ ತೀರ್ಥ ಕುಡಿಸಿ ರಾಜ್ಯದ ಸಮಸ್ತ ಜನತೆಗೆ ಕೈಲಾಸದಲ್ಲಿ ಸೀಟು ಖಾತ್ರಿ ಮಾಡಿಸಿದ್ದಕ್ಕಾಗಿ ಅಭಿನಂದನೆಗಳು'.

'ಧನ್ಯವಾದಗಳು, ಧನ್ಯವಾದಗಳು'.

'ಸರಕಾರದ ಕೆಲಸ ದೇವರ ಕೆಲಸ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅದನ್ನು ಜಾರಿಗೆ ತರುತ್ತಿರುವ ಸಚಿವರು ತಾವೇ ಎಂದು ನಿಮ್ಮ ಅಭಿಮಾನಿಗಳು ಆನಂದ ತುಂದಿಲರಾಗಿದ್ದಾರೆ.'

'ಹೌದು, ಹೌದು.'

'ಕುಡಿಯುವ ನೀರಿಗೆ ಎಲ್ಲಡೆ ಆಹಾಕಾರ ಇದೆ ಅಂಥ ಸಂದರ್ಭದಲ್ಲಿ ಗಂಗಾಜಲ ತರಿಸಿ ತೀರ್ಥ ಹಂಚಿದರೆ ಬಾಯಾರಿಕೆ ಹೋದೀತೆ ಎಂದು ಟೀಕಾಕಾರರು ಹೇಳುತ್ತಿದ್ದಾರೆ.'

'ಅವರೆಲ್ಲ ಧರ್ಮ ವಿರೋಧಿಗಳು.'

'ಮುಂದಿನ ಹಬ್ಬ ಯುಗಾದಿಗೆ ತಾವು ಅಮೆರಿಕದಿಂದ ಬೇವಿನಸೊಪ್ಪು ತರಿಸಿ ರಾಜ್ಯದಾದ್ಯಂತ ಹಂಚುವ ಕಾರ್ಯಕ್ರಮವಿದೆ ಯಂತೆ ಹೌದೆ?'

'ಮುಂದಿನ ಕಾರ್ಯಕ್ರಮ ಅದಲ್ಲರೀ, ಹೋಳಿ ಹುಣ್ಣಿಮೆ, ಅದರ ನಂತರ ಯುಗಾದಿ.'

'ಅರೆರೆ ಹೌದಲ್ಲ! ಹೋಳಿ ಹುಣ್ಣಿಮೆಗೆ ತಮ್ಮ ಸರಕಾರದ ಕಾರ್ಯಕ್ರಮಗಳೇನು?'

'ಹೋಳಿ ರಂಗಿನಾಟಕ್ಕೆ, ರಾಜ್ಯದಾದ್ಯಂತ ಕೇಸರೀ ಬಣ್ಣದ ಪುಡಿಯನ್ನು ಹಂಚಲಾಗುವುದು.'

'ಒಂದೇ ಬಣ್ಣ ಹಂಚಿದರೆ ಅದು ರಂಗು ಹೇಗಾಗುತ್ತದೆ? ಕೆಂಪು ಹಸಿರು...,'

'ಅವು ಅನ್ಯ ಧರ್ಮೀಯ ಬಣ್ಣಗಳು.'

'ಧರ್ಮಕ್ಕೂ ಬಣ್ಣಗಳೇ? ಅಲ್ಲಲ್ಲ, ಬಣ್ಣಕ್ಕೂ ಧರ್ಮವೇ? ಹಾಗಾದರೆ ಕೆಂಪು ಹಸಿರು ಬಣ್ಣಗಳನ್ನು ರಂಗಿನಾಟಕ್ಕೆ ಉಪಯೋಗಿಸಿದರೆ ಶ್ರೀ ರಾಮ ಸೇನೆಯವರು ಧಾಳಿ ಮಾಡುವರೇ?'

'ಅದನ್ನು ಅವರಿಗೇ ಕೇಳಿ, ಕೇಸರೀ ಬಣ್ಣ ಹಂಚುವುದಷ್ಟೇ ನಮ್ಮ ಸರಕಾರದ ಧರ್ಮ.'

'ಹೋಳಿ ಹುಣ್ಣಿಮೆಗೆ ಇಷ್ಟೇ ಕಾರ್ಯಕ್ರಮವೇ?'

'ಇಲ್ಲ, ಇನ್ನೂ ಮುಖ್ಯವಾದ ಕಾರ್ಯಕ್ರಮವಿದೆ. ಅದನ್ನು ಸ್ವಲ್ಪ ಸೀಕ್ರೇಟಾಗಿಟ್ಟಿದೀವಿ.'

'ಆಫ್ ದಿ ರೆಕಾರ್ಡ್ ನನಗೆ ಹೇಳ ಬಹುದೇ?'

'ವಿಧಾನ ಸೌಧದಲ್ಲಿ ರತಿ ಮನ್ಮಥರ ವಿಗ್ರಹ ಸ್ಥಾಪನೆ ಮಾಡಿ ಸನ್ಮಾನ್ಯ ಮು.ಮಂ.ಗಳು ಹಾಗೂ ಅಭಿವೃದ್ಧಿ ಮಂತ್ರಿಯವರಿಂದ ಅಗ್ರ ಪೂಜೆ ನೆರವೇರಿಸಲಾಗುವುದು. ಸಂಜೆ ವಿಧಾನ ಸೌಧದ ಎದುರು ಕಾಮ ದಹನ ಕಾರ್ಯಕ್ರಮ. ಇದಕ್ಕಾಗಿ ಐದು ಟನ್ ಶ್ರೀಗಂಧದ ಕೊರಡುಗಳನ್ನು ತರಿಸಲಾಗುವುದು.'

'ಆಹಾ ..., ಅದ್ಭುತ..., ಅನನ್ಯ..., ತಮ್ಮ ಹಿಂದಿನ ಎಲ್ಲಾ ಕಾರ್ಯಕ್ರಮಗಳಿಗಿಂತ ವಿಭಿನ್ನ, ವಿಶೇಷ, ಆದರೆ ಇದನ್ನು ಹಿಡನ್ನಾಗಿಟ್ಟಿರುವುದೇಕೆ? ತಮ್ಮ ಹಿಂದಿನ ಎಲ್ಲ ಕಾರ್ಯಕ್ರಮಗಳಿಗಿಂತ ಹೆಚ್ಚಿನ ಪ್ರಚಾರ ಇದಕ್ಕೆ ದೊರೆಯಬಹುದಲ್ಲವೇ?'

'ನಮಗೆ ಪ್ರಚಾರ ಮುಖ್ಯವಲ್ಲ. ರಾಜ್ಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದು ಜನತೆಯ ಕಲ್ಯಾಣವಾಗಬೇಕು. ಅಂದ್ರೆ ನಮ್ಮ ಕಲ್ಯಾಣವೂ ಆಗುತ್ತೆ. ನಾವೂ ಒಂಥರಾ ಜನ ಅಲ್ವೆ....''

○

ಬಳ್ಳಾರಿ ಬಂದ್ : ಯೆಡ್ಡಿ - ರೆಡ್ಡಿಗಾರು ಮುಖಕ್ಕೆ ಜನರ ಗುದ್ದು

ರಾ[illegible]ು ಶಾಲು ಹೊದ್ದು ನಾನು ರೈತರಪರ ಎಂದು ಅಧಿಕಾರವಹಿಸಿಕೊಂಡ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಹಾವೇರಿಯಲ್ಲಿ ರೈತರ ಮೇಲೆ ಗುಂಡು ಹಾರಿಸಿ, ರೈತರ ಸಾವು-ನೋವಿಗೆ ಕಾರಣವಾಗಿ ನಾವು ಯಾರ ಪರ ಎಂದು ಸಾಬೀತು ಪಡಿಸಿತು. ಈ ಸಂದರ್ಭದಲ್ಲಿ ಸಿಡಿದೆದ್ದು ನಿಂತ ರೈತ ಸಮುದಾಯದ ಎದುರು ಪುನಃ ಹಲ್ಲುಗಿಂಜಿದ ಯಡಿಯೂರಪ್ಪ 'ಇನ್ನೂ ಮುಂದೆ ಎಂದೂ ಸಹ ರೈತರ ಮೇಲೆ ಗುಂಡು ಹಾರಿಸುವುದಿಲ್ಲ' ಎಂದೇ ಸರ್ಕಾರ ಶಪಥ ಮಾಡಿರುವುದಾಗಿ ಪ್ರಕಟಿಸಿ, ಹಾವೇರಿಯ ಘಟನೆ ಆಕಸ್ಮಿಕವಾಗಿತ್ತು ಎಂದು ಜಾರಿಕೊಂಡಿದ್ದರು. ಈಗ ಸಿರಿವಾರದ ಬಳಿ ವಿಮಾನ ನಿಲ್ದಾಣವನ್ನು ವಿರೋಧಿಸಿ ಶಾಂತಿಯುತ ರಸ್ತೆತಡೆ ನಡೆಸುತ್ತಿದ್ದ ಚಾಗನೂರು ರೈತರ ಮೇಲೆ ಪೊಲೀಸರು ಹಲ್ಲೆ ನಡೆಸಿ, ಲಾಠಿ ಚಾರ್ಜ್ ಹಾಗೂ ಗಾಳಿಯಲ್ಲಿ ಗು[illegible] ಹಾರಿಸುವ ಮೂಲಕ ರೈತರ ಹೋರಾಟವನ್ನು ನಾವು ಸಹಿಸುವುದಿಲ್ಲ. ಸಮಯ ಬಂದರೆ ರೈತರ ಮೇಲೆ ಗುಂಡು ಕೂಡಾ ಹಾರಿಸುತ್ತೇವೆ ಎಂದೇ ತೋರಿಸಿಕೊಟ್ಟರು.

ರೈತರು ಅಂದು ಸುಡುಬಿಸಿಲಿನಲ್ಲಿ ರಸ್ತೆ ತಡೆ ನಡೆಸುತ್ತಿದ್ದರೆ, ಅತ್ತ ಹೊಸಪೇಟೆಯಲ್ಲಿ 55ಕೋಟಿ ರೂ.ಗಳ ವಿವಿಧ ಕಾಮಗಾರಿಗಳ ಉದ್ಘಾಟನೆ ಸಮಾರಂಭ ಹಾಗೂ ವಿವಾಹ ಸಮಾರಂಭದಲ್ಲಿ ಭಾಗಿಯಾದ ಸಚಿವರಾದ ಜಿ.ಜನಾರ್ಧನ ರೆಡ್ಡಿ, ಬಿ.ಶ್ರೀರಾಮಲು ಹಾಗೂ ಶಾಸಕರ ದಂಡು ಕನಿಷ್ಠ ರೈತರ ಹೋರಾಟ ನಡೆಯುವಲ್ಲಿ ಜಿಲ್ಲಾಧಿಕಾರಿಗಳನ್ನು ಈ ಹೋರಾಟ ನಡೆಯುವಲ್ಲಿ ಕಳಿಸಿಕೊಡಬೇಕೆನ್ನುವ ವಿವೇಚನೆ ತೋರಲಿಲ್ಲ. ಲಾಠಿ ಚಾರ್ಜ್, ಗಾಳಿಯಲ್ಲಿ ಗುಂಡು ಹಾರಿಸಿದ ಘಟನೆ ನಂತರವಾದರೂ ಆ ಸ್ಥಳಕ್ಕೆ ತೆರಳಿ ಹಲ್ಲೆಗೊಳಗಾದ ರೈತರಿಗೆ ಸಾಂತ್ವನವನ್ನು ಸಹ ಹೇಳದೇ ಸಮಾರಂಭದಲ್ಲಿ ಮುಳುಗಿ, ಪ್ರತಿಭಟನೆ ನ[illegible]ದ ರೈತರನ್ನು ಜೆಡಿಎಸ್, ಕಾಂಗ್ರೆಸ್ ಪುಢಾರಿಗಳು ಎಂದು ಕರೆದು ರೈತ ಸಮುದಾಯಕ್ಕೆ ಅ[illegible]ಾನ ಮಾಡಿದರು.

ರೈತರ ಹೋರಾಟ ಬಗ್ಗು ಬಡೆಯಲು ಪೂರ್ವ ಯೋಜಿತ

ರೈತರು ರಸ್ತೆತಡೆ ನಡೆಸುವುದನ್ನು ತಡೆಯಲು ಜಿಲ್ಲಾಡಳಿತ ಪೂರ್ವ ಯೋಜನೆ ರೂಪಿಸಿತ್ತು ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇವೆ. ಮಹಿಳೆಯರು, ಮಕ್ಕಳು ಸೇರಿದಂತೆ ಪ್ರತಿಭಟನೆ ನಿರತ ರೈತ ಸಮೂಹದ ಬಳಿ 200ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಆಣಿನೆರಿಸಿದ್ದು ಇದಕ್ಕೊಂದು ತಾಜಾ ಉದಾಹರಣೆ. ಪ್ರತಿಭಟನೆ ಸ್ಥಳಕ್ಕೆ ಜಿಲ್ಲಾಧಿಕಾರಿ ಬರಬೇಕೆಂದು ಪಟ್ಟು ಹಿಡಿದಾಗ ರಸ್ತೆ ತೆರವು ಮಾಡುವ ಉದ್ದೇಶದ ನೆಪದಲ್ಲಿ ರೈತರ ಮೇಲೆ ಏಕಾಏಕಿ ಲಾಠಿ



ಪ್ರಹಾರ ನಡೆಸಲಾಯಿತು. ಅಮಾಯಕ ರೈತರನ್ನು ಬಂಧಿಸಲಾಯಿತು. ಇದಕ್ಕೂ ಜಗ್ಗದ ಪ್ರತಿಭಟನೆಕಾರರನ್ನು ಮಹಿಳೆ, ಮಕ್ಕಳು, ವೃದ್ಧರು ಎಂದು ನೋಡದೇ ಹಿಗ್ಗಾಮುಗ್ಗಾ ಥಳಿಸಲಾಯಿತು. ಗುಂಡು ಹಾರಿಸಿ ರೈತರಲ್ಲಿ ಭಯ ಭೀತಿ ವಾತವರಣ ಸೃಷ್ಟಿಸಲಾಯಿತು. ಈಗ ಜಿಲ್ಲಾಡಳಿತ, ಎಸ್ಪಿ ಇಡೀ ಘಟನೆಯನ್ನು ಪೂರ್ವ ನಿಯೋಜಿತ ಎಂದು ಹೇಳುವ ಮೂಲಕ ತಮ್ಮ ಪೂರ್ವ ನಿಯೋಜಿತ ದಮನವನ್ನು ಮುಚ್ಚಿ ಹಾಕಿ ಜನಾರ್ಧನ ರೆಡ್ಡಿ ಪಟಾಲಂನಂತೆ ಖ್ಯಾತೆ ತೆಗೆದಿದೆ. ಹೀಗಿದೆ ಒಂದು ಸರ್ಕಾರದ ಯಂತ್ರ.

ಹೋರಾಟ, ಪ್ರತಿಭಟನೆ ಎನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹಳ ಮುಖ್ಯ ಎನ್ನುವ ಸಂಗತಿಯನ್ನೇ ಅರಿಯದ ಈ ಸಚಿವರ ದಂಡು, ಊಳಿಗಮಾನ್ಯ ದೊರೆಗಳಂತೆ ಇಡೀ ರಾಜ್ಯದ ಅರಸರು ತಾವೇ ಎಂದು ಭಾವಿಸಿದ್ದಾರೆ.

ಇವರ ಈ ನಡುವಳಿಕೆಗಳು ಸರ್ಕಾರವನ್ನು ಎಂತಹ ಸ್ಥಿತಿಗೆ ತಳ್ಳಲ್ಪಟ್ಟಿದೆ ಎಂದರೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆಯು ತಮ್ಮ ಖಾಸಗಿ ಕಂಪನಿ ಎಂದೇ ಇವರು ಭಾವಿಸಿದ್ದಾರೆ. ಮಾತು ಕೇಳುವ ಜಿಲ್ಲಾಧಿಕಾರಿ, ಎಸ್ಪಿ ಇರಬೇಕು ಎಂಬುದು ಇವರ ಮೊದಲ ಅಜೆಂಡಾ. ಜಿಲ್ಲಾಡಳಿತವನ್ನೇ ತಮ್ಮ ಕಾಲಬುಡದಲ್ಲಿ ಇಟ್ಟುಕೊಂಡರೆ ಉಳಿದ ಅಧಿಕಾರಿಗಳ ವರ್ಗ ಇವರೆದರು ಭಕ್ಷೀಸು ನಿರೀಕ್ಷಿಸುತ್ತಾ ಹಲ್ಲುಗಿಂಜುತ್ತಾ ಇರಬೇಕೆನ್ನುವುದು ಇವರ ಇರಾದೆಯಾಗಿದೆ. ಈ ಹಿಂದೆ ಕುಮಾರಸ್ವಾಮಿ ಸರ್ಕಾರವಿದ್ದಾಗ ಎಸ್ಪಿ ವರ್ಗಾವಣೆಗೆ ಒತ್ತಾಯಿಸಿದ ಜನಾರ್ಧನ ರೆಡ್ಡಿ ಇದಕ್ಕೆ ಕುಮಾರಸ್ವಾಮಿ ಒಪ್ಪದೇ ಇದ್ದಾಗ ಅವರ ವಿರುದ್ಧ ಸಿಡಿ ಹಗರಣದ ಸುದ್ದಿಗೆ ಕಾರಣವಾಗಿದ್ದು ಇದೇ ಕಾರಣದಿಂದ. ಈಗ ಯಡಿಯೂರಪ್ಪ ಸರ್ಕಾರ ಹೇಳಿ, ಕೇಳಿ ಗಣಿಧಣಿಗಳ ಕೃಪಾಪೋಷಿತ ಸರ್ಕಾರ. ಜನಾರ್ಧನ ರೆಡ್ಡಿಯಂತೂ ಈಗ ಮುಖ್ಯಮಂತ್ರಿಯ ಗತ್ತಿನಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಯಡಿಯೂರಪ್ಪ ಏನಾದರೂ ಬಾಲ ಬಿಚ್ಚಿದರೆ ಅವರ ವಿರುದ್ಧವೇ ಶಾಸಕರನ್ನು ಎತ್ತಿಕಟ್ಟುವಷ್ಟು ಶಾಸಕರ ದಂಡನ್ನು ತಮ್ಮ ಬೆನ್ನ ಹಿಂದೆ ಇಟ್ಟುಕೊಂಡಿದ್ದಾರೆ. ಆಪರೇಷನ್ ಕಮಲ ಎನ್ನುವ ಪ್ರಜಾಪ್ರಭುತ್ವದ ಅಣಕವಾಗಿರುವ ಅಸಹ್ಯಕರ ವಾತಾವರಣವನ್ನು ಸೃಷ್ಟಿ ಮಾಡಿದ್ದೇ ಈ ಗಣಿಧಣಿಗಳಾಗಿದ್ದಾರೆ.

ಚಾಗನೂರು ರಸ್ತೆ ತಡೆ ಸಂದರ್ಭದಲ್ಲಿ ಸ್ಥಳದಲ್ಲಿ ಇಲ್ಲದ ಜೆಡಿಎಸ್ ಜಿಲ್ಲಾಧ್ಯಕ್ಷ ಪ್ರತಾಪ ರೆಡ್ಡಿ ವಿರುದ್ಧ

ಪುಟ 7 ಕ್ಕೆ

ಹೋರಾಟಗಾರರ ಮೇಲೆ ಕೊಲೆಯತ್ನ ಮೊಕದ್ದಮೆ ದಾಖಲು, ಅಟ್ರಾಸಿಟಿ ಕೇಸ್ ಹಾಕುವ ಪ್ರಯತ್ನ, ಬೆದರಿಕೆ, ದಬಾವಣೆ ತಂತ್ರ, ಮೆರವಣಿಗೆಗೆ ಅನುಮತಿ ನಿರಾಕರಣೆ, ಶಾಮಿಯಾನ ಹಾಕಲೂ ಬಿಡದ ಒತ್ತಡ ತಂತ್ರ, ಜಿಲ್ಲಾಡಳಿತ, ಪೊಲೀಸ್ ಯಂತ್ರದ ಅಸೀಮ ದುರ್ಬಳಕೆ, ಬಂದ್ ವಿಫಲಗೊಳಿಸುವ ಅತೀವ ಪ್ರಯತ್ನ.... ರಾಜ್ಯ ಬಿಜೆಪಿ ಸರ್ಕಾರ, ರೆಡ್ಡಿ ಕುಟುಂಬ, ಜಿಲ್ಲಾಡಳಿತ ಸೇರಿ ಇದನ್ನೆಲ್ಲಾ ನಡೆಸಿದಾಗ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಬಂದ್ ಕರೆ ವಾಪಸ್ ಪಡೆಯುವ ಹಂತಕ್ಕೂ ಹೋಗಿದ್ದರು. ಆದರೆ ಸಿಪಿಐ(ಎಂ), ಸಿಪಿಐ ಮುಂತಾದ ಪಕ್ಷಗಳ ದೃಢತೆಯಿಂದಾಗಿ ಹಾಗಾಗಲಿಲ್ಲ. ಆದರೆ ಜನತೆ... ಬಳ್ಳಾರಿ ಮಾತ್ರವಲ್ಲ ಇಡೀ ಜಿಲ್ಲೆಯಾದ್ಯಂತ ಬಂದ್‌ಗೆ ಅಪೂರ್ವ ಯಶಸ್ಸು ನೀಡಿದ್ದಾರೆ. ಉದ್ದೇಶಿತ ವಿಮಾನ ನಿಲ್ದಾಣಕ್ಕಾಗಿ ಭೂಮಿ ವಶ ಜನರಿಗಾಗಿ ಅಲ್ಲ - ರೆಡ್ಡಿ ಕುಟುಂಬದ ಹಿತಕ್ಕಾಗಿ ಎಂಬುದು ಅವರಿಗೆ ಗೊತ್ತಾಗಿದೆ. ಜಿಲ್ಲೆಯಲ್ಲೆಲ್ಲಾ ಬಿಜೆಪಿ ಶಾಕರೇ ಇದ್ದರೂ ಬಂದ್ ಅಪೂರ್ವ ಯಶಸ್ಸು ಕಂಡಿರುವುದು ನೋಡಿದರೆ ಬಿಜೆಪಿ ಸರ್ಕಾರದ ವಿರುದ್ಧ ಜನಾಭಿಪ್ರಾಯ ಹೇಗಿದೆ ಎಂಬುದಕ್ಕೂ ಅದು ಸಾಕ್ಷಿಯಾಗಿದೆ.



ಪರುಶರಾಮ್ ಕಲಾಲ್

ಚೆಲುವ ಕನ್ನಡ ನಾಡಿನ ನೆಲ, ಜಲ, ಸುವರ್ಣ ಸೃಷ್ಟಿ ಯಾರಿಗೆ?

ಸಚಿವ ಜಿ.ಜನಾರ್ಧನ ರೆಡ್ಡಿಗಾರು ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಳ್ಳಾರಿ ಸಮೀಪದ ಸಿರಿವಾರದ ಬಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಶತಸಿದ್ಧ ಎಂದೇ ಘೋಷಿಸಿದ್ದಾರೆ. ಇದನ್ನು ಯಾರು ತಪ್ಪಿಸಲು ಸಾಧ್ಯವಿಲ್ಲ ಎಂದೇ ಹೂಂಕರಿಸಿದ್ದಾರೆ.

ಯಾಕೇ ಇಷ್ಟು ಅವಸರ? ಪ್ರತಿಷ್ಠೆಯ ವಿಷಯವಾಗಿ ಇದನ್ನು ಯಾಕೇ ತೆಗೆದುಕೊಂಡಿದ್ದಾರೆಂಬುದಕ್ಕೆ ಗಣಿ ಧಣಿ ಜಿ.ಜನಾರ್ಧನ ರೆಡ್ಡಿ ದೊಡ್ಡ ರೀತಿಯಲ್ಲಿ ಸ್ಥಾಪಿಸಬೇಕೆಂದಿರುವ ಬ್ರಹ್ಮಣಿ ಉಕ್ಕು ಉದ್ಯಮವೇ ಕಾರಣವಾಗಿದೆ ಎಂಬ ಅಂಶ ಬಯಲಾಗಿದೆ.

ಆಂಧ್ರದಲ್ಲಿ ಸ್ಥಾಪಿತವಾಗಲಿರುವ ಈ ಬ್ರಹ್ಮಣಿ ಉಕ್ಕು ಉದ್ಯಮದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಪುತ್ರನೂ ಭಾಗಿದಾರನಿದ್ದಾನೆಂದು ಹೇಳಲಾಗುತ್ತಿದೆ. ಕರ್ನಾಟಕದಲ್ಲಿ ಕೋಮುವಾದಿ ಸರ್ಕಾರ ಆಂಧ್ರದ ಕಾಂಗ್ರೆಸ್ ಜಾತ್ಯಾತೀತ ಸರ್ಕಾರ ಎರಡೂ ಸೇರಿ ಕೋಜಾ ಸರ್ಕಾರವೊಂದು ಗಡಿ ಭಾಗದಲ್ಲಿ ಅಸ್ತಿತ್ವಕ್ಕೆ ಬಂದಿದೆ.

ಕನ್ನಡದ ನೆಲ, ಜಲ ಎರಡನ್ನೂ ನಂಬಿಕೊಂಡೇ ಈ ಉದ್ಯಮ ಅಸ್ತಿತ್ವಕ್ಕೆ ಬರಲಿದೆ. ಈ ಉದ್ಯಮಕ್ಕೆ ಅನುಕೂಲವಾಗಲೆಂದೆ 'ಚೆಲುವ ಕನ್ನಡ ನಾಡಿನ' ನೆಲವನ್ನು ಅಗೆದು, ಸುವರ್ಣ ಸೃಷ್ಟಿ ಮಾಡಿಕೊಳ್ಳುತ್ತಿರುವ ಜನಾರ್ಧನ ರೆಡ್ಡಿಗಾರು ಇದಕ್ಕಾಗಿ ಕನ್ನಡ ನಾಡಿನ ಫಲವತ್ತಾದ ಒಂದು ಸಾವಿರ ಎಕರೆ ನೀರಾವರಿ ಭೂಮಿಯನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವ ಮೂಲಕ ರೈತರನ್ನು ಒಕ್ಕಲೆಬ್ಬಿಸಿ, ಇಡೀ ನೆಲವನ್ನೇ ಬಂಜರು ಮಾಡಬೇಕೆಂದು ಕೊಂಡಿದ್ದಾರೆ. ಒಂದು ಕಡೆ ಈ ನೆಲ ಬಂಜರಾದರೆ ಮಿಗುತಾಯವಾಗುವ ತುಂಗಾಭದ್ರಾ ಜಲಾಶಯದ ನೀರನ್ನು ಸಹ ಉದ್ಯಮಕ್ಕೆ ಬಳಸಿಕೊಳ್ಳುವ ಹುನ್ನಾರ ಇದರ ಹಿಂದೆ ಇದೆ ಎಂಬ ಸಂಶಯ ಉಂಟಾಗಿದೆ. ಕನ್ನಡದ ನೆಲ, ಜಲವನ್ನು ಲೂಟಿ ಮಾಡುತ್ತಾ ಒಂದು ಎಕರೆಯನ್ನು ನೀರಾವರಿ ಮಾಡದ ರಾಜ್ಯ ಬಿಜೆಪಿ ಸರ್ಕಾರ ನೀರಾವರಿ ಭೂಮಿಯನ್ನು ಸಹ ಕಬಳಿಸಲು ಮುಂದಾಗಿದೆ. ಇದು ಕನ್ನಡ ನೆಲದ ಹರಾಜು ಎಂದು ಕರೆಯಬಹುದಾದ ವಿದ್ಯಮಾನವಾಗಿದೆ. ವಿಮಾನ ನಿಲ್ದಾಣದ ಬಗ್ಗೆ ಯಡಿಯೂರಪ್ಪ ಅವರಿಗಿರುವ ಉತ್ಸಾಹ ನೋಡಿದರೆ ಬ್ರಹ್ಮಣಿ ಉದ್ಯಮದಲ್ಲಿ ಅವರದೂ ಪಾಲು ಇರಬಹುದು ಎಂಬ ಸಂಶಯ ಮೂಡುತ್ತದೆ. ಲೂಟಿಕೋರರಿಗೆ ಧರ್ಮ, ಜಾತಿ ಎಲ್ಲಿ? ಇವರಿಗೆ ಪಕ್ಷಗಳಲ್ಲಿ ಬೇಧವುಂಟೇ?

ದಕ್ಷಿಣಕನ್ನಡ

ಜಾಗತಿಕ ಆರ್ಥಿಕ ಹಿನ್ನಡೆಯ ಬಿಸಿ ಕರಾವಳಿಯನ್ನು ಬಾಧಿಸತೊಡಗಿದೆ. ಆರ್ಥಿಕತೆಯೇ ಬುಡಮೇಲಾಗುವ ಆತಂಕ ಆವರಿಸಿದೆ. ಆದರೆ ಇವಾವುಗಳು ಕಾಣದಂತೆ ಸಂಘ ಪರಿವಾರ ತನ್ನ ಕೃತ್ಯಗಳನ್ನು ಮುಂದುವರಿಸಿದೆ. ಹಾಗಾದರೆ ಕರಾವಳಿಯ ಭವಿಷ್ಯವೇನು?

ಜನರ ಸಂಕಟಗಳ ಬಗೆಗೆ ಸೊಲ್ಲೆತ್ತದ ಕೇಸರೀಪಡೆ

ಮಂಗಳೂರಿನ ಕಷ್ಟಕಾಲ ದೂರವಾಗುತ್ತಿದೆ. ಸಂಘ ಪರಿವಾರ ಹರಡಿರುವ ಕತ್ತಲು ಕಳೆದು ನಾಳೆ ಒಳ್ಳೆಯ ದಿನಗಳು ಮರಳಿ ಬರುತ್ತದೆ. ಶಾಲಾ ಕಾಲೇಜಿನಲ್ಲಿ ಬ್ಯಾರಿಗಳ, ತುಳುವರ, ಪೊರ್ಬು (ಕ್ರಿಶ್ಚಿಯನ್)ಗಳ ಮಕ್ಕಳು ನಲಿಯುತ್ತಾ, ಹಾಡುತ್ತಾ, ಕಲಿಯುವ ಆ ದಿನಗಳು ಮತ್ತೆ ಆರಂಭವಾಗುತ್ತದೆ ಎಂಬ ನಿರೀಕ್ಷೆಯು ಇಲ್ಲಿನ ಜನಪರ ಹೋರಾಟಗಾರರು, ವಿದ್ಯಾರ್ಥಿ ಯುವಜನ ಸಂಘಟನೆಗಳು, ಎಡಪಂಥೀಯ ಚಳುವಳಿಗಾರರು ಕೋಮುವಾದದ ವಿರುದ್ಧ ನಿತ್ಯ ಹೋರಾಟವನ್ನು ನಡೆಸುತ್ತಿದ್ದರೆ ನರಮಾಂಸದ ರುಚಿ ಹತ್ತಿರುವ ರಕ್ಕಸರಂತಿರುವ ಸಂಘ ಪರಿವಾರಿಗಳು ತಮ್ಮ ಎಂದಿನ ಕೃತ್ಯವನ್ನು ಯಾವುದೇ ಹಿಂಜರಿಕೆ, ನಾಚಿಕೆಯಿಲ್ಲದೆ ಮುಂದುವರಿಯುತ್ತಿದ್ದಾರೆ. ರಾಷ್ಟ್ರೀಯ ಮಾಧ್ಯಮಗಳಲ್ಲಿ ನಿತ್ಯ ಸುದ್ದಿಯಾಗುತ್ತಿರುವ ಮಂಗಳೂರಿನ ತಾಲಿಬಾನ್‌ಗಿರಿ, ಗೃಹ ಸಚಿವರ ರಾಜೀನಾಮೆಗೆ ಆಗ್ರಹ, ಕೇಂದ್ರ ಸರಕಾರದ ನೋಟೀಸ್, ರಾಜ್ಯಾದ್ಯಂತ ಜನತೆಯ ವ್ಯಾಪಕ ಅಸಮಾಧಾನದಿಂದ ಮುಜುಗರಕ್ಕೊಳಗಾಗುತ್ತಿರುವ ಸರಕಾರ, ಈ ಬೆಳವಣಿಗೆಗಳಿಂದಾಗಿ ಲೋಕಸಭಾ ಚುನಾವಣೆವರೆಗಾದರೂ ಸಂಘ ಪರಿವಾರ ಸುಮ್ಮನಾದಿತು. ಐ.ಜಿ.ಪಿ, ಎಸ್.ಪಿ.ಯ ವರ್ಗಾವಣೆಗಳು ಇದರ ಸೂಚನೆ ಎಂದು ಅಂದುಕೊಳ್ಳುತ್ತಿರುವಾಗಲೇ ಬಜರಂಗಿಗಳು ತಮ್ಮ ಎಂದಿನ ದಾಳಿಕೋರ ಕಾರ್ಯಾಚರಣೆಯನ್ನು ಮಂಗಳೂರು ಬೀದಿಗಳಲ್ಲಿ ಮುಂದುವರೆಸಿದ್ದಾರೆ.

ಆರ್ಥಿಕ ಹಿನ್ನಡೆಯ ಬಿಸಿ

ಜಾಗತಿಕ, ಆರ್ಥಿಕ ಹಿನ್ನಡೆಯು ಬಿಸಿ ಕರಾವಳಿಯನ್ನು ನಿಧಾನಕ್ಕೆ ಆವರಿಸುತ್ತಿದೆ. ಮೇಲ್ನೋಟಕ್ಕೆ ಅಮೇರಿಕಾದಲ್ಲಿ ಆರಂಭವಾದ ಮಹಾಕುಸಿತದ ಬಿಸಿ ಮಂಗಳೂರಿನ ಮೇಲೆ ಯಾವುದೇ ಪರಿಣಾಮವನ್ನು ಬೀರಿಲ್ಲ ಎಂಬಂತೆ ಗೋಚರಿಸುತ್ತಿದ್ದರೂ ಜನರ ನಿತ್ಯ ಬದುಕಿನಲ್ಲಿ ತಳಮಳಗಳು ಆರಂಭವಾಗಿರುವುದಂತೂ ಸತ್ಯ. ಭರದಿಂದ ಸಾಗುತ್ತಿದ್ದ ಕಟ್ಟಡ ನಿರ್ಮಾಣದ ಉದ್ಯಮ ತನ್ನ ಬಿರುಸನ್ನು ಕಳೆದುಕೊಂಡು ದುಡಿಮೆಗಾರರ ವೇತನಕ್ಕೆ ಕತ್ತರಿ ಬೀಳತೊಡಗಿದೆ. ನಿರ್ಮಾಣ ಉದ್ಯಮಕ್ಕೆ ಸಂಬಂಧಪಟ್ಟ ಮಾರುಕಟ್ಟೆಯಲ್ಲಿ ವ್ಯವಹಾರ ಕುಸಿತ ಕಾಣತೊಡಗಿದೆ. ಐಟಿ ಉದ್ಯೋಗಿಗಳಾದ ಮೇಲ್ವರ್ಗದ ಮಕ್ಕಳ ತಲೆಯ ಮೇಲೆ ತೂಗುಕತ್ತಿ ತೂಗಲಾರಂಭಿಸಿದೆ. ಕೆಲವರು ಉದ್ಯೋಗ ಕಳಕೊಂಡಿದ್ದರೆ ಇನ್ನೂ ಕೆಲವರು ಸಂಬಳ ಸವಲತ್ತುಗಳನ್ನು ಕಳಕೊಳ್ಳುತ್ತಿದ್ದಾರೆ.

ಕೊಲ್ಲಿ ಯಲ್ಲಿ...

ಕರಾವಳಿಯ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡಿರುವ, ಜನಸಾಮಾನ್ಯರ ಮನೆಗಳಲ್ಲಿ ನಗು ಮೂಡಿಸಲು ಕಾರಣವಾಗಿದ್ದ, ದೊಡ್ಡ ಸಂಖ್ಯೆಯ ಬಡವರ ಮನೆಗಳನ್ನು ಮಧ್ಯಮವರ್ಗದ ಮಟ್ಟಕ್ಕೇರಿಸಿದ ಮದುವೆ, ಮುಂಜಿ, ಮಾರುಕಟ್ಟೆಗಳು ಅಬ್ಬರದಿಂದ ನಡೆಯಲು ಕಾರಣವಾಗಿದ್ದ ಕೊಲ್ಲಿ ರಾಷ್ಟ್ರಗಳಲ್ಲಿ ದುಡಿಯುತ್ತಿರುವ ಇಲ್ಲಿನ ಅಸಂಖ್ಯಾತ ಜನರ ದುಡಿಮೆಯ ಮೇಲೆ ಆರ್ಥಿಕ ಕುಸಿತದ ಕಾರ್ಮೋಡ ಕವಿಯತೊಡಗಿದೆ. ಮೀನುಗಾರಿಕೆ ರಫ್ತು ಉದ್ಯಮಕ್ಕೂ ಇದರ ಬಿಸಿ ತಟ್ಟಗೊಡಗಿದ್ದು ಸೂಕ್ತ ಬೆಲೆ ಸಿಗದೆ ಮೀನುಗಾರಿಕಾ ಉದ್ಯಮ ಚಡಪಡಿಸತೊಡಗಿದೆ. ಅಧಿಕ ಬಡ್ಡಿಗೆ ಬೇಕಾಬಿಟ್ಟಿ ಸಾಲ ನೀಡುತ್ತಿದ್ದ ಖಾಸಗಿ ಬ್ಯಾಂಕ್, ಫೈನಾನ್ಸ್‌ಗಳು ತಮ್ಮ ವ್ಯವಹಾರಗಳನ್ನು ನಿಧಾನಗೊಳಿಸತೊಡಗಿದ್ದು ಸಂಪೂರ್ಣ ಸ್ಥಗಿತಗೊಳ್ಳುವ ಭೀತಿಯನ್ನು ಎದುರಿಸುತ್ತಿದೆ. ಇದರಲ್ಲಿ ದುಡಿಯುತ್ತಿದ್ದ ಯುವಜನರು ಪರ್ಯಾಯ ದಾರಿ ಕಾಣದೆ ಕಂಗಾಲಾಗಿದ್ದಾರೆ. ಒಟ್ಟು ಕರಾವಳಿಯ ಆರ್ಥಿಕತೆ ಸಂಪೂರ್ಣ



ಬುಡಮೇಲಾಗುವ ಬೀತಿಯನ್ನು ಎದುರಿಸುತ್ತಿದೆ.

'ಉನ್ಮಾದ' ತಂತ್ರ

ಇಂತಹ ಸಂದಿಗ್ಧ ಸಂದರ್ಭದಲ್ಲಿ ಜನತೆಯ ಮೇಲೆ ಆರ್ಥಿಕ ಕುಸಿತದಿಂದಾಗುವ ಪರಿಣಾಮಗಳನ್ನು ತಡೆಗಟ್ಟಿ ಪರ್ಯಾಯ ಉದ್ಯೋಗ ಆದಾಯದ ಮೂಲಗಳನ್ನು ಸೃಷ್ಟಿಸಲು ಗಂಭೀರ ಪ್ರಯತ್ನ ನಡೆಸಬೇಕಾಗಿದ್ದ ಆಳುವ ವರ್ಗ ಹತಾಶ ಯುವಜನರನ್ನು ಮತೀಯ ಉನ್ಮಾದದ ಅಮಲಿನಲ್ಲಿ ದಾರಿ ತಪ್ಪಿಸಿ ತಾನು ಬಚಾವಾಗುವ ತಂತ್ರವನ್ನು ರೂಪಿಸುತ್ತಿದೆ. ಇದರ ಭಾಗವಾಗಿ ಮಂಗಳೂರಿನ ಹಿಂದುತ್ವವಾದಿಗಳ ದಾಳಿಕೋರ ಸಂಸ್ಕೃತಿಯ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಖಂಡನೆಗಳು ವ್ಯಕ್ತವಾಗುತ್ತಿದ್ದರೂ ಮಂಗಳೂರಿನ ಬೀದಿಗಳಲ್ಲಿ ಬಜರಂಗಿ ಪುಂಡಾಟ ಎಗ್ಗಿಲ್ಲದೆ ಮುಂದುವರೆಯುತ್ತಿದೆ.

ಎಗ್ಗಿಲ್ಲದ ದಾಳಿ

ಹಿಂದುತ್ವದ ತಾಲಿಬಾನ್‌ಗಳ ಧರ್ಮ ರಕ್ಷಣೆಯವರೆಗೆ ಸಿಲುಕಿ ದಾರುಣ ಸಾವನ್ನಪ್ಪಿದ ಶಾಲಾ ಬಾಲಕಿ ಅಶ್ವಿನಿಯ ಚಿತೆಯ ಬೆಂಕಿ ಆರುವ ಮುನ್ನವೇ ಬೆಂಗಳೂರಿನಲ್ಲಿ ನಡೆಯುವ ಅಂತರ ಕಾಲೇಜು ಸ್ಪರ್ಧೆಗೆ ಹೊರಟ ನಗರದ ಪ್ರತಿಷ್ಠಿತ ತಾಂತ್ರಿಕ ಕಾಲೇಜು ವಿದ್ಯಾರ್ಥಿಗಳ ಬಸ್ ತಡೆಯಲಾಗಿದೆ. ಹಿಂದೂ ಮುಸ್ಲಿಂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಜೊತೆಯಾಗಿ ಪ್ರಯಾಣಿಸಬಾರದು ಎಂದು ಆದೇಶಿಸಿ ಪ್ರಯಾಣ ತಡೆದು ಬಸ್ ಅನ್ನು ವಾಪಾಸು ಕಳಿಹಿಸಲಾಗಿದೆ. ಮಂಗಳೂರಿನ ಹೃದಯ ಭಾಗದಲ್ಲಿರುವ ಜ್ಯೂಸ್ ಜಂಕ್ಷನ್‌ನಲ್ಲಿ ಸಹಪಾಠಿ ವಿದ್ಯಾರ್ಥಿಗಳು ಜೊತೆಯಾಗಿ ಜ್ಯೂಸ್ ಕುಡಿಯುತ್ತಿದ್ದ ಸಂದರ್ಭದಲ್ಲಿ ದಾಳಿ ನಡೆಸಲಾಗಿದೆ. ಮುಸ್ಲಿಂ ವಿದ್ಯಾರ್ಥಿಗಳ ಜೊತೆಗೆ ಜ್ಯೂಸ್ ಕುಡಿದ ತಪ್ಪಿಗೆ ಹಿಂದೂ ವಿದ್ಯಾರ್ಥಿನಿಯರಿಗೂ, ಹಿಂದೂ ವಿದ್ಯಾರ್ಥಿನಿಯರಿಗೆ ಜ್ಯೂಸ್ ಕುಡಿಸಿದ್ದಾರೆ ಎಂದು ಆರೋಪಿಸಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಹಲ್ಲೆ ನಡೆಸಿ ಪೊಲೀಸರಿಗೆ ಒಪ್ಪಿಸಲಾಗಿದೆ. ಅಡಿಶನಲ್ ಎಸ್ಪಿ ಸ್ಥಳಕ್ಕೆ ಭೇಟಿ ನೀಡಿದ್ದರೂ ಪೊಲೀಸರು ಮಾತ್ರ ಈವರೆಗೆ ದಾಳಿಕೋರರ ಮೇಲೆ ಮೊಕದ್ದಮೆ ದಾಖಲಿಸಿಲ್ಲ. ಅದೇ ದಿವಸ ಪುತ್ತೂರಿನಲ್ಲಿ ಕಾರ್ಯಕ್ರಮವೊಂದರ ಪೋಸ್ಟರ್ ಅಂಟಿಸುತ್ತಿದ್ದ ಮುಸ್ಲಿಂ ವಿದ್ಯಾರ್ಥಿಗಳಿಬ್ಬರ ಮೇಲೆ 30 ಕ್ಕೂ ಹೆಚ್ಚು ಬಜರಂಗಿ ಗೂಂಡಾಗಳು ಅಮಾನುಷ ಹಲ್ಲೆ ನಡೆಸಿದ್ದಾರೆ.

ಪೋಸ್ಟರ್ ಅಂಟಿಸುವ ಹಕ್ಕಿಲ್ಲ

ನೀವೆಲ್ಲಾ ಭಯೋತ್ಪಾದಕರು, ನಿಮಗೆ ಪೋಸ್ಟರ್ ಅಂಟಿಸುವ, ಕಾರ್ಯಕ್ರಮ ನಡೆಸುವ ಯಾವುದೇ ಹಕ್ಕಿಲ್ಲ ಎಂದು ನಿಂದಿಸಲಾಗಿದೆ. ಪುತ್ತೂರು, ಸುಳ್ಯದಂತಹ ದ.ಕ. ಜಿಲ್ಲೆಯ ಗ್ರಾಮೀಣ ಭಾಗ ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ಈ ರೀತಿ ದೊಡ್ಡ ದೊಡ್ಡ ಗುಂಪುಗಳು ನಿರ್ಜೀವ ವಸ್ತುಗಳಿಗೆ ಬಡಿದಂತೆ ಬಡಿಯುವುದು ಒಂದೆರಡು ತಿಂಗಳಿನಿಂದ ನಿರಂತರವಾಗಿ ನಡೆಯುತ್ತಿದೆ. ಪೊಲೀಸರು ಪೆಟ್ಟು ತಿಂದು ವಿದ್ಯಾರ್ಥಿಗಳನ್ನೇ ಬೆದರಿಸುತ್ತಾರೆಯೇ ಹೊರತು ದಾಳಿಕೋರರ ಮೇಲೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ದಿನನಿತ್ಯ ಘಟಿಸುವ ಇಂತಹ ಕೃತ್ಯಗಳನ್ನು ಕಂಡು ಜನಸಾಮಾನ್ಯರು ರೋಸಿಹೋಗಿದ್ದಾರೆ. ತಮ್ಮ ನಿತ್ಯ ಬದುಕಿನ ಜ್ವಲಂತ ಸಮಸ್ಯೆಗಳ ಬಗ್ಗೆ ಯಾರೊಂದಿಗೂ ಹೇಳಿಕೊಳ್ಳಲಾರದೆ ಪರಿತಪಿಸುತ್ತಿದ್ದಾರೆ.

ಭೀಕರತೆ ಬಿಜೃಂಭಣೆ

ಆರ್ಥಿಕ ಕುಸಿತದ ಭೀಕರತೆ, ಜನರ ಜ್ವಲಂ[illegible] ಸಮಸ್ಯೆಗಳು ಸಮಸ್ಯೆಯೇ ಅಲ್ಲ ಅನ್ನುವಂತೆ [illegible] ಹಿಂದೂ ಜಾಗೃತಿ ಸಭೆಗಳನ್ನು ಜಿಲ್ಲೆಯಾದ್ಯಂ[illegible] ವಿಜೃಂಭಣೆಯಿಂದ ನಡೆಸುತ್ತಿದೆ. ಆ ಸಭೆಗಳ[illegible] ಹಿಂದೂ ಜಾಗರಣಾ ವೇದಿಕೆಯ 'ನರಭಕ್ಷ[illegible] ಜಗದೀಶ ಕಾರಂತ, ಸತ್ಯಜಿತ್ ಸುರತ್ಕಲ್‌ನಂತವ[illegible] ಬೆಂಕಿ ಕಾರುತ್ತಿದ್ದಾರೆ. ಜಿಲ್ಲೆಯ ಹಿಂದೂಗಳ ಬದುಕಿ[illegible] ಎಲ್ಲಾ ಸಂಕಷ್ಟಗಳಿಗೆ ಬ್ಯಾರಿ (ಮುಸ್ಲಿಂ) ಗಳೇ ಕಾರಣ ಎಂದು ಆರ್ಭಟಿಸುತ್ತಿದ್ದಾರೆ. ಮುಸ್ಲಿಂರನ್ನು ಅವಾಚ್ಯವಾಗಿ ನಿಂದಿಸಿ ಅತಂತ್ರರಾಗಿರುವ ಹಿಂದೂ ಯುವಕರ ತಲೆಗೆ ಹಿಂದುತ್ವದ ಅಫೀಮನ್ನು ತುಂಬಿ[illegible] ಮುಸ್ಲಿಮರ ವಿರುದ್ಧ ಬೀದಿಗಿಳಿಸುತ್ತಿದ್ದಾರೆ. ಇದೆ[illegible] ಭಾಷಣದ ತುಣುಕುಗಳನ್ನು ರೆಕಾರ್ಡ್[illegible] ಮಾಡಿಕೊಂಡಿರುವ ಮುಸ್ಲಿಂ ತೀವ್ರವಾದಿ ಗುಂಪುಗಳು ಮುಸ್ಲಿಂ ಹತಾಶ ಯುವಕರ ಮೊಬೈಲ್‌ಗಳಿಗೆ ರವಾನಿಸಿ ಅವರನ್ನು ಉದ್ರೇಕಿಸುವ ಕೆಲಸವನ್ನು ನಡೆಸುತ್ತಿದ್ದಾರೆ. ವೈಯಕ್ತಿಕ ಕಾರಣಗಳಿಗೆ ಹತ್ಯೆಗೀಡಾದ ಬ[illegible] ಪುಂಡರುಗಳಾದ ಸರಣಿ ಕೊಲೆಗಳ ಆರೋಪಿಗಳಾದ ಕಡ್ಲೆ ಮಂಜು, ಕ್ಯಾಂಡಲ್ ಸಂತು ಇವರನ್ನು ಹಿಂದೂ ಧರ್ಮದ ರಕ್ಷಣೆಗಾಗಿ ಹುತಾತ್ಮರಾದವರು ಎಂಬಂತೆ ಬಿಂಬಿಸಿ ಪತ್ರಿಕೆಗಳಿಗೆ ಜಾಹಿರಾತು ಕೊಟ್ಟು ವಿಜೃಂಭಿಸುವ ಕೆಲಸವನ್ನು ಬಜರಂಗಿಗಳ[illegible] ನಡೆಸುತ್ತಿದ್ದಾರೆ.

ಗರಿಗಟ್ಟುತ್ತಿವೆ ಹೋರಾಟಗಳು

ಇಷ್ಟೆಲ್ಲದರ ನಡುವೆಯೂ ಜಿಲ್ಲೆಯಲ್ಲಿ ಕೋಮುವಾದದ ವಿರುದ್ಧ ಹೋರಾಟ[illegible] ಗರಿಗಟ್ಟತೊಡಗಿದೆ. ಅದರೊಂದಿಗೆ ಜನರ ನಿತ್ಯ ಪ್ರಶ್ನೆಗಳ ಆಧಾರದ ಹೋರಾಟಗಳ[illegible] ತೀವ್ರಗೊಳ್ಳತೊಡಗಿದೆ. ಖಾಸಗಿ ಬಸ್ ದರ ಇಳಿಕೆಗ[illegible] ಒತ್ತಾಯಿಸಿ ಡಿವೈಎಫ್ಐ ಹಮ್ಮಿಕೊಂಡಿದ್ದ ಸರಣಿ ಪ್ರತಿಭಟನೆಗೆ ಮಣಿದ ಜಿಲ್ಲಾಡಳಿತ ಸಾರ್ವಜನಿಕ ಸಭೆ ಕರೆದು ದರ ಇಳಿಕೆಗೆ ಸಮ್ಮತಿಸಿದೆ. ಮಾರ್ಚ್ 2 ರಿಂದ 5ರವರೆಗೆ ವಿದ್ಯಾರ್ಥಿ, ಯುವಜನ, ರೈತ, ಕಾರ್ಮಿಕ ಸಂಘಟನೆಗಳು ಜನರ ಮೂಲಭೂತ ಪ್ರಶ್ನೆಗಳಾದ ಪಡಿತರ, ನಿವೇಶನ, ಕನಿಷ್ಟ ಕೂಲಿಗೆ ಒತ್ತಾಯಿಸಿ ಪ್ರತಿಭಟನೆಗೆ ನಿರ್ಧರಿಸಿವೆ. ಮಾರ್ಚ್ 14 ರಂದು ರಾಜ್ಯದ ಬುದ್ಧಿಜೀವಿ, ಸಾಹಿತಿ, ಬರಹಗಾರರು, ಕಲಾವಿದರನ್ನು ಒಟ್ಟು ಸೇರಿಸಿ ರಚಿತವಾಗಿರುವ ಮಾನವತಾ ವೇದಿಕೆ ಕೋಮು ಹಿಂಸೆಯ ವಿರುದ್ಧ ಬೃಹತ್ ಮಂಗಳೂರು ಚಲೋ ಕಾರ್ಯಕ್ರಮಮವನ್ನು ಹಮ್ಮಿಕೊಂಡಿದೆ. ಒಟ್ಟಾರೆ ಮತೀಯವಾದಿ ಶಕ್ತಿಗಳ ಭಯೋತ್ಪಾದಕ ಚಳುವಳಿಯ ವಿರುದ್ಧ ಜನಪರ ಚಳುವಳಿಗಳ ಜಾತ್ಯಾತೀತ ಮುಖಾಮುಖಿ ತೀವ್ರಗೊಳ್ಳುತ್ತಿದೆ. ಈ ಹೋರಾಟ ಇನ್ನಷ್ಟು ತೀವ್ರಗೊಳ್ಳಬೇಕಿದೆ. ಜಾತ್ಯಾತೀತ ಶಕ್ತಿಗಳು ಈ ಹೋರಾಟದಲ್ಲಿ ಗೆಲ್ಲಲೇಬೇಕಿದೆ. ಮಾನವೀಯತೆಯ ವಿರೋಧಿ ಸಂಘ ಪರಿವಾರವನ್ನು ಸೋಲಿಸಬೇಕಿದೆ. ಅಲ್ಲಿಯವರೆಗೆ ಸಂಘರ್ಷ ಮುಂದುವರಿಯುವ ಗಟ್ಟಿ ತೀರ್ಮಾನವನ್ನು ಇಲ್ಲಿನ ಜನಪರ ಎಡ ಚಳುವಳಿ ತೆಗೆದುಕೊಂಡಿದೆ. ಈ ಹೋರಾಟದಲ್ಲಿ ಜನಪರರು ಗೆಲ್ಲುತ್ತಾರೆ [illegible] ವಿಶ್ವಾಸ ಇಲ್ಲಿನ ಜನತೆಯದು.

○ ಸಂಜಯ

ಬಜೆಟ್‌ನ ಉಪ ಆರ್ಥಿಕ ಪ್ರೋತ್ಸಾಹಕ ಪ್ಯಾಕೇಜ್

ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯ ?!

ಭಾರತ ಆಳುವ ವರ್ಗಗಳು ಪ್ಯಾಕೇಜ್ ನೀಡುವಾಗ ಅವರಿಗೆ ಕಾಣುತ್ತಿರುವ ಬರೀ ಕಾರ್ಪೊರೇಟ್ ಕಂಪನಿಗಳು ಮಾತ್ರ. ಬಜೆಟ್‌ನ ಮತ್ತೊಂದು ಪ್ಯಾಕೇಜ್‌ನ ಪರಿಣಾಮವೇನು?

ಉಸ್ತುವಾರಿ ಹಣಕಾಸು ಸಚಿವ ಪ್ರಣಬ್ ಮುಖರ್ಜಿಯವರು ಲೋಕಸಭೆಯಲ್ಲಿ ಮಧ್ಯಂತರ ಬಜೆಟ್ ಕುರಿತು ಚರ್ಚೆಗೆ ಉತ್ತರಿಸುತ್ತಾ ಕೆಲವು ಉಪ ಪರಿಹಾರ ಕ್ರಮಗಳನ್ನು ಘೋಷಿಸಿದರು. ಈ ಸಂದರ್ಭದಲ್ಲಿ ಸಚಿವರು ಲೇಖಾನುದಾನಕ್ಕೆ ಅಂಗೀಕಾರ ಕೇಳುವಾಗ ತೆರಿಗೆಗಳಲ್ಲಿ ಬದಲಾವಣೆ ಮಾಡಲು ಅವಕಾಶಗಳಿಲ್ಲ ಎಂದು ಹೇಳಿದ ಅವರದೇ ಮಾತುಗಳಿಗೆ ವಿರುದ್ಧವಾಗಿ ಅವರೇ ನಡೆದುಕೊಂಡರು. ಚುನಾವಣೆಗಳು ಹತ್ತಿರದಲ್ಲಿವೆ. ಚುನಾಯಿತಗೊಳ್ಳುವ ಹೊಸ ಸರ್ಕಾರ ಪೂರ್ಣ ಬಜೆಟ್ ಮಂಡಿಸಿ ಅಂತಹ ಕ್ರಮಗಳನ್ನು ಕೈಗೊಳ್ಳಲು ಸಾಧ್ಯ ಎಂದು ಅವರು ಹೇಳಿದ್ದರು.

ತೆರಿಗೆ ಕಡಿತ ಯಾರಿಗಾಗಿ?

ಸಚಿವರು ಲೋಕಸಭೆಯಲ್ಲಿ ಚರ್ಚೆಯ ಕೊನೆಯಲ್ಲಿ ಎಡಪಕ್ಷಗಳ ಆಕ್ಷೇಪ ಹಾಗೂ ಸಭಾತ್ಯಾಗಗಳ ನಡುವೆಯೇ ಅಬಕಾರಿ ಸುಂಕಗಳಲ್ಲಿ (ಎಕ್ಸೈಸ್ ಡ್ಯೂಟಿ) ಶೇ. 2 ರಷ್ಟು ಹಾಗೂ ಸೇವಾ ತೆರಿಗೆ(ಸರ್ವಿಸ್ ಟ್ಯಾಕ್ಸ್) ನಲ್ಲಿ ಶೇ. 2 ರಷ್ಟು ಕಡಿತ ಘೋಷಿಸಿದರು. ಇದರಿಂದ ಸರ್ಕಾರದ ಖಜಾನೆಗೆ 30,000 ಕೋಟಿ ರೂ. ವ್ಯತ್ಯಯವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಈ ತೆರಿಗೆ ಕಡಿತ ಲಾಭವು ನೇರವಾಗಿ ಗ್ರಾಹಕರಿಗೆ ವರ್ಗಾವಣೆಗೊಂಡರೆ ಹಲವಾರು ಸರಕುಗಳು ಅಗ್ಗವಾಗಬೇಕಿದೆ. ಬಹುಶಃ ಯುಪಿಎ ಸರ್ಕಾರದ ತರ್ಕ ಏನೆಂದರೆ ಸರಕುಗಳ ಬೆಲೆ ಕಡಿತವಾದರೆ (ಈಗಿನ ಕ್ರಮದಿಂದ ಅಂತಹ ಮಹಾ ಕಡಿತವೇನೂ ಆಗದು) ಅದರಿಂದ ವ್ಯಾಪಾರವೂ ಹೆಚ್ಚುವ ಮೂಲಕ ಸಂಕಷ್ಟದಲ್ಲಿರುವ ಆರ್ಥಿಕತೆಗೆ ಪರಿಹಾರ ದೊರೆಯಲಿದೆ.

ಬರೀ ಹುತ್ತವ ಬಡಿವುದು

ಸರ್ಕಾರವು ಹುತ್ತವನ್ನು ಬಡಿಯುತ್ತಿದೆ. ಹಾವನ್ನು ಬಿಟ್ಟು... ಈ ರೀತಿಯ ತೆರಿಗೆ ಕಡಿತವು ಹಲವು ಸರಕುಗಳ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಕಡಿತ ಮಾಡಬಹುದೇ ಹೊರತು ಜನರ ಕೈಯಲ್ಲಿನ ಖರ್ಚು ಮಾಡಬಹುದಾದ ಹಣದ ಪ್ರಮಾಣವೇನನ್ನೂ ಹೆಚ್ಚಿಸುವುದಿಲ್ಲ. ಜನರ ಕೊಳ್ಳುವ ಸಾಮರ್ಥ್ಯದಲ್ಲಿ ಹೆಚ್ಚಳವಾಗದೇ ಎಷ್ಟೇ ತೆರಿಗೆ ಕಡಿತ ಹಾಗೂ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ.... ಬೇಲ್ ಔಟ್ ಪ್ಯಾಕೇಜುಗಳನ್ನು ಘೋಷಿಸಿದರೂ ಆರ್ಥಿಕತೆಯನ್ನು ಅದರಿಂದ ಚೇತರಿಸಿಕೊಳ್ಳುವಂತೆ ಮಾಡಲು ಸಾಧ್ಯವಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ಇದೇ 30 ಸಾವಿರ ಕೋಟಿ ರೂಪಾಯಿಗಳನ್ನು ಗ್ರಾಮೀಣ ರಸ್ತೆ ನಿರ್ಮಾಣದಂತಹ ವ್ಯಾಪಕ ಉದ್ಯೋಗ ಸೃಷ್ಟಿಸುವ ಯಾವುದೇ ಯೋಜನೆಗೆ ತೊಡಗಿಸಿದಲ್ಲಿ ಅದರಿಂದ ಆಂತರಿಕ ಬೇಡಿಕೆ ವಿಸ್ತರಿಸಲು ಸಾಧ್ಯ ಮತ್ತು ತಮ್ಮ ವೇತನ, ಆದಾಯವನ್ನು ಜನರು ಖರ್ಚು ಮಾಡುವ ಮೂಲಕ ಆರ್ಥಿಕತೆಯು ಚೇತರಿಸಿಕೊಳ್ಳಲು ಸಾಧ್ಯ. ತನ್ನ ವರ್ಗಗುಣಕ್ಕೆ ತಕ್ಕಂತೆ ಯುಪಿಎ ಸರ್ಕಾರವು ಜನರಿಗೆ ಬದಲಿಗೆ ಕಾರ್ಪೊರೇಟ್ ಕಂಪನಿಗಳಿಗೆ ಪರಿಹಾರ ಒದಗಿಸಲು ಉತ್ಸುಕವಾಗಿದೆ.

ವಿಮಾನ ಯಾನ ಹೆಚ್ಚಲಿಲ್ಲ

ಇದಕ್ಕೆ ಇಲ್ಲೇ ಒಂದು ಅತ್ಯುತ್ತಮ ಉದಾಹರಣೆ ಇದೆ. ಅದು ವಿಮಾನ ಯಾನ ಕ್ಷೇತ್ರ. ವಿಮಾನ ಇಂಧನದ ಬೆಲೆ ಕಡಿತ ಸೇರಿದಂತೆ ಈ ವಿಭಾಗದಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಬಾರಿ ರಿಯಾಯಿತಿ - ವಿನಾಯಿತಿ ನೀಡಲಾಗಿದೆ. ಪರಿಸ್ಥಿತಿಯ ವ್ಯಂಗ್ಯವೇನೆಂದರೆ ಇಂದು ಜನಸಾಮಾನ್ಯರಿಗೆ ದೊರೆಯುವ ಬೆಲೆಗಿಂತಲೂ ಕಡಿಮೆ ಬೆಲೆಗೆ ವಿಮಾನ ಯಾನಕ್ಕೆ ಇಂಧನ ದೊರೆಯುತ್ತಿದೆ. ಆದರೂ ಪರಿಸ್ಥಿತಿಯಲ್ಲಿ ಸುಧಾರಣೆಯೇನೂ ಕಂಡುಬಂದಿಲ್ಲ. ಕಾರ್ಪೊರೇಟ್ ಕಂಪನಿಗಳು ಈಗಲೂ ನಷ್ಟ ಅನುಭವಿಸುತ್ತಿವೆ. ವಿಮಾನಗಳ ಟಿಕೆಟ್‌ಗಳನ್ನು ಖರೀದಿಸುವ ಜನರ ಖರೀದಿ ಸಾಮರ್ಥ್ಯ ಹೆಚ್ಚಿದರೆ ಮಾತ್ರವೇ ವಿಮಾನ ಯಾನ ಹೆಚ್ಚುತ್ತದೆ. ಇಲ್ಲವಾದರೆ ಪರಿಹಾರ ಕ್ರಮವು ಕಾರ್ಪೊರೇಟ್ ಕಂಪನಿಗಳ ಖರ್ಚು ವೆಚ್ಚಗಳ ಪಟ್ಟಿಯನ್ನು ಸರಿದೂಗಿಸಿ 'ಸುಂದರ' ಗೊಳಿಸಲು ಸಹಾಯಕವಾಗುತ್ತದೆ ಅಷ್ಟೇ.

ತೆರಿಗೆ ಕಡಿತಗಳಿಂದಾಗಿ ಬೆಲೆಯಲ್ಲಿ ಸ್ವಲ್ಪ ಕಡಿತವಾಗಬಹುದಾದ ಸಾಧ್ಯತೆ ಇದೆ. ಆದರೆ ಕೂಡಾ ಅದೇ ಭಾರತದ ಮಧ್ಯಮ ವರ್ಗದ ಜನರು ಬಳಸುವ ಸರಕುಗಳದ್ದು. ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಷೇರು ಮಾರುಕಟ್ಟೆ ಕುಸಿದಿದೆ. ಮಧ್ಯಮ ವರ್ಗದ 'ಮನೆಗೆ ಕೊಂಡೊಯ್ಯುವ' ವೇತನದ ಪ್ರಮಾಣವೂ ಕುಸಿದಿದೆ. ಹೀಗಾಗಿ ಇವರ ಕೈಯಲ್ಲಿನ ವೆಚ್ಚ ಮಾಡಬಹುದಾದ ಆದಾಯದ ಪ್ರಮಾಣವೂ ಸಹ ಕುಸಿದಿದೆ. ಇದು ಇನ್ನೂ ಉದ್ಯೋಗ ಕಳೆದುಕೊಂಡಿಲ್ಲದವರ ಪರಿಸ್ಥಿತಿ. ಇಂತಹ ಪರಿಸ್ಥಿತಿಯಲ್ಲಿ ಮಧ್ಯಮ ವರ್ಗದ ಜನರು ಸರಕುಗಳ ಬೆಲೆಯಲ್ಲಿ ಸ್ವಲ್ಪ ಕಡಿತ ಮಾಡಿದರೆ ಹೆಚ್ಚು ಹೆಚ್ಚು ಕೊಂಡುಕೊಳ್ಳುತ್ತಾರೆ ಎಂದು ಕೊಳ್ಳುವುದು ಮೂರ್ಖತನವೇ ಸರಿ.



ಒಂದೇ ಪರಿಹಾರ

ಸಾರ್ವಜನಿಕ ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವುದು ಆ ಮೂಲಕ ವ್ಯಾಪಕ ಪ್ರಮಾಣದಲ್ಲಿ ಉದ್ಯೋಗವಕಾಶಗಳನ್ನು ಸೃಷ್ಟಿಸುವುದು, ಅದೇ ಸಮಯದಲ್ಲಿ ಶಿಕ್ಷಣ, ಆರೋಗ್ಯಗಳಂತಹ ಸಾಮಾಜಿಕ ಸೇವೆ, ಸೌಲಭ್ಯಗಳನ್ನು ವಿಸ್ತರಿಸುವುದು ಹಾಗೂ ಜನರ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹಿಗ್ಗಿಸುವುದು ಇದು ಜಾಗತೀಕ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಭೀಕರ ದುಷ್ಪರಿಣಾಮಗಳನ್ನು ಎದುರಿಸುವ ದಾರಿ. ಆದರೆ ಭಾರತದ ಆಳುವ ವರ್ಗಗಳು ತಮ್ಮ ವರ್ಗಗುಣಕ್ಕೆ ತಕ್ಕಂತೆ, ಕಾರ್ಪೊರೇಟ್ ಕಂಪನಿಗಳನ್ನು ಮೊದಲು ರಕ್ಷಿಸಿ ಎಂದು ಬೊಬ್ಬಿಡುತ್ತಿವೆ.

ಬದಲಿ ಹಾದಿ

ಇದಕ್ಕೆ ತದ್ವಿರುದ್ಧವಾಗಿ ಸಿಪಿಐ(ಎಂ) ನೇತೃತ್ವದ ಪಶ್ಚಿಮಬಂಗಾಳ, ಕೇರಳ ಸರ್ಕಾರಗಳು ಸರ್ಕಾರದ ಹೆಚ್ಚುವರಿ ವೆಚ್ಚದ ಮೂಲಕ ಒಟ್ಟಾರೆ ಬೇಡಿಕೆಯಲ್ಲಿ ಹೆಚ್ಚಳ ತರುವ ಉದ್ದೇಶದಿಂದ ಹಲವು ಆರ್ಥಿಕ ಉತ್ತೇಜಕ ಕ್ರಮಗಳನ್ನು ಘೋಷಿಸಿವೆ. ಸಾರ್ವಜನಿಕ ಹಣವನ್ನು 'ಬೇಲ್ ಔಟ್ ಪ್ಯಾಕೇಜುಗಳಿಗೆ ಬಳಸುವ ಕ್ರಮಗಳಿಗಿಂತ ಇದು ತುಂಬಾ ಪರಿಣಾಮಕಾರಿಯಾದ ವಿಧಾನವಾಗಿದೆ. ಕೇರಳದ ಸರ್ಕಾರವು ರಾಜ್ಯದ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. 5 ರ ಪ್ರಮಾಣಕ್ಕೆ ಸಮನಾದ ಆರ್ಥಿಕ ಉತ್ತೇಜಕ ಕ್ರಮಗಳನ್ನು ಘೋಷಿಸಿದೆ. ಕೇಂದ್ರ ಸರ್ಕಾರವು ದೇಶದ ಜಿಡಿಪಿಯ ಶೇ. 0.5 ಪ್ರಮಾಣವನ್ನು ಮಾತ್ರ ಆರ್ಥಿಕ ಉತ್ತೇಜಕ ಕ್ರಮವಾಗಿ ಘೋಷಿಸಿದೆ. ಅಂದರೆ ಕೇಂದ್ರ ಸರ್ಕಾರಕ್ಕಿಂತ ಕೇರಳದ ಉತ್ತೇಜಕ ಕ್ರಮ 10 ಪಟ್ಟು ದೊಡ್ಡದು. ನೀರಾವರಿ, ಕುಡಿಯುವ ನೀರು ಪೂರೈಕೆ, ವಸತಿ ಯೋಜನೆ ಇತ್ಯಾದಿಗಳು ಇದರಲ್ಲಿ ಸೇರಿವೆ. ಪಶ್ಚಿಮ ಬಂಗಾಳ ಸರ್ಕಾರ ತನ್ನ ರಾಜ್ಯದ ಜಿಡಿಪಿಯ ಶೇ. 1.5 ರಷ್ಟನ್ನು ಉತ್ತೇಜಕ ಕ್ರಮವಾಗಿ ಘೋಷಿಸಿದೆ. (ವಿವರ ಪುಟ 9 ರಲ್ಲಿ)

ರಾಜ್ಯ ಸರ್ಕಾರದ ಸೀಮಿತವಾದ ಅಧಿಕಾರ ವ್ಯಾಪ್ತಿಯಲ್ಲಿ ಇದು ಸಾಧ್ಯ ಎನ್ನುವುದಾದರೆ ಕೇಂದ್ರ ಸರ್ಕಾರ ಇಂತಹ ಜನಪರ ಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲು ಸಾಧ್ಯವಾಗಬೇಕಿತ್ತು.

ಕೇಂದ್ರ ಸರ್ಕಾರದ ನೀತಿಯಲ್ಲಿ ಎಡ ನೇತೃತ್ವದ ಸರ್ಕಾರಗಳು ತೋರುತ್ತಿರುವ ಬದಲಿ ದಾರಿಯ ಮಾದರಿಯಲ್ಲಿ ಬದಲಾವಣೆ ಆಗಬೇಕಿದೆ. ಹೀಗಾಗಬೇಕಾದಲ್ಲಿ ಕೋಮುವಾದ ವಿರೋಧಿಯಾದ ಹಾಗೂ ಯುಪಿಎ ಸರ್ಕಾರದ ನೀತಿಗಳಿಗೆ ಪರ್ಯಾಯ ಒದಗಿಸುವ ಶಕ್ತಿಗಳು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಬೇಕಿದೆ. ○

...ಯೆಡ್ಡಿ - ರೆಡ್ಡಿಗಾರು ಮುಖಕ್ಕೆ ಗುದ್ದು

ಪುಟ 5 ರಿಂದ

ದೊಂಬಿ ಪ್ರಕರಣ ದಾಖಲು ಮಾಡಿರುವುದನ್ನು ನೋಡಿದರೆ ಜಿಲ್ಲಾಡಳಿತ, ಪೊಲೀಸ್ ಇಲಾಖೆಯು ಇವರ ಮಾತನ್ನು ಪಾಲಿಸುವುದಷ್ಟೇ ನಮ್ಮ ಕೆಲಸ ಎಂದು ಭಾವಿಸಿದಂತಿದೆ. ಇದು ರಾಜಕಾರಣಗೊಂಡ ಆಡಳಿತ ವ್ಯವಸ್ಥೆಯನ್ನು ಅಣಕಿಸುತ್ತದೆ.

ಪ್ರಗತಿಪರರು, ಜನಪರ ಸಂಘಟನೆಗಳು, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರಿಸಿಕೊಂಡಿರುವ ಜನರು, ಸಂಘಟಿತರಾಗಿ ಇಂತಹ ರಾಜಕೀಯ ಅನಾಚಾರ, ತುರ್ತುಪರಿಸ್ಥಿತಿಯ ವಾತಾವರಣ, ಪಾಳೇಗಾರಿಕೆ ಆಡಳಿತದ ವಿರುದ್ಧ ಧ್ವನಿ ಎತ್ತಿದವು. ಈಗಾಗಲೇ ಸಿರಿವಾರ, ಚಾಗನೂರು ಹೋರಾಟಕ್ಕೆ ಬೆಂಬಲಿಸಿ, ಕೋಡಿಹಳ್ಳಿ ಚಂದ್ರಶೇಖರ ನೇತೃತ್ವದ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಪ್ರತಿಭಟನೆ ನಡೆದವು. ಘಟನೆ ನಡೆದ ಸ್ಥಳ ಸೇರಿದಂತೆ ಸಿರಿವಾರ, ಚಾಗವಾರ ಗ್ರಾಮಗಳಲ್ಲಿ 144 ಸೆಕ್ಷನ್ ಜಾರಿಗೊಳಿಸಲಾಯಿತು. ಇಂತಹ ವಾತಾವರಣದಲ್ಲೂ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಮಾರುತಿ ಮಾನ್ಪಡೆ, ಶಿವಶಂಕರ್ ಹಾಗೂ ಇನ್ನಿತರರು ಗ್ರಾಮಗಳಿಗೆ ಭೇಟಿ ನೀಡಿದರು. ಬಿಜೆಪಿ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಭೂತದಹನ ನಡೆಸಲಾಯಿತು. ಇಡೀ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒತ್ತಾಯಿಸಲಾಯಿತು.

ಫಲವತ್ತಾದ ಕೃಷಿಭೂಮಿಯನ್ನು ಅವೈಜ್ಞಾನಿಕವಾಗಿ ಕೇವಲ ಪ್ರತಿಷ್ಠೆ ಮತ್ತು ಸ್ವಂತಹ ಲಾಭಕ್ಕಾಗಿ ವಿಮಾನ ನಿಲ್ದಾಣ ನಿರ್ಮಿಸಲು ಮುಂದಾಗಿರುವ ಪ್ರಜಾಪ್ರಭುತ್ವ ವಿರೋಧಿಗಳ ಆಟಕ್ಕೆ ತಡೆಒಡ್ಡುವ ನಿಟ್ಟಿನಲ್ಲಿ ಫೆಬ್ರವರಿ 25ರಂದು ಬಳ್ಳಾರಿ ಬಂದ್ ಸಹ ಕರೆ ನೀಡಲಾಯಿತು. ಬಳ್ಳಾರಿ ಬಂದ್ ಭಾರಿ ಯಶ ಕಂಡಿತು. ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಸಾರಿಗೆ ಸಂಚಾರ ತೀರಾ ವಿರಳವಾಗಿತ್ತು. ಜನತೆ ಉತ್ತಮವಾಗಿ ಸ್ಪಂದಿಸಿದರು. ಹೇಗಾದರೂ ಬಂದ್ ವಿಫಲಗೊಳಿಸಿ ಮೀಸೆ ತಿರುವಲು ತಯಾರಾಗಿದ್ದ ಸರ್ಕಾರಿ ಸಚಿವರು, ಜಿಲ್ಲಾಡಳಿತಕ್ಕೆ ಮುಖಭಂಗವಾಗಿದೆ. ಎಂದಿನಂತೆ ಅವರು ಚಳುವಳಿಗಾರರನ್ನು ಬಂಧಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ಕಾಂಗ್ರೆಸ್‌ನ ದಿವಾಕರಬಾಬು ಮುಂತಾದವರು ಹಾಗೂ ವಿವಿಧ ಜನ ಸಂಘಟನೆಗಳ ಮುಖಂಡರು, ಕಾರ್ಯಕರ್ತರನ್ನು ಬಂಧಿಸಿ ಸರ್ಕಾರ ತನ್ನ ಮೂಲಭೂತ ಧೋರಣೆ ಏನೆಂದು ಸಾರಿತು. ○



ಜಾಗತಿಕ ಸುನಾಮಿಯ ಸುಳಿಯಲ್ಲಿ

ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆ

ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆ ಬೆಂಗಳೂರಿನಲ್ಲಿ ಆತಂಕಕಾರಿಯಾಗಿ ಹರಡುತ್ತಿದೆ.

ಪೀಣ್ಯ ಕೈಗಾರಿಕಾ ಪ್ರದೇಶ ಒಂದು ಬೃಹತ್ ಕೈಗಾರಿಕಾ ಸಮುಚ್ಚಯ. ಇಲ್ಲಿ 5 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕೈಗಾರಿಕಾ ಮಾಲೀಕರ ಸಂಘದ ಅಂಕಿಸಂಖ್ಯೆಗಳ ಪ್ರಕಾರ ಕಳೆದ ಡಿಸೆಂಬರ್ - ಜನವರಿ ತಿಂಗಳುಗಳಲ್ಲಿ 1.31 ಲಕ್ಷ ಜನರು ಇಲ್ಲಿ ಕೆಲಸ ಕಳೆದುಕೊಂಡಿದ್ದಾರೆ. ಗಾರ್ಮೆಂಟ್ಸ್ ಉದ್ದಿಮೆಯಲ್ಲಿ ಅಘೋಷಿತ ಕೆಲಸ ನಿರಾಕರಣೆ ನಡೆಯುತ್ತಿದೆ. ಬೆಂಗಳೂರಿನ ಸುತ್ತಮುತ್ತಲ ಜಿಲ್ಲೆ ಹಾಗೂ ಗ್ರಾಮೀಣ ಪ್ರದೇಶಗಳಿಂದ ಕೆಲಸಕ್ಕಾಗಿ ಬೆಂಗಳೂರು ಸೇರಿದ್ದ ಕಾರ್ಮಿಕರು ಈಗ ಹಳ್ಳಿಗಳಿಗೆ ವಾಪಸ್ ತೆರಳುವುದು ಹೆಚ್ಚುತ್ತಿದೆ.

ಆಟೋಮೊಬೈಲ್

ಆಟೋ ಮೊಬೈಲ್ ಕ್ಷೇತ್ರ ಬೆಂಗಳೂರಿನ ಒಂದು ಪ್ರಮುಖ ಉದ್ದಿಮೆ. ಅದಕ್ಕೆ ಪೂರಕವಾದದ್ದು ಆಟೋಮೋಟಿವ್ ಉದ್ದಿಮೆ. ಹಿಂದೆ ಎಸ್ಕಾರ್ಟ್ಸ್ ಎಂದು ಕರೆಯುತ್ತಿದ್ದ ಈಗ ಫೆಡರಲ್ ಮೊಗಲ್ ಎಂದು ಕರೆಯಲ್ಪಡುವ ಕಾರ್ಖಾನೆಯಲ್ಲಿ 2008 - 09 ರಲ್ಲಿ 4028 ಕೆಲಸಗಾರರಿದ್ದರು. ಕಳೆದ ಎರಡು ತಿಂಗಳಲ್ಲಿ 1878 ಕಾರ್ಮಿಕರನ್ನು ಇಲ್ಲಿ ಕೆಲಸದಿಂದ ತೆಗೆದುಹಾಕಲಾಗಿದೆ. 2250 ಮಂದಿ ಮಾತ್ರ ಉಳಿದಿದ್ದಾರೆ. 2250 ಜನರಲ್ಲಿ 1890 ಕಾರ್ಮಿಕರು ಖಾಯಂ, ಉಳಿದಂತೆ 280 ಕಾರ್ಮಿಕರು ಕಾಂಟ್ರಾಕ್ಟ್, ಟ್ರೈನೀಸ್, ಕ್ಯಾಷುವಲ್, ಅಪ್ರೆಂಟಿಸ್ ಇತ್ಯಾದಿ ಹೆಸರಿನಲ್ಲಿ ಕೆಲಸ ಮಾಡುವವರು. ಖಾಯಂ ಕಾರ್ಮಿಕರಲ್ಲಿ 500 ಜನರಿಗೆ ಪರಿಹಾರ ಕೊಟ್ಟು ಕೆಲಸದಿಂದ ತೆಗೆಯಲು ಕಾರ್ಖಾನೆ (ರಿಟ್ರೆಂಚ್‌ಮೆಂಟ್) ಅನುಮತಿ ಕೇಳಿದೆ. ಉಳಿದ 1369 ಕಾರ್ಮಿಕರಿಗೆ 15 ದಿನದಳ ಸಂಬಳ ನೀಡಿ, 15 ದಿನಗಳ ಕೆಲಸ ಮಾಡಿಸುವ 'ಲೇ ಆಫ್' ಜಾರಿ ಮಾಡಲು ಕಾರ್ಖಾನೆಯ ಆಡಳಿತ ಮಂಡಳಿ ಉದ್ದೇಶಿಸಿದೆ.

ಮೈಕೊ - ಬಾಷ್

ಬೆಂಗಳೂರಿನ ಮತ್ತೊಂದು ಬೃಹತ್ ಕಾರ್ಖಾನೆ ಮೈಕೊ(ಬಾಷ್)ವನ್ನು ಅಗತ್ಯಾನುಸಾರ ಮುಚ್ಚಲು ಅನುಮತಿ ಕೋರಲಾಗಿದೆ. ವರ್ಷದ 365 ದಿನ ದಿನದ 24 ಗಂಟೆಗಳ ಉತ್ಪಾದನೆ ನಡೆಯುತ್ತಿದ್ದ ಕಾರ್ಖಾನೆಯಲ್ಲೀಗ 5 ದಿನದ ವಾರ - ಎರಡು ದಿನ ರಜೆಯ ಕ್ರಮವನ್ನು ಜಾರಿಗೆ ತರಲಾಗಿದೆ.

ಟಯೋಟಾ

ಬಿಡದಿ ಸಮೀಪದ ಟಯೋಟ - ಟಿ.ಕೆ.ಎಂ. ಕಾರ್ಖಾನೆಯಲ್ಲಿ 600 ಗುತ್ತಿಗೆ ಕಾರ್ಮಿಕರನ್ನು ತೆಗೆಯಲಾಗಿದೆ. ಎಸ್‌ಕೆಎಫ್ - ಬಾಲ್‌ಬೇರಿಂಗ್ ಕಾರ್ಖಾನೆಯಲ್ಲಿ ತಿಂಗಳುಗಟ್ಟಲೆ ರಜೆ ನೀಡಲಾಗಿದೆ. 4 ಪಾಳಿಗಳಲ್ಲಿ ನಡೆಯುತ್ತಿದ್ದ ಕೆಲಸ ಈಗ 1 ಪಾಳಿಗೆ ಬಂದಿದೆ. ಹೊಸೂರು ರಸ್ತೆಯ ಸನ್‌ಸೆರಾ ಇಂಜಿನಿಯರಿಂಗ್ ಕಾರ್ಖಾನೆಯಲ್ಲಿ 500 ರೂ. ವೇತನ ಹೆಚ್ಚಳ ಒಪ್ಪಂದ ಆಗಿದ್ದನ್ನು ಉಲ್ಲಂಘಿಸಲಾಗಿದೆ. ಕಾರ್ಮಿಕರು ಮುಷ್ಕರದ ನೋಟಿಸ್ ಕೊಟ್ಟಿದ್ದರೆ, ಮಾಲೀಕರು 'ಲಾಕ್ ಔಟ್' ಅಂದರೆ ಕಾರ್ಖಾನೆಯನ್ನು ಮುಚ್ಚಲು ಹೊರಟಿದ್ದಾರೆ.


ಆದಾಯ ಕುಸಿದ ಆಟೋ ಚಾಲಕ



ವಿಡಿಯಾ

ಈಗ 'ಕೆನ್ನಾ ಮೆಟಲ್' ಆಗಿರುವ ವಿಡಿಯಾ ಕಾರ್ಖಾನೆಯಲ್ಲಿ 31 ಜನ ಅಧಿಕಾರಿಗಳನ್ನು ತೆಗೆದಿದ್ದಾರೆ. ಕಾರ್ಮಿಕ ಸಂಘ ಇರುವ ಕಾರಣ ಕಾರ್ಮಿಕರನ್ನು ತೆಗೆಯಲು ಸಾಧ್ಯವಾಗಿಲ್ಲ ಎನ್ನುತ್ತಾರೆ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್. ಈಗ 1 ಪಾಳಿಯಲ್ಲಿ ಕೆಲಸ. ಇಲ್ಲಿ ಈಗ 'ಪೇ ಆಫ್' ಜಾರಿಯಲ್ಲಿದೆ. ಅಂದರೆ ಸಂಬಳ ಇದೆ. ಆದರೆ ಕೆಲಸವಿಲ್ಲ.

ಟಯೋಟಾ ಕಾರ್ಮಿಕರು - ರಜೆ ಹಾಕೆಂಬ ಒತ್ತಡದಲ್ಲಿ



ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆ ಬೆಂಗಳೂರಿನ ಮೇಲೆ ಬೀರಿರುವ ಪರಿಣಾಮ ಬಹಳ ಗಂಭೀರವಾದದ್ದೇ. ಇಲ್ಲಿದೆ ಕೆಲವು ಚಿತ್ರಣಗಳು

ರಜೆ ಹಾಕಲು ಒತ್ತಾಯ

ಉದ್ಯೋಗ ಕಳೆದುಕೊಳ್ಳದ ಕಾರ್ಮಿಕರಿಗೂ ಆದಾಯದಲ್ಲಿ ತೀವ್ರ ಕಡಿತವಾಗಿದೆ. ಮೈಕೊ, ಎಲ್‌ಅಂಡ್ ಟಿ ಮುಂತಾದ ಕಾರ್ಖಾನೆಗಳಲ್ಲಿ ಉತ್ಪಾದನೆ ಆಧಾರಿತ ಭತ್ಯೆ ದೊರೆಯುತ್ತಿತ್ತು. ಅಂದರೆ ಹೆಚ್ಚು ಹೆಚ್ಚು ಉತ್ಪಾದನೆ ಆದಂತೆ ಭತ್ಯೆಯೂ ಹೆಚ್ಚುತ್ತಿತ್ತು. ಈಗ ಉತ್ಪಾದನೆಯೇ ಕಡಿತವಾಗಿರುವುದರಿಂದ ಈಗ ಆದಾಯಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಕೆಲವರಿಗೆ ಅರ್ಧಕ್ಕರ್ಧ ಆದಾಯ ಕಡಿತವಾಗಿದೆ. ಟಯೋಟ - ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಕಾರ್ಮಿಕರು ತಿಂಗಳಿಗೆ ಒಂದು ರಜೆ ಹಾಕಬೇಕೆಂದು ಒತ್ತಾಯ ತರಲಾಗುತ್ತಿದೆ.

ಸಾಫ್ಟ್‌ವೇರ್‌ನಲ್ಲಿ

ಇನ್ನು ಇನ್‌ಫೋಸಿಸ್‌ನಂತಹ ಸಾಫ್ಟ್‌ವೇರ್ ಕಂಪನಿಗಳನ್ನು ಈ ಆರ್ಥಿಕ ಬಿಕ್ಕಟ್ಟು ತಟ್ಟದೇ ಬಿಟ್ಟಿಲ್ಲ. ಕಂಪನಿಯ ಉದ್ಯೋಗಿಗಳಿಗೆ ನೀಡಲಾಗುತ್ತಿದ್ದ ಕೆಲವು ಸೌಕರ್ಯಗಳನ್ನು ಕಡಿತ ಮಾಡಲಾಗುತ್ತಿದೆ. ಕಳೆದ 3 ತಿಂಗಳ ಅವಧಿಯಲ್ಲಿ 1,681 ಕೋಟಿ ರೂ. ಲಾಭವಾಗಿದ್ದರೂ ಲಾಭದ ಪ್ರಮಾಣ ನಿರೀಕ್ಷಿಸಿದಷ್ಟಿಲ್ಲ. ಹಾಗಾಗಿ ನೌಕರರಿಗೆ ವೇತನ ಹೆಚ್ಚಳ ಇಲ್ಲ. ಊಟದಲ್ಲಿ ಒಂದೇ ತರಹದ ಪಲ್ಯ.

ಬೆಂಚ್ ಮೇಲೆ ಕೂತವರು

ಇನ್ನು ಬಿಪಿಓ ಸಂಸ್ಥೆಗಳು ಇತರ ಹಲವು ಸಾಫ್ಟ್‌ವೇರ್ ಕಂಪನಿಗಳಲ್ಲಿ ಊಟ, ಟೀ ಸಮಯದಲ್ಲಿ ಲಭ್ಯವಿದ್ದ ಬಗೆಬಗೆಯ ತಿನಿಸುಗಳು ಹೋಗಿ ಟೀ - ಒಂದೇ ಬಗೆಯ ಬಿಸ್ಕತ್, ಸರಳ ಊಟ ಎಂಬಲ್ಲಿಗೆ ಬಂದಿದೆ. ಹಲವು ಕಡೆ 'ಮನೆಗೆ' ಕಳುಹುದರ ಮೊದಲ ಹಂತವಾಗಿ ಎಷ್ಟೋ ಜನ ಉದ್ಯೋಗಿಗಳನ್ನು 'ಬೆಂಚಲ್ಲಿ' ಕೂರಿಸಲಾಗುತ್ತಿದೆ. ಬೆಂಚಲ್ಲಿ ಕೂತವರು ಎಂದರೆ ಸಮಸ್ಯೆ ಹೆಚ್ಚಿದರೆ ಮೊದಲು ಕೆಲಸ ಕಳೆದುಕೊಳ್ಳುವವರು ಅಂತ.

ಇದ್ದದ್ದು ಮಾರಿ..

ಈ ವಿಭಾಗದಲ್ಲಿ ಎಷ್ಟೋ ಜನ ಉತ್ತಮ ವೇತನವನ್ನು ನಂಬಿಕೊಂಡು ಮನೆ, ಫ್ಲಾಟ್, ವಾಹನಗಳು ಇತ್ಯಾದಿಗಳಿಗಾಗಿ ಸಾಲ ಮಾಡಿಕೊಂಡಿದ್ದಾರೆ. ಸಾಲ ಮರುಪಾವತಿ ಕಷ್ಟವಾಗುತ್ತಿರುವಾಗ ಕೆಲವನ್ನು ಮಾರಿ ಕೆಲವನ್ನು ಉಳಿಸಿಕೊಳ್ಳುವ, ಹೊಂದಾಣಿಕೆ, ಮರು ಹೊಂದಾಣಿಕೆಗಳು ಶುರುವಾಗಿವೆ. ಇಂತಹ ಹಲವು ಉದ್ದಿಮೆ, ಕಾರ್ಖಾನೆಗಳ ಕಾರ್ಮಿಕರು ನೌಕರರ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ರೂಪುಗೊಂಡಿರುವ ಎಷ್ಟೋ ಪೂರಕ ಆರ್ಥಿಕ ಚಟುವಟಿಕೆಗಳು ಕುಸಿದಿವೆ. ನೌಕರರು, ಕಾರ್ಮಿಕರ ಸಾಗಣೆಯಲ್ಲಿ ತೊಡಗಿದ್ದ ಸಾರಿಗೆ ಉದ್ದಿಮೆ ಕುಸಿದಿದೆ. ಆಟೋ, ಟ್ಯಾಕ್ಸಿ ಮಾಲೀಕರು ಚಾಲಕರು ತೊಂದರೆಗೆ ಸಿಕ್ಕಿದ್ದಾರೆ. ಕಾರ್ಮಿಕ, ನೌಕರರಿಗೆ ಅಡುಗೆ ಊಟ, ತಿಂಡಿ ಇತ್ಯಾದಿ ಪೂರೈಸುವ ಉದ್ದಿಮೆ ತೊಂದರೆಗೆ ಸಿಲುಕಿದೆ.

ಗಾರ್ಮೆಂಟ್ ಕಾರ್ಮಿಕರು ಹೊರಕ್ಕೆ



ಕೆಲಸದ ಅವಧಿ 10 ತಾಸು?

ಇದೆಲ್ಲಾ ಆಗುತ್ತಿರುವಾಗ ಮಾಲೀಕವರ್ಗದ ಪ್ರತಿನಿಧಿಗಳು ಸೇರಿಕೊಂಡು ಸರ್ಕಾರಕ್ಕೆ, ಕಾರ್ಮಿಕರ ಕೆಲಸದ ಅವಧಿಯನ್ನು ಈಗಿರುವ 8 ಗಂಟೆಯಿಂದ 10 ಗಂಟೆಗೆ ಏರಿಸಿ ಎಂದು ಒತ್ತಾಯ ಮಾಡಿ ಮನವಿ ಅರ್ಪಿಸಿದ್ದಾರಂತೆ!

ಕಡಿಮೆ ಇಲ್ಲ ಮೋಜು

ಇದೇ ಬಿಕ್ಕಟ್ಟನ್ನು ಬಳಸಿಕೊಂಡು ಕಾರ್ಮಿಕ ವರ್ಗವು ದಶಕಗಳ ಕಾಲದ ಸುದೀರ್ಘ ಹೋರಾಟದಿಂದ ಗಳಿಸಿದ ದಿನಕ್ಕೆ ಎಂಟು ಗಂಟೆಗಳ ಮಾತ್ರದ ದುಡಿಮೆ ಮಾಡುವ ಹಕ್ಕನ್ನು ಕಿತ್ತುಕೊಂಡು ದುಡಿಮೆಯ ಅವಧಿಯನ್ನು ಹೆಚ್ಚಳ ಮಾಡಲು ಮಾಲೀಕವರ್ಗ ಯೋಚಿಸಿದೆ. ಆದರೆ ದುರಂತವೆಂದರೆ ಕಾರ್ಮಿಕರ ವೇತನ, ಸೌಲಭ್ಯ ಹಾಗೂ ಕೆಲಸಕ್ಕೆ ಕತ್ತರಿ ಬಿದ್ದಿದ್ದರೂ ಮಾಲೀಕ ವರ್ಗದ ಮೋಜು, ವೈಭೋಗಕ್ಕೇನೂ ಬಹುತೇಕ ಧಕ್ಕೆಯಾಗಿಲ್ಲ. ದೊಡ್ಡ ದೊಡ್ಡ ಮಾಲೀಕರ ವಿಮಾನ ಹಾರಾಟಗಳು, ಪಂಚತಾರಾ ಹೋಟೆಲುಗಳ ಮೋಜುವಾನಿಗಳಿಗೆ ಯಾವ ರೀತಿಯ ತಡೆಯೂ ಬಿದ್ದಿಲ್ಲ ಎನ್ನುವುದು ಮಾತ್ರ ಪರಿಸ್ಥಿತಿಯ ಕ್ರೂರ ವ್ಯಂಗ್ಯ!!.



ಜಾಗತಿಕ ಆರ್ಥಿಕ ಭೂಕಂಪನದ ಕೇಂದ್ರ ಬಿಂದು ಇರುವುದು ಅಮೆರಿಕಾದಲ್ಲಿ, ಅಲ್ಲೀಗ ಪರಿಹಾರ ಘೋಷಣೆಗಳು ನಡೆದಿವೆ. ಅದರ ಪರಿಣಾಮ ಏನು? ಭಾರತದ ಮೇಲೆ ಬಿಕ್ಕಟ್ಟಿನ ಮುಂದುರಿದ ಪರಿಣಾಮ ಏನು?

ಈಗ 787 ಬಿಲಿಯ ಡಾಲರುಗಳ ಒಬಾಮ ಪ್ಯಾಕೇಜ್

ಫೆಬ್ರುವರಿ 13ರಂದು ಅಮೆರಿಕಾದ ಸಂಸತ್ತು ಪ್ರಸಕ್ತ ಆರ್ಥಿಕ ಹಿಂಜರಿತವನ್ನು ಎದುರಿಸಲು 787 ಶತಕೋಟಿ ಡಾಲರುಗಳ ಹೊಸ ಉತ್ತೇಜಕ ಯೋಜನೆಗೆ ಒಪ್ಪಿಗೆ ನೀಡಿದೆ. ಬರಾಕ್ ಒಬಾಮ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಇದು ಅವರ ಮೊದಲ 'ಪ್ಯಾಕೇಜ್'. "ಇದು ನಮ್ಮ ಚೇತರಿಕೆಯ ಹಾದಿಯಲ್ಲಿ ಪ್ರಮುಖ ಮೈಲಿಗಲ್ಲು" ಎಂದು ಅವರು ಹೇಳಿದ್ದಾರೆ. ಇದು 35ಲಕ್ಷ ಉದ್ಯೋಗಗಳನ್ನು ನಿರ್ಮಿಸಬಹುದು ಅಥವ ...ಸಬಹುದು ಎಂಬ ವಿಶ್ವಾಸ ಅವರದ್ದು.

ಇದರಲ್ಲಿ 280.8 ಶತಕೋಟಿ ಡಾಲರು ವಿವಿಧ ತೆರಿಗೆ ಕಡಿತಗಳಿಗೆ, ವೈದ್ಯಕೀಯ ನೆರವಿಗೆ 90ಶತಕೋಟಿ, ನಿರುದ್ಯೋಗ ಪರಿಹಾರ ಇತ್ಯಾದಿಗಳಿಗೆ 57.3 ಶತಕೋಟಿ, ಆರೋಗ್ಯ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ 20.8 ಶತಕೋಟಿ ಹಾಗೂ ಇತರ ಸಬ್ಸಿಡಿಗಳಿಗೆ 25.1 ಶತಕೋಟಿ. ತೆರಿಗೆ ಕಡಿತಗಳು ಬುಶ್ ಪ್ಯಾಕೇಜಿನಂತೆ ಶ್ರೀಮಂತರಿಗೆ ಮಾತ್ರ ಪ್ರಯೋಜನಕಾರಿಯಾಗಿರದೆ 95ಶೇ. ಅಮೆರಿಕನ್ ಕುಟುಂಬಗಳಿಗೆ ಪ್ರಯೋಜನವಾಗಲಿದೆ ಎನ್ನಲಾಗಿದೆ. ವಿವಿಧ ಮೂಲರಚನೆ ಕಾರ್ಯಕ್ರಮಗಳಿಗೆ 120ಶತಕೋಟಿ ಡಾಲರು ಕೊಡಲಾಗುವುದಂತೆ-ಅಂದರೆ ಹೆದ್ದಾರಿಗಳು, ರೈಲುಗಳು, ಇಂಟರ್ನೆಟ್ ಸಂಪರ್ಕಗಳು ಇತ್ಯಾದಿಗಳ ...ರಣೆಗೆ.

"ನಮ್ಮ ಯೋಜನೆ ಯಶಸ್ವಿಯಾಗಬೇಕಾದರೆ, ...ವು ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸ್ಥಿರತೆ ...ಬೇಕು, ಅದನ್ನು ರಿಪೇರಿ ಮಾಡಬೇಕು ಹಾಗೂ ಸುಧಾರಿಸಬೇಕು............. ಇನ್ನೆಂದೂ ಅನೀತಿಯುತ ಸಟ್ಟಾಕೋರರು ನಮ್ಮ ಆರ್ಥಿಕವನ್ನು ಬುಡಮೇಲು ಮಾಡಲು ಬಿಡಬಾರದು" ಎಂದು ಸೆನೆಟಿನಲ್ಲಿ ಬಹುಮತದಲ್ಲಿರುವ ಡೆಮಾಕ್ರೆಟಿಕ್ ಪಕ್ಷದ ಪ್ರಮುಖ ಹ್ಯಾರಿ ರೀಡ್ ಹೇಳಿದ್ದಾರೆ! ನಮ್ಮ ಉದಾರೀಕರಣವಾದಿಗಳು ಗಮನಿಸುವರೇ?

ಇದು ಏನೇನೂ ಸಾಲದು ಎನ್ನುತ್ತಾರೆ ಅಮೆರಿಕಾದ ಆರ್ಥಿಕ ತಜ್ಞರು

ಈ ಯೋಜನೆ ಸದ್ಯಕ್ಕೆ ಸಾಕು ಎಂಬುದು ಒಬಾಮ ಆಡಳಿತದ ಲೆಕ್ಕಾಚಾರ. ಆದ್ದರಿಂದ ಇದು ಒಬಾಮಾರ ಮೊದಲ ರಾಜಕೀಯ ವಿಜಯ ಎನ್ನಲಾಗುತ್ತಿದೆ. ಆದರೆ ಇದು ಏನೇನೂ ಸಾಲದು ಎಂದು ಅಮೆರಿಕಾದ ಆರ್ಥಿಕತಜ್ಞರು ಹೇಳುತ್ತಾರೆ. ಅಲ್ಲಿನ ಸಂಸತ್ತಿನ ಬಜೆಟ್ ಕಚೇರಿಯ ಅಂದಾಜಿನ ಪ್ರಕಾರ ಮುಂದಿನ ಮೂರು ವರ್ಷಗಳಲ್ಲಿ ಅಮೆರಿಕಾದ ಆರ್ಥಿಕದ ಉತ್ಪಾದನಾ ಸಾಮರ್ಥ್ಯ ಮತ್ತು ವಾಸ್ತವವಾಗಿ ಅದರ ಉತ್ಪಾದನೆ ...ವುಗಳ ನಡುವೆ 29,000 ಬಿಲಿಯ ಡಾಲರುಗಳ ಅಂತರ ಇರಲಿದೆ! ಅದರ ಎದುರು ಈ 787 ಬಿಲಿಯ ಏನೂ ಸಾಲದು!

ಒಂದು ರೀತಿಯಲ್ಲಿ ಇದು ರಿಪಬ್ಲಿಕನ್ನರ ವಿಜಯವಂತೆ. ಬಹುಶಃ ಅವರ ಹಿಂದಿರುವ ಗುತ್ತೇದಾರಿ ಬಂಡವಾಳಶಾಹಿಗಳ ವಿಜಯವಿರಬಹುದೇ? ಅವರು ಬಿಡಲಿಕ್ಕಿಲ್ಲ ಎಂದು ಒಬಾಮಾರವರೇ ಕಡಿಮೆ ಕೇಳಿದ್ದಾರಂತೆ. ಇದು ಸಾಲದಾಗಿ ಇನ್ನೊಂದು ಉತ್ತೇಜಕ ಯೋಜನೆಗೆ ಅಮೆರಿಕನ್ ಕಾಂಗ್ರೆಸಿನ ಮಂಜೂರಾತಿ ಕೇಳಲು ಒಬಾಮಾರಿಗೆ ಸಾಧ್ಯವಾದೀತೇ ಎಂಬ ಸಂದೇಹವನ್ನು ಪೌಲ್ ಕ್ರುಗ್‌ಮನ್ ವ್ಯಕ್ತಪಡಿಸುತ್ತಾರೆ. ಮಹಾಕುಸಿತದ ನಂತರದ ಈ 70ವರ್ಷಗಳಲ್ಲೇ ಅತ್ಯಂತ ದೊಡ್ಡ ಸವಾಲನ್ನು ಎದುರಿಸುತ್ತಿರುವ ಅಮೆರಿಕಾ ಅದನ್ನು ಎದುರಿಸಲು ಎದ್ದು ನಿಲ್ಲುತ್ತಿಲ್ಲ ಎಂದೇ ಅವರ ಅನಿಸಿಕೆ.



ಅಮೆರಿಕನ್ ವಸ್ತುಗಳನ್ನೇ ಕೊಳ್ಳಿ

ಇದು ಜಾಗತೀಕರಣದ ಯುಗದಲ್ಲಿ ಭಾರತೀಯರಿಗೆ ಹೇಳಿರುವ ಮಾತಲ್ಲ, ಹೊಸ ಒಬಾಮಾ ಆಡಳಿತ ಅಮೆರಿಕನ್ನರಿಗೆ ಹೇಳುತ್ತಿರುವ ಮಾತು- ಅಥವಾ ಅಮೆರಿಕನ್ ಸಂಸತ್ತು ಅಂಗೀಕರಿಸಿದ ಚೇತರಿಕೆ ಪ್ಯಾಕೇಜಿನಲ್ಲಿರುವ ಅಂಶ. ಅದರೆ ಇದು ವ್ಯಾಪಾರ ಯುದ್ಧವನ್ನು ಆರಂಭಿಸಬಹುದು ಎಂದು ಅಮೆರಿಕಾದೊಡನೆ ವ್ಯಾಪಾರ-ವಹಿವಾಟು ನಡೆಸುವ ವಿದೇಶಿ ಉದ್ದಿಮೆದಾರರ, ವಿದೇಶಿ ಆಡಳಿತಗಾರರ ಭಯ. ಎಲ್ಲಾ ದೇಶಗಳೂ ಹೀಗೆ ಮಾಡಿದರೆ ಏನು ಗತಿ ಎಂಬುದೇ ಅವರ ಭಯ.

ಅಮೆರಿಕಾದಲ್ಲಿ ಉದ್ಯೋಗದ ಕನಸು ಕಾಣುತ್ತಿರುವ ಮಧ್ಯಮ ವರ್ಗದ ಭಾರತೀಯರಿಗೆ ಈ ಪ್ಯಾಕೇಜಿನಲ್ಲಿ ಇನ್ನೂ ಆತಂಕಕಾರಿ ಸಂಗತಿಯಿದೆ. ಅಮೆರಿಕನ್ ಸರಕಾರದಿಂದ ಹಣಸಹಾಯ ಪಡೆಯುವ ಕಂಪನಿಗಳು ಕೆಲಸ ಕಳಕೊಂಡ ಅಮೆರಿಕನ್ನರ ಬದಲು ಭಾರತದ ಅಥವಾ ಇತರ ವಿದೇಶಗಳ ಕೆಲಸಗಾರರನ್ನು ಇನ್ನು ನೇಮಿಸಿಕೊಳ್ಳುವಂತಿಲ್ಲ. ಭಾರತೀಯರು ಅಮೆರಿಕನ್ ಕಂಪನಿಗಳಲ್ಲಿ ಕೆಲಸಮಾಡಲು ಅನುಮತಿ ನೀಡುವ ಅಮೆರಿಕಾದ ಹೆಚ್1-ಬಿ ವೀಸಾಗಳನ್ನು 1.95 ಲಕ್ಷದಿಂದ ಕಳೆದೆರಡು ವರ್ಷಗಳಲ್ಲಿ ವರ್ಷಕ್ಕೆ 65,000 ಕ್ಕೆ ಸೀಮಿತಗೊಳಿಸಲಾಗಿತ್ತು. ಭಾರತ ಮತ್ತು ಇತರ ದೇಶಗಳು ಇದನ್ನು ಹೆಚ್ಚಿಸಬೇಕೆಂದು ಕೇಳುತ್ತಿದ್ದವು. ಆದರೆ ಈ ಹೊಸ ಪ್ಯಾಕೆಜು ತದ್ವಿರುದ್ಧವಾಗಿದೆ. ಈಗ ಅಮೆರಿಕಾದಲ್ಲಿ ಉದ್ಯೋಗಕ್ಕೆ ಅರ್ಜಿ ಹಾಕಿಕೊಂಡಿರುವ 1.63 ಲಕ್ಷ ವಿದೇಶೀಯರಲ್ಲಿ ಭಾರತೀಯರ ಸಂಖ್ಯೆ 1ಲಕ್ಷವಂತೆ.

ಲೆಹ್ಮನ್ ಕುಸಿಯಿತು, ಸೂರತ್‌ಗೆ 'ವಜ್ರಾಘಾತ'ವಾಯಿತು

ಐಎಂಎಫ್ ಅಂದಾಜಿನ ಪ್ರಕಾರ ಭಾರತದಂತಹ ಮೂಡಿಬರುತ್ತಿರುವ ಮತ್ತು ಅಭಿವೃದ್ಧಿಶೀಲ ಆರ್ಥಿಕಗಳಿಂದ ರಫ್ತು ಪ್ರಮಾಣ 2007 ರಲ್ಲಿ 9.6ಶೇ.ದಷ್ಟು ಹೆಚ್ಚಿತು, 2008ರಲ್ಲಿ ಅದು 5.6ಶೇ. ದಷ್ಟು ಹೆಚ್ಚಿತು. ಆದರೆ 2009ರಲ್ಲಿ ಕಡಿಮೆ ದರದಲ್ಲಾದರೂ ಹೆಚ್ಚುವ ಬದಲು ಅದು 2008ರ ಪ್ರಮಾಣಕ್ಕಿಂತಲೂ 0.8ಶೇ. ಕಡಿಮೆಯಿರುವ ಸಾಧ್ಯತೆಯಿದೆ. ಅಂದರೆ ಭಾರತದಂತಹ ದೇಶಗಳಲ್ಲಿ ಇಂತಹ ರಫ್ತು ಉದ್ದಿಮೆಗಳಲ್ಲಿ ದುಡಿಯುವವರು ಬೀದಿಗೆ ಬರುತ್ತಾರೆ, ಬಂದಿದ್ದಾರೆ.

ಗುಜರಾತಿನ ಸೂರತ್‌ನಲ್ಲಿ ಇದು ಸ್ಪಷ್ಟವಾಗಿ

ಪುಟ 12ಕ್ಕೆ

ಪಶ್ಚಿಮ ಬಂಗಾಳ ಮತ್ತು ಕೇರಳ ಎಡಪಂಥೀಯ ಸರ್ಕಾರಗಳ ಮಾದರಿ

ಫೆಬ್ರುವರಿ 24 ರಂದು ಪಶ್ಚಿಮ ಬಂಗಾಳದ ಎಡರಂಗ ಸರಕಾರ 5106 ಕೋಟಿ ರೂಪಾಯಿಗಳ ಆದಾಯ ಮತ್ತು ಉದ್ಯೋಗಾವಕಾಶ ಕಲ್ಪಿಸುವ ಯೋಜನೆಯನ್ನು ಪ್ರಕಟಿಸಿದೆ. ಕೇಂದ್ರ ಸರಕಾರ ಇದುವರೆಗೆ ಕೊಟ್ಟ ಪ್ಯಾಕೇಜುಗಳ ಪ್ರಮಾಣ ಒಟ್ಟು ರಾಷ್ಟ್ರೀಯ ಉತ್ಪನ್ನದ 0.5ಶೇ.ವಾದರೆ ಪಶ್ಚಿಮ ಬಂಗಾಳದ ಈ ಯೋಜನೆಯ ಪ್ರಮಾಣ ರಾಜ್ಯದ ಒಟ್ಟು ಉತ್ಪನ್ನದ 1.5ಶೇ. ದಷ್ಟಾಗುತ್ತದೆ. ಹಣಕಾಸು ಮಂತ್ರಿ ಪ್ರೊ. ಅಸೀಮ್ ದಾಸಗುಪ್ತ ಇದು ಹತಾಶೆಯ ದಿನಗಳಲ್ಲಿ ಜನಸಮೂಹಗಳ ಸಬಲೀಕರಣದ ಯೋಜನೆ ಎನ್ನುತ್ತಾರೆ. ಬಿಪಿಎಲ್ ಕುಟುಂಬಗಳಿಗೆ ಕೆಜಿಗೆ 2ರೂ.ನಲ್ಲಿ ಅಕ್ಕಿ, ಬಿಪಿಎಲ್ ಅಲ್ಲದ ಗ್ರಾಮೀಣ ಬಡ ಜನರಿಗೆ ವಸತಿಗಾಗಿ 1000ಕೋಟಿ ರೂ., ಸ್ವಸಹಾಯ ಗುಂಪುಗಳಿಗೆ 4 ಶೇಕಡಾದರದಲ್ಲಿ ಬ್ಯಾಂಕ್ ಸಾಲ, ಮುಚ್ಚಿದ ಕಾರ್ಖಾನೆಗಳ ಮತ್ತು ಚಹಾತೋಟಗಳ ಕಾರ್ಮಿಕರಿಗೆ ಮಾಸಿಕ ಪೆನ್ಶನ್ ಹಣ 750ರೂ.ನಿಂದ 1000ರೂ.ಗೆ ಏರಿಕೆ, ಆಲೂಗಡ್ಡೆ ಬೆಳೆ ನಷ್ಟವಾದ ರೈತರಿಗೆ 50,000ರೂ. ಪರಿಹಾರ, ಮಧ್ಯಮ ಮತ್ತು ಭಾರಿ ಉದ್ದಿಮೆಗಳಿಗಾಗಿ ಭೂಬ್ಯಾಂಕ್‌ಗಳಿಗೆ 500ಕೋಟಿ ರೂ., ಕೈಮಗ್ಗ ವಲಯಕ್ಕೆ 55ಕೋಟಿ ರೂ., ಒಂದು ಸಾವಿರ ಉದ್ಯೋಗ ಕೇಂದ್ರಗಳ ಸ್ಥಾಪನೆ, 50 ಸಾವಿರ ಪ್ರಾಥಮಿಕ ಶಿಕ್ಷಕರ ನೇಮಕ, ಅರೆ ಶಿಕ್ಷಕರ ಮತ್ತು ಶಾಲಾ-ಕಾಲೇಜುಗಳ ಅರೆಕಾಲಿಕ ಶಿಕ್ಷಕರ ಸಂಬಳದಲ್ಲಿ ಹೆಚ್ಚಳ ಇತ್ಯಾದಿ ಈ ಯೋಜನೆಯಲ್ಲಿ ಸೇರಿದೆ.

ಕೇರಳದ ಎಲ್‌ಡಿಎಫ್ ಸರಕಾರದ ಹಣಕಾಸು ಮಂತ್ರಿ ಪ್ರೊ. ಥಾಮಸ್ ಐಸಾಕ್ ಮಂಡಿಸಿದ ಬಜೆಟ್ ಒಂದು ಜನಪರ ಪರ್ಯಾಯವನ್ನೇ ಮುಂದಿಟ್ಟಿದೆ. ಆರ್ಥಿಕ ಹಿಂಜರಿತವನ್ನು ಎದುರಿಸಲು 10,000ಕೋಟಿ ರೂ.ಗಳ ಉತ್ತೇಜಕ ಯೋಜನೆ ಈ ಬಜೆಟ್ಟಿನ ಮುಖ್ಯ ಅಂಶ. ಇದು ರಾಜ್ಯದ ಒಟ್ಟು ಉತ್ಪನ್ನದ 5 ಶೇ.ವಾಗುತ್ತದೆ ಅಂದರೆ ಕೇಂದ್ರ ಸರಕಾರದ ಪ್ಯಾಕೇಜುಗಳ ಹತ್ತು ಪಟ್ಟು. ಅಲ್ಲದೆ ಕೇಂದ್ರದ್ದು ಮುಖ್ಯವಾಗಿ ಕಾರ್ಪೊರೇಟ್ ವಲಯಕ್ಕೆ ಹಣಕಾಸು ಹರಿವನ್ನು ಹೆಚ್ಚಿಸಲ್ಲಿಕ್ಕಾದರೆ, ಇದು ಮುಖ್ಯವಾಗಿ ಜನಸಾಮಾನ್ಯರಿಗಾಗಿ. 5000ಕೋಟಿ ರೂ. ನೀರು ಪೂರೈಕೆ, ನೀರಾವರಿ ಮತ್ತು ಸಾರ್ವಜನಿಕ ಕಾಮಗಾರಿಗಳಿಗೆ ಹಾಗೂ ಇನ್ನು 5000ಕೋಟಿ ರೂ. ಇ.ಎಂ.ಎಸ್ ವಸತಿ ಯೋಜನೆಗಾಗಿ. ಅಲ್ಲದೆ ಸಾರ್ವಜನಿಕ ಉದ್ದಿಮೆಗಳ ಪುನರುಜ್ಜೀವನ ಮತ್ತು ವಿಸ್ತರಣೆಗಾಗಿ ಇನ್ನೂ 883ಕೋಟಿ ರೂ.ಗಳನ್ನು ಬಜೆಟಿನಲ್ಲಿ ನೀಡಲಾಗಿದೆ. ಆಯ್ದ ವಲಯಗಳಲ್ಲಿ ಮತ್ತು ಸರಿಪಡಿಕೆ ಕ್ರಮಗಳ ಮೂಲಕ ಮಧ್ಯಪ್ರವೇಶ, ಮಂತ್ರಿ ಮಟ್ಟದಲ್ಲಿ ನಿಯಮಿತ ಉಸ್ತುವಾರಿ, ಸಾರ್ವಜನಿಕ ವಲಯದ ಘಟಕಗಳ ನಡುವೆ ಗರಿಷ್ಠ ಸಂಪನ್ಮೂಲ ಬಳಕೆ ಹಾಗೂ ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳೊಡನೆ ಸಹಕಾರ ಇತ್ಯಾದಿಗಳ ಮೂಲಕ ಪುನರುಜ್ಜೀವನಗೊಂಡ ಘಟಕಗಳನ್ನು ಮತ್ತಷ್ಟು ಬಲಪಡಿಸಿ ಈ ಮೂಲಕ ಹೆಚ್ಚಿನ ಉದ್ಯೋಗಾವಕಾಶಗಳನ್ನು ನಿರ್ಮಿಸಲು ಈ ಹಣವನ್ನು ಬಳಸಲಾಗುತ್ತದೆ ಎಂದು ಪ್ರೊ. ಐಸಾಕ್ ಹೇಳಿದ್ದಾರೆ. ಕೊಲ್ಲಿ ದೇಶಗಳಿಂದ ಕೆಲಸ ಕಳಕೊಂಡು ಹಿಂದಿರುಗುವ ಕಾರ್ಮಿಕರಿಗೆ ಸದ್ಯದ ಪರಿಹಾರಕ್ಕೆಂದು 110 ಕೋಟಿ ರೂ. ನೀಡಲಾಗಿದೆ ಹಾಗೂ ಅವರನ್ನು ಆರ್ಥಿಕದಲ್ಲಿ ಒಳಗೊಳ್ಳಲು ಉದ್ಯೋಗಾವಕಾಶಗಳ ನಿರ್ಮಾಣದ ಬಗ್ಗೆ ಯೋಚಿಸಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಉತ್ತಮ ಸೌಹಾರ್ದ ಪರಂಪರೆಯ ರಾಯಚೂರಿನಲ್ಲಿ ಕೇಸರಿಪಡೆಗಳ ತಂತ್ರಗಾರಿಕೆ ನಡೆದಿದೆ. ಕಾಂಗ್ರೆಸ್‌ಗೆ ಈ ಬಗ್ಗೆ ಎಚ್ಚರವೇ ಇಲ್ಲ. ಜನಪರ ಸಂಘಟನೆಗಳು ಜಾಗೃತವಾಗಿವೆ. ಭಯೋತ್ಪಾದನೆಗೆ ವಿರೋಧದ ಹೆಸರಿನಲ್ಲಿ ಸರ್ಕಾರಿ ಪ್ರಾಯೋಜಿತ ಸಂಘ ಪರಿವಾರದ ಕಾರ್ಯಕ್ರಮದ ಅಭಿಯಾನ ಒಡ್ಡಲಾದ ಪ್ರತಿರೋಧವೇ ಇದಕ್ಕೆ ಸಾಕ್ಷಿ.

ಸೂಫಿ ಸಂತರ ನಾಡಿನಲ್ಲಿ ಸೈತಾನರ ಹಾವಳಿ !

'ದೋಆಬ್' ಹೆಸರಿನಲ್ಲಿ ಪ್ರಸಿದ್ಧವಾದ ರಾಯಚೂರು ಜಿಲ್ಲೆ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡಿದಾಗ ಸೂಫಿ-ಸಂತರಿಂದ, ಶರಣ-ಶರಣೆಯರಿಂದ, ದಾಸ ಪರಂಪರೆಯಿಂದ ಶ್ರೀಮಂತಗೊಂಡಿದೆ. ಹಿಂದೂ-ಮುಸಲಿಂ ಸೌಹಾರ್ದತೆಯಲ್ಲಿ ಹೆಸರಾದಂತ ತಿಂಥಣಿಯ ಮೌನೇಶ್ವರ ಕ್ಷೇತ್ರ, ರಾಮದಾಸನ ನೆಲೆ, ಸುಲ್ತಾನಪುರದ ಮರಡಿ ಗಂಗಾಧರೇಶ್ವರ ಹೀಗೆ ಹೆಸರಿಸುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಮುಸರಕಲ್ಲಿನ ಶಿವಶರಣೆ ಮುಕ್ತಾಯಕ್ಕನ್ನಾಗಲಿ ಅಥವಾ ಮಾನವಿಯ ಜಗನ್ನಾಥ ದಾಸರನ್ನಾಗಲಿ ಈ ಜಿಲ್ಲೆಯ ಜನತೆ ಒಂದಿನಿತು ಮರೆಯುತ್ತಿಲ್ಲ. ಆದರೆ ಇವಕ್ಕೆಲ್ಲಾ ಅಪಚಾರ ಎಸಗುವಂಥ ರೀತಿಯಲ್ಲಿ ಜಿಲ್ಲೆಯ ಜನತೆಯ ಒಂದು ವಿಭಾಗದಲ್ಲಿ ಸಂಘ ಪರಿವಾರದ ಸೈತಾನಗಿರಿ ಹೆಡೆಯೊಡೆತೊಡಗಿದ್ದು ಶಾಂತಿಗೆ, ಹೋರಾಟಕ್ಕೆ ಹೆಸರುವಾಸಿಯಾದ ಜಿಲ್ಲೆಯ ಜನತೆ ಆತಂಕದಲ್ಲಿ ಬದುಕುವಂತಾಗಿದೆ.

ಎಡ ಭಯೋತ್ಪಾದಕರನ್ನು ಅರೆಸ್ಟ್ ಮಾಡಿ!

"ಏ... ಪೊಲೀಸರೇ ಎಡ ಭಯೋತ್ಪಾದಕರನ್ನು ಅರೆಸ್ಟ್ ಮಾಡಿ' ಎಂದು ವಿಧಾನಪರಿಷತ್ ಶಾಸಕ ಮನೋಹರ ಮಸ್ಕಿ ಅರುಚುತ್ತಲೇ ಇದ್ದ. ಆದರೆ ಪೊಲೀಸರು ಮಾತ್ರ ಘೋಷಣೆಗಳನ್ನು ಹಾಕುತ್ತಿದ್ದ ಎಸ್‌ಎಫ್‌ಐ ಕಾರ್ಯಕರ್ತರನ್ನು ಸುಮ್ಮನೆ ನೋಡುತ್ತ ನಿಂತಿದ್ದರು. ಅಸಾಹಯಕ ವಿದ್ಯಾರ್ಥಿಗಳನ್ನು ಬಂಧಿಸಲು ಪೊಲೀಸರ ಮನ ಒಪ್ಪಲಿಲ್ಲ ಎಂದು ಕಾಣುಸುತ್ತದೆ. ಆದರೆ ಎಸ್‌ಎಫ್‌ಐ ಕಾರ್ಯಕರ್ತರು ಮಾತ್ರ ವೀರಾವೇಶದಿಂದ ಶಿಕ್ಷಣ ರಂಗವನ್ನು ಕೇಸರೀಕರಣ ಮಾಡುತ್ತಿರುವ ಬಿಜೆಪಿ ಗೆ ಧಿಕ್ಕಾರ, ಪಕ್ಷಪಾತಿ ಭಯೋತ್ಪಾದನೆ ವಿರೋಧಿ ಕಾರ್ಯಕ್ರಮಕ್ಕೆ ಧಿಕ್ಕಾರ, ಭಯೋತ್ಪಾದಕರಿಗೆ ಧರ್ಮವಿಲ್ಲ, ಕೋಮುವಾದ ಹಬ್ಬಿಸುತ್ತಿರುವ ಬಿಜೆಪಿಗೆ ಧಿಕ್ಕಾರ, ಫ್ಯಾಸಿಸ್ಟ್ ಬಿಜೆಪಿಗೆ ಧಿಕ್ಕಾರ, ಕಾರ್ಯಕ್ರಮ ಉದ್ಘಾಟಿಸಲು ಬಿಡುವುದಿಲ್ಲ ಇತ್ಯಾದಿ ಘೋಷಣೆಗಳು ಭೋರ್ಗರೆಯುತ್ತಿದ್ದವು.

ಸರ್ಕಾರದ ಸುತ್ತೋಲೆಗೆ ಅಂಜಿ ಮನಸ್ಸಿಲ್ಲದೆ ಮನಸ್ಸಿನಿಂದ ಕಾರ್ಯಕ್ರಮಕ್ಕೆಬಂದಿದ್ದ ಶಿಕ್ಷಣ ರಂಗದವರೆಲ್ಲಾ ಮುಸಿಮುಸಿ ನಗುತ್ತ ನಿಂತಿದ್ದರೆ ಕಾರ್ಯಕ್ರಮ ಉದ್ಘಾಟಿಸಲೆಂದೇ ಬಂದ ಚಡ್ಡಿದಾರಿ ಮನೋಹರ ಮಸ್ಕಿ ಬಾಲಸುಟ್ಟ ಬೆಕ್ಕಿನಂತೆ ಎಗರಾಡುತ್ತಿದ್ದ. ತಾನು ಎಸ್‌ಎಫ್‌ಐ ಕಾರ್ಯಕರ್ತರನ್ನು ಎಡ ಭಯೋತ್ಪಾದಕರೆಂದು ಕರೆದ ಮೇಲೂ ಪೊಲೀಸರು ಬಂಧಿಸದೆ ವೇದಿಕೆ ಮತ್ತು ಎಸ್‌ಎಫ್‌ಐ ಕಾರ್ಯಕರ್ತರ ಮಧ್ಯೆ ಗೋಡೆಯಂತೆ ನಿಂತುಬಿಟ್ಟಿದ್ದು ತನಗೆ ಮಾಡಿದ ಅವಮಾನ ಎಂದೆ ಭಾವಿಸಿದ ಮನೋಹರ ಮಸ್ಕಿ ಆ ಗದ್ದಲದ ನಡೆವೆಯೇ ಉದ್ಘಾಟನಾ ಭಾಷಣ ಆರಂಭಿಸಿದ. ಅದನ್ನು ಕಂಡ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಕೆ.ರಂಗನಾಥ್ ಪೊಲೀಸರ ಪಡೆಯ ಅಡ್ಡಗೋಡೆ ಬೇಧಿಸಿ ವೇದಿಕೆಗೆ ನುಗ್ಗಿ ಮನೋಹರ ಮಸ್ಕಿ ಕೈಲಿದ್ದ ಮೈಕು ಕಸಿದುಕೊಳ್ಳಲು ಯತ್ನಿಸಿದ. ಸಭಾಂಗಣದಿಂದ ನೂರಾರು ಕಂಠಗಳು ಪ್ರತಿಧ್ವನಿಸಿದವು. ಪೊಲೀಸರು ವೇದಿಕೆಯೇರಿ ಕೆ.ರಂಗನಾಥನನ್ನು ಬಂಧಿಸಿ ಎಳೆದೊಯ್ಯುತ್ತಿದ್ದರು. ಆದರೆ ಎದೆಗುಂದದೆ ವಿದ್ಯಾರ್ಥಿಗಳು ಪ್ರತಿಘೋಷಣೆ ಹಾಕುತ್ತಾ ಮುಖಂಡನನ್ನು ಹಿಂಬಾಲಿಸಿದರು. ಕಾರ್ಯದರ್ಶಿ ಶಿವಕುಮಾರ್ ಸೇರಿದಂತೆ ಸಂಗಾತಿಗಳಾದ ಮೇಷಕ್, ಭೀಮರಾಜು, ಈಶ್ವರ, ಶ್ರೀಧರ, ರಾಜು, ಶಾಮಿತ್ ಮುಂತಾದವರು ಬಂಧಿತರಾದರು. ಮುಖಂಡರನ್ನು ಬಂಧಿಸಿ ವ್ಯಾನಿನಲ್ಲಿ ಹಾಕಿಕೊಂಡು ಹೋಗುತ್ತಿದ್ದಾಗಲೂ ಸಹ ಉಳಿದ ಕಾರ್ಯಕರ್ತರು ಎಡಬಿಡದೆ ಘೋಷಣೆಗಳನ್ನು ಹಾಕುತ್ತಲೇ ಇದ್ದರು. ಆದರೆ ಈ ಎಲ್ಲಾ ಗೊಂದಲದಲ್ಲಿ ಕಾರ್ಯಕ್ರಮಕ್ಕೆ ಬಂದವರು ಹಾಗೆ ಹೊರಟುಹೋದರು. ಮಾಧ್ಯಮಗಳು ಹೋರಾಟಗಾರರ ಬೆನ್ನುಹತ್ತಿದರು. ಬೈಟ್‌ಗಳನ್ನು ಪಡೆದರು. ರಾಜ್ಯಾದ್ಯಂತ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಎರಡು ದಿನಗಳ ಕಾಲ ಎಸ್‌ಎಫ್‌ಐ ಕಾರ್ಯಕರ್ತರು ವೇದಿಕೆಗೆ ನುಗ್ಗಿದ, ಬಂಧಿಸಿ ಎಳೆದೊಯ್ಯುತ್ತಿರುವ ಬೈಟ್‌ಗಳ ಮಾಹಿತಿ ಇರುವುದನ್ನು ಪುನಃ ಪುನಃ ಪ್ರಸಾರ ಮಾಡಿತು.



ಪರಿಣಾಮವಾಗಿ ಜಿಲ್ಲೆಯಾದ್ಯಂತ ಕೋಮುವಾದಿ ಬಿಜೆಪಿಯ ಬಣ್ಣ ಸಾಮಾನ್ಯರಿಗೂ ಗೊತ್ತಾಗುವಂತಾಯ್ತು.

ಆಪರೇಷನ್ ಕಮಲ: ಕೆಸರಲ್ಲಿ ಹೂತುಹೋದ ಕಾಂಗ್ರೆಸ್

ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ಆಳವಾಗಿ ಬೇರುಬಿಟ್ಟ ಪಕ್ಷ. ಆದರೆ ಬಿಜೆಪಿಯ ಕೋಮುವಾದದ ಬಗ್ಗೆಯಾಗಲೀ, ಫ್ಯಾಸಿಸ್ಟ್ ಮನೋಭಾವದ ಬಗ್ಗೆಯಾಗಲೀ ಒಂದೇ ಒಂದೂ ಹೋರಾಟ ಕಾರ್ಯಕ್ರಮ ಕೈಗೊಂಡಿಲ್ಲ. ಪರಿಣಾಮವಾಗಿ ಕಾಂಗ್ರೆಸ್‌ನಲ್ಲಿರುವ ಮುಖಂಡರಿಗೆ ಕಾಂಗ್ರೆಸ್‌ಗೂ - ಬಿಜೆಪಿಗೂ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಹಿಂದೆ ಇಂತಹ ಸ್ಥಿತಿ ಬಳಸಿಕೊಂಡ ಬಿಜೆಪಿ ಕಾಂಗ್ರೆಸ್‌ನಲ್ಲಿದ್ದ ಮಾನಪ್ಪ ವಜ್ಜಲ ಮತ್ತು ಪ್ರತಾಪಗೌಡರನ್ನು ಸೆಳೆದುಕೊಂಡು ಬಿಜೆಪಿ ಟಿಕೆಟ್ ನೀಡಿ ಗೆಲ್ಲಿಸಿ ಶಾಸಕರನ್ನಾಗಿ ಮಾಡಿ ಕಾಂಗ್ರೆಸ್ಸಿಗೆ ಪೆಟ್ಟುಕೊಟ್ಟಿತು. ಕಳೆದ ಉಪ ಚುನಾವಣೆಯ ವೇಳೆ ಸಿ.ಎಸ್. ಪಾಟೀಲರನ್ನು ಸೇರಿಸಿ ಕೊಂಡಿತು. ಈಗ ಕಾಂಗ್ರೆಸ್ಸಿನ ಗಣ್ಯ ಮುಖಂಡ ಎಂ.ಪಿ. ಅಭ್ಯರ್ಥಿ ಎಂದೆ ಬಿಂಬಿತವಾಗಿದ್ದ ಅಮರೇಶ್ ನಾಯಕರನ್ನು ಸೆಳೆದು ಕೊಂಡಿದೆ. ಇಷ್ಟಾದರೂ ಕಾಂಗ್ರೆಸ್ಸಿಗೆ ಬಿಜೆಪಿ ನೀತಿಗಳ ವಿರುದ್ಧ ಹೋರಾಡಲು ಸಾಧ್ಯವಾಗುತ್ತಿಲ್ಲ. ಜಿಲ್ಲೆಯ ಜೆಡಿಎಸ್ ಸ್ಥಿತಿ ಸಹ ಇದಕ್ಕಿಂತ ಭಿನ್ನವಾಗಿಲ್ಲ. ಕನಿಷ್ಟ ಹೋರಾಟ ದಲ್ಲಿ ಇರುವವರಿಗಾದ[illegible] ಬೆಂಬಲಿಸೋಣ ಎಂಬ ತಿಳುವಳಿಕೆ ಇಲ್ಲ. ಬಿಜೆಪಿ ಆಡಳಿತ ಮಾಡಲಿ, ಆಗ ಅದು ಜನವಿರೋಧಿ ಯಾಗುತ್ತದೆ, ಆಗ ಆಡಳಿತ ವಿರೋಧಿ ಅಲೆಯಲ್ಲಿ ತಾವು ಗೆದ್ದು ಅಧಿಕಾರ ಹಿಡಿದರಾಯ್ತು ಎಂದು ಕನಸು ಕಾಣ್ತಾ ಕುಂತಿವೆ.

ಹಾಲಿ ಮುಖ್ಯಮಂತ್ರಿ V/s ಭಾವಿ ಮುಖ್ಯಮಂತ್ರಿ

ಭಾವಿ ಮುಖ್ಯಮಂತ್ರಿ ಶ್ರೀರಾಮುಲು ರವರ ಕಟ್ಟಾ ಹಿಂಬಾಲಕರೆಂದೇ ಹೆಸರಾದ ಸಚಿವ ಶಿವನಗೌಡ ನಾಯಕ ಭಯೋತ್ಪಾದನಾ ವಿರೋಧಿ ಅಭಿಯಾನದ ಕಡೆ ಹಣಿಕಿ ಹಾಕಲಿಲ್ಲ. ಈ ಬಗ್ಗೆ ಶಿವನಗೌಡ ನಾಯಕನ ಹಿಂಬಾಲಕನೊಬ್ಬನನ್ನು ಕೇಳಿದಾಗ ಹೇಳಿದ್ದನೆಂದರೆ ನಮ್ಮ ಗೌಡರು ಶ್ರೀರಾಮುಲು ಹೇಳಿರುವುದನ್ನು ಮಾತ್ರ ಮಾಡ್ತಾರೆ ಎಂದು. ಅಂದರೆ ಈ ಅಭಿಯಾನ ಸಂಘ ಪ್ರಾಯೋ[illegible] ಕಾರ್ಯಕ್ರಮವೇ ಹೊರತು [illegible] ಬಿಜೆಪಿಯದ್ದಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರೇಮಿಗಳ ದಿನ ಬಗ್ಗೆ ಪ್ರಮಾದ ಮುತಾಲಿಕ ಹೇಳಿದ್ದಕ್ಕೆಲ್ಲಾ ಯೆಡ್ಡಿ ಪ್ರತಿಕ್ರಿಯಿಸಲಿಲ್ಲ. ಆದರೆ ಗದಗದಲ್ಲಿ ಶ್ರೀರಾಮುಲು ವ್ಯಾಲೆಂಟೈನ್ ಡೇ ಆಚರಣೆ ವಿರೋಧಿಸಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮರುದಿನದಿಂದಲೇ ಯಡ್ಡಿಯವರು ಶ್ರೀರಾಮುಲುರವರನ್ನು ಅನುಸರಿಸಿದ್ದು ಈಗ ಜನಜನಿತ. ಸರ್ಕಾರದ ಸೂತ್ರ ಗಣಧಣಿಗಳ ಕೈಲಿ. ಪಾತ್ರದಾರಿ ಮಾತ್ರಯಡ್ಡಿ. ದೇವದುರ್ಗ ಉಪಚುನಾವಣೆಯಲ್ಲಿ ಭಾವಿ ಮುಖ್ಯಮಂತ್ರಿ ಹಿಂಬಾಲಕ ಚುನಾವಣೆಗೆ ನಿಂತಿದ್ದಾಗ ಹಾಲಿ ಮುಖ್ಯಮಂತ್ರಿಗಳ ಕಟ್ಟಾ ಹಿಂಬಾ[illegible] ಜನ್ಮತಃ ಚಡ್ಡಿದಾರಿಗಳೆಂದು ಹೆಸರಾದ ಮನೋಹರ ಮಸ್ಕಿಯಾಗಲಿ ಅಥವಾ ಎನ್.ಶಂಕ್ರಪ್ಪನವರ[illegible] ಪ್ರಚಾರದಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳಲಿಲ್ಲ ಎಂದು ಅವರ ಹಿಂಬಾಲಕರೆ ಆಡಿಕೊಳ್ಳುತ್ತಿದ್ದಾರೆ. ಬಿಜೆಪಿಯಲ್ಲಿ ಇಷ್ಟೆಲ್ಲಾ ಒಡಕುಗಳಿದ್ದರೂ ಆಪರೇಷನ್ ಕಮಲ ಯಶಸ್ವಿಗೆ ಕಾರಣ ಬಿಜೆಪಿಯಲ್ಲಿ ಸಾಕಷ್ಟು ಭ್ರಷ್ಟಾಚಾರಕ್ಕೆ ಅವಕಾಶಗಳಿರುವುದು ಎಂಬುದು ಕಾರಣವಂತೆ.

ಗಾಢಾಂಧಕಾರದಲ್ಲಿ ಮಿಣುಕುವ ಹಣತೆಗಳಿವೆ

ಇಷ್ಟೆಲ್ಲಾ ಗಂಭೀರ ವಾತಾವರಣದಲ್ಲೂ ಸಿಪಿಐ(ಎಂ), ಸಿಪಿಐ, ದಸಂಸಗಳು, ರಾಜ್ಯ ರೈತ ಸಂಘ ಇತ್ಯಾದಿ ಪ್ರಗತಿಪರ ಸಂಘಗಳು ಜಾಥಾಗಳ ಮೂಲಕ ವಿಚಾರಸಂಕಿರಣಗಳ ಮೂಲಕ ಇತರ ಕಾರ್ಯಕ್ರಮಗಳ ಮೂಲಕ ಬಿಜೆಪಿಯ ಕೋಮುವಾದಕ್ಕೆ ವಿರುದ್ಧವಾಗಿ ಸೆಟೆದು ನಿಂತಿವೆ. ಜಿಲ್ಲೆಯ ಜನತೆ ಶತಶತಮಾನಗಳಿಂದಲೂ ಸೌಹಾರ್ದ ರೀತಿಯಲ್ಲಿ ಬದುಕಿರುವುದರಿಂದ ಕೋಮುವಾದಿಗಳನ್ನು ಕಡೆಗಣ್ಣೋಟದಿಂದಲೇ ಕಾಣುತ್ತಿದ್ದು ಕೋಮುಸೌಹಾರ್ದತೆಗೆ ಯತ್ನಿಸುತ್ತಿರುವವರನ್ನು ಹೃದಯತುಂಬಿ ಸ್ವಾಗತಿಸುತ್ತಿದ್ದಾರೆ.

■ ಮಲ್ಲಯ್ಯ ಜಾಲಹಳ್ಳಿ

ಕೋಟ್ಯಾಂತರ ರೂಪಾಯಿಗಳ ದುಂದು, ಸರ್ಕಾರಿ ಯಂತ್ರದ ದುರ್ಬಳಕೆ, ಒತ್ತಡ ತಂತ್ರದ ಮೂಲಕ ಸಂಘ ಪರಿವಾರದ ನಿರ್ದೇಶನದಂತೆ ರಾಜ್ಯ ಬಿಜೆಪಿ ಸರ್ಕಾರ ನಡೆಸಿದ ಕೃಪಾಪೋಷಿತ ಭಯೋತ್ಪಾದನಾ ವಿರೋಧಿ ಅಭಿಯಾನದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಫೆ.28, 2009 ಬೆಂಗಳೂರು.



ಸರ್ಕಾರಿ ದಮನ ದಬ್ಬಾಳಿಕೆಯನ್ನು ಎದುರಿಸಿ, ಭಯೋತ್ಪಾದನಾ ವಿರೋಧಿ ಅಭಿಯಾನದ ಹೆಸರಿನ ವಿಭಜನಕಾರಿ, ಕೋಮುವಾದಿ ಪ್ರಚಾರವನ್ನು ಪ್ರತಿಭಟಿಸಿದ ವಿದ್ಯಾರ್ಥಿ - ಯುವಜನ ಸಂಘಟನೆಗಳ ಪ್ರತಿಭಟನೆ. ಹೋರಾಟದಲ್ಲಿ ಪಾಲ್ಗೊಂಡಿದ್ದ ಎಸ್‌ಎಫ್‌ಐ, ಡಿವೈಎಫ್‌ಐ, ವಿಜೆಡಿ(ಎಸ್), ಎನ್‌ಎಸ್‌ಯುಐ, ಯುವ ಕಾಂಗ್ರೆಸ್, ಡಿಎಸ್‌ಎಫ್ ಮುಂತಾದ ಸಂಘಟನೆಗಳ ಮುಖಂಡರನ್ನು ಪೊಲೀಸರು ಬಂಧಿಸಿ ಸರ್ಕಾರ ಪ್ರಜಾಪ್ರಭುತ್ವ ವಿರೋಧಿ ಧೋರಣೆ ಬಯಲಾಯಿತು.



ಬಿಜೆಪಿಯ ಹೊಲಸು 'ಆಪರೇಷನ್ ಕಮಲ'ದ ಪ್ರಯತ್ನ ಮುಂದುವರಿದೇ ಇದೆ. ಆದರೆ ಮೈಸೂರು ಮೇಯರ್ ಚುನಾವಣೆಯಲ್ಲಿ ಅದು ವಿಫಲವಾಗಿ ಬಿಜೆಪಿ ಮುಖಭಂಗಕ್ಕೀಡಾಯಿತು. ಎಲ್ಲಕ್ಕಿಂತ ಸ್ವಾರಸ್ಯ ಎಂದರೆ ಪಾಲಿಕೆ ಸಭಾಂಗಣದಲ್ಲೇ ಬಿಜೆಪಿ ಸದಸ್ಯರು ಕಾಂಗ್ರೆಸ್ ಸದಸ್ಯರಿಗೆ ಕೊಟ್ಟ 25 ಲಕ್ಷ ರೂ. ಹಣವನ್ನು ಬಹಿರಂಗವಾಗಿ ವಾಪಸು ಬಿಸಾಕಿ ಎಂದು ಆಗ್ರಹಿಸಿದ್ದು.

ಮೈಸೂರು ಮೇಯರ್ ಚುನಾವಣೆ

ಬಯಲಾದ ಬಿಜೆಪಿ ಹೊಲಸು

'ಬೋಲೋ ಭಾರತ್ ಮಾತಾಕಿ ! 25 ಲಕ್ಷ ಬಿಸಾಕಿ!' ಮೈಸೂರು ನಗರಪಾಲಿಕೆಯ ಸಭಾಂಗಣದಲ್ಲಿ ಮೊಳಗಿದ ಈ ಘೋಷಣೆಯು ಬಿಜೆಪಿಯು 'ಆಪರೇಷನ್ ಕಮಲ'ದ ನಿಜಬಣ್ಣವನ್ನು ಬಹಿರಂಗ ಪಡಿಸಿತು. ಫೆಬ್ರವರಿ 19 ರಂದು ನಡೆದ ಮೇಯರ್, ಉಪಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರನ್ನು ಖರೀದಿಸಿ, ಅಪಹರಿಸಿ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡು ಮೈಸೂರಿನ ಮೇಯರ್ ಹುದ್ದೆಯನ್ನು ಸಂಪಾದಿಸಲೇಬೇಕೆಂದು ಕನಸು ಕಂಡಿದ್ದ ಬಿಜೆಪಿ ಭಾರಿ ಮುಖಭಂಗ ಅನುಭವಿಸಿದೆ. 'ಕೊಟ್ಟವನು ಕೋಡಂಗಿ, ಇಸಕೊಂಡವರು ಈರಭದ್ರ' ಎನ್ನುವಂತೆ ಬಿಜೆಪಿಯಿಂದ ಹಣ ಪಡೆದೂ ಯುವ ಕಾಂಗ್ರೆಸ್ ಕಾರ್ಯಕರ್ತರ ಧೈರ್ಯ, ವಾರ್ಡಿನ ನಾಗರಿಕರ ಪ್ರತಿರೋಧದಿಂದಾಗಿ ಕೊನೇ ಕ್ಷಣದಲ್ಲಿ ಕಾಂಗ್ರೆಸ್ ಪರವಾಗಿ ನಿಂತ ಕೆಲ ಸದಸ್ಯರು ಕಾಂಗ್ರೆಸ್‌ನ ಅಭ್ಯರ್ಥಿಯನ್ನು ದಡ ಸೇರಿಸಿ ಬಿಜೆಪಿಯನ್ನು ಮುಳುಗಿಸಿದರು. ತನ್ನ ಖರೀದಿ ವ್ಯವಹಾರವನ್ನು ಬಹಿರಂಗವಾಗಿ ಘೋಷಣೆ ಮೂಲಕ ಅದೂ ತಮ್ಮ ನೆಚ್ಚಿನ ಭಾರತ ಮಾತೆಯ ಜೊತೆ ಸಮೀಕರಿಸುವ ಮೂಲಕ ಭಾರತ ಮಾತೆಗೂ ಬಿಜೆಪಿಯವರು ಒಂದು ಗತಿ ಕಾಣಿಸಿದರು.

ಎಚ್ಚೆತ್ತ ಕಾಂಗ್ರೆಸ್

ಪಾಲಿಕೆ ಒಟ್ಟು ಸದಸ್ಯರ ಸಂಖ್ಯೆ 65. ಜನತಾದಳ(ಜಾತ್ಯಾತೀತ)ದಿಂದ ಆಯ್ಕೆಯಾಗಿದ್ದ 18 ಸದಸ್ಯರ ಪೈಕಿ 8 ಸದಸ್ಯರು ಕೆಲ ತಿಂಗಳ ಹಿಂದೆ 'ಆಪರೇಷನ್ ಕಮಲ' ದಿಂದಾಗಿ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದರು. ಮೇಯರ್ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸದಸ್ಯರಿಗೂ ಗಾಳ ಬೀಸಿದ್ದ ಬಿಜೆಪಿ ವಿಶೇಷವಾಗಿ ಮಹಿಳಾ ಸದಸ್ಯರನ್ನು ಗುರಿಯಾಗಿಸಿತ್ತು. ಮಹಿಳಾ ಸದಸ್ಯರ ಪತಿ, ಮಕ್ಕಳು ನೇರವಾಗಿ ಬಿಜೆಪಿಯೊಂದಿಗೆ ಡೀಲಿಗಿಳಿದಿದ್ದರು. ನಗರದ ಬಳಿಯ 'ಚಿತ್ರವನ' ರೆಸಾರ್ಟ್‌ನಲ್ಲಿ ಡೀಲು ಕುದುರಿಸಿ ನಡುರಾತ್ರಿ ನಗರಕ್ಕೆ ಮರಳುತ್ತಿದ್ದಾಗ ಅಪಘಾತವಾಗಿ ಆಸ್ಪತ್ರೆ ಸೇರಿದಾಗಲೇ ಕಾಂಗ್ರೆಸ್ ಎಚ್ಚೆತ್ತುಕೊಂಡಿತು. ಶತಾಯಗತಾಯ ಬಿಜೆಪಿಯ ಪ್ರಯತ್ನಗಳನ್ನು ಹುಸಿಗೊಳಿಸಲು ಜನತಾದಳದೊಂದಿಗೆ ಒಪ್ಪಂದ ಕುದುರಿಸಿಕೊಂಡಿತು. ಪಕ್ಷಾಂತರ ಮಾಡಬಹುದು ಎನ್ನುವ ಶಂಕೆಯಿದ್ದ ಸದಸ್ಯರ ಮನೆಗಳ ಮುಂದೆ ಧರಣಿ, ಅವರು ಪ್ರತಿನಿಧಿಸುತ್ತಿದ್ದ ವಾರ್ಡಿನ ನಾಗರಿಕರ ಮಧ್ಯೆ ಪ್ರಚಾರ ನಡೆಸುವ ಮೂಲಕ ವಿಷಯವನ್ನು ಬದಲಿಸುವಂತೆ ಒತ್ತಡ ಹೇರುವ ತಂತ್ರವನ್ನು ಕಾಂಗ್ರೆಸ್ ನಡೆಸಿತು. ಇದರಲ್ಲಿ ಕೆಲಮಟ್ಟಿಗೆ ಯಶಸ್ವಿಯೂ ಆಯಿತು. ಬಿಜೆಪಿಯನ್ನು ಬೆಂಬಲಿಸಿದ್ದ ಮುಸ್ಲಿಂ ಸದಸ್ಯರ ಮೇಲೆ ಆ ಸಮುದಾಯದ ಮುಖಂಡರುಗಳ ಮೂಲಕ ಹೇಳಿಸುವ ಪ್ರಯತ್ನವೂ ನಡೆಯಿತು. ಕಾಂಗ್ರೆಸ್ ಹಾಗೂ ಜನತಾದಳದ ಮಧ್ಯೆ ಒಡಂಬಡಿಕೆ ಏರ್ಪಟ್ಟು ಮೇಯರ್ ಸ್ಥಾನವನ್ನು ಕಾಂಗ್ರೆಸ್‌ಗೆ ಉಪಮೇಯರ ಸ್ಥಾನವನ್ನು ಜನತಾದಳಕ್ಕೆ ಬಿಟ್ಟುಕೊಡಲು ತೀರ್ಮಾನಿಸಲಾಯಿತು.



'ರಣರಂಗ'

ಈ ಬಾರಿ ಮೇಯರ್ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದು, ಬಿಜೆಪಿಯಲ್ಲಿ ಆ ಸಮುದಾಯಕ್ಕೆ ಸೇರಿದ ಯಾವ ಸದಸ್ಯನೂ ಇರಲಿಲ್ಲ. ಹೀಗಾಗಿ ಜನತಾದಳದಿಂದ ಬಂದಿದ್ದ ಪ್ರಭುಮೂರ್ತಿಯನ್ನು ತನ್ನ ಮೇಯರ್ ಅಭ್ಯರ್ಥಿ ಎಂದು ಅಖೈರುಗೊಳಿಸಿತು. ಚುನಾವಣೆಯ ದಿನ ಬಸ್ಸಿನಲ್ಲಿ ಬಂದಿಳಿದ ಕಾಂಗ್ರೆಸ್ ಹಾಗೂ ಬೆಂಬಲಿತ ಸದಸ್ಯರು ಪಾಲಿಕೆಯ ಆವರಣ ಪ್ರವೇಶಿಸುತ್ತಿದಂತೆಯೇ ನೆನ್ನೆವರೆಗೂ ತಮ್ಮೊಡನಿದ್ದು ಅಂದು ಕಾಂಗ್ರೆಸ್ ಪಾಳೆಯ ಸೇರಿದ್ದ ಪಕ್ಷೇತರ ಸದಸ್ಯರ ಅಯೂಬ್ ಪಾಶಾ (ಪಾಂಡು) ರನ್ನು ಕಂಡು ಕೆರಳಿದ ಬಿಜೆಪಿ ಸದಸ್ಯರು ಅವರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಯತ್ನಿಸಿ ಕೊಠಡಿಯೊಂದರಲ್ಲಿ ಕೂಡಿಹಾಕಿದ ನಂತರ ಇಡೀ ಪಾಲಿಕೆ ರಣರಂಗವಾಗಿ ಬದಲಾಗಿಹೋಯಿತು.

ಸದಸ್ಯರನ್ನು ಹೊರ ತರಲು ಮುಂದಾದ ಕಾಂಗ್ರೆಸ್‌ನ ಕೆಲ ಸದಸ್ಯರು ಗಾಯಗೊಂಡರು. ನಂತರ ನಡೆದದ್ದೆಲ್ಲಾ ಮಾರಾಮಾರಿ ಪ್ರಸಂಗ. ಯಾವಾಗ ಸದಸ್ಯ ಬಲವನ್ನು ಒಗ್ಗೂಡಿಸುವುದು ಸಾಧ್ಯವಿಲ್ಲ, ಸೋಲು ಗ್ಯಾರಂಟಿ ಎಂದು ಬಿಜೆಪಿಗೆ ಮನವರಿಕೆಯಾಯಿತೋ ಶುರುವಾಯಿತು ಅಸಂಬದ್ಧ ಘೋಷಣೆಗಳು. ಹೇಸಿಗೆ ಹುಟ್ಟಿಸುವ ಶಬ್ದಗಳ ಬಳಕೆ. ಅಧಿಕಾರ ಸಿಗದು ಎಂದಾಗ ಇಡೀ ಚುನಾವಣಾ ಪ್ರಕ್ರಿಯೆಯನ್ನು ನಿಲ್ಲಿಸಲು ಬಿಜೆಪಿ ಯತ್ನಿಸಿತು. ಆದರೆ ಇದಾವುದಕ್ಕೂ ಜಗ್ಗದ ನಿರ್ಗಮಿತ ಮೇಯರ್ ಅಯೂಬ್ ಖಾನ್ ಚುನಾವಣೆ ನಡೆಸಿ 37 ಮತ ಸಂಪಾದಿಸಿದ ಕಾಂಗ್ರೆಸ್‌ನ ಪುರುಷೋತ್ತಮರನ್ನು ಮೇಯರ್ ಎಂದು 36 ಮತ ಗಳಿಸಿದ ಜನತಾದಳದ ಶಾರದಮ್ಮ ಅವರನ್ನು ಉಪಮೇಯರ್ ಎಂದು ಘೋಷಿಸಿದರು.

ಇಲ್ಲಿ ಗಮನಿಸಬೇಕಿರುವುದು ಇಡೀ ರಾಜ್ಯದಲ್ಲಿ ಗಣಿ ದುಡ್ಡನ್ನು ಸುರಿದು ಜನಪ್ರತಿನಿಧಿಗಳನ್ನು ಖರೀದಿಸಿ ಪ್ರಜಾಪ್ರಭುತ್ವವನ್ನು ಅಣಕಿಸುವಂತೆ, ವಂಚನೆಯಿಂದ ಅಧಿಕಾರ ಹಿಡಿಯಲು ಮೈಸೂರು ಬಿಜೆಪಿ 'ಆಪರೇಷನ್ ಕಮಲ' ಜಾರಿಗೊಳಿಸಿದ್ದು, ಪಾಲಿಕೆ ಸದಸ್ಯರ ಪಕ್ಷಾಂತರದ ವಿರುದ್ಧ ಅವರು ಪ್ರತಿನಿಧಿಸುವ ವಾರ್ಡಿನ ಜನರು ಪ್ರತಿಭಟಿಸಿದ್ದು ಗಮನಾರ್ಹ. ತಮ್ಮನ್ನೇ ಮಾರಿಕೊಂಡವರು ನಗರವನ್ನು ಮಾರದೇ ಬಿಟ್ಟಾರೆಯೇ ಎಂದು ಜನ ಮಾತನಾಡಿಕೊಳ್ಳುವಷ್ಟು ಇದು ಚರ್ಚೆಗೆ ಒಳಗಾಯಿತು. ಸುಸಂಸ್ಕೃತ ನಗರವೆಂದೇ ಹೆಸರಾದ ಮೈಸೂರಿನ ಜನತೆ ಬಿಜೆಪಿಯ ಈ ಆಟಾಟೋಪ ಪ್ರದರ್ಶನದಿಂದ ಮುಜುಗರಕ್ಕೀಡಾಗಿದ್ದೂ ಹೌದು.

ಮೈಸೂರು ಮಹಾನಗರ ಪಾಲಿಕೆಯ ಮೇಲೆ ಕೇಸರಿಧ್ವಜ ಹಾರಿಸುವುದಾಗಿ ಕಳೆದ ಕೆಲ ತಿಂಗಳುಗಳ 'ಆಪರೇಷನ್ ಕಮಲ'ದ ಹಿನ್ನೆಲೆಯಲ್ಲಿ ಬೀಗುತ್ತಿದ್ದ ಬಿಜೆಪಿಗೆ ಇದೊಂದು ತೀವ್ರ ಹಿನ್ನಡೆ.



ನಗರ ಪಾಲಿಕೆ ಸದಸ್ಯರ ಮಾರಾಟ, ಖರೀದಿ, ಅಪಹರಣ, ದಂಗೆ, ದೊಂಬಿ, ಎಲ್ಲವನ್ನು ಪ್ರತಿಭಟಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟವು ಫೆಬ್ರವರಿ 25 ರಂದು ಕೃಷ್ಣರಾಜ ವೃತ್ತದಲ್ಲಿ ಭಾರಿ ಪ್ರದರ್ಶನ ನಡೆಸಿತು. ಪಕ್ಷದ ಸದಸ್ಯರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಬಿಜೆಪಿ, ಕಾಂಗ್ರೆಸ್‌ಗೆ ಬದಲಾಗಿ ಒಂದು ಜನಪರ ಪರ್ಯಾಯದ ಅವಶ್ಯಕತೆಯನ್ನು ಗಟ್ಟಿಯಾಗಿಯೇ ಹೇಳಿದರು.

........ಗಂಗಾಜಲ ಹಂಚುವ ಸರ್ಕಾರ

ಪುಟ 3 ರಿಂದ

ಬೆಳೆದಿದೆ. ಕಾಲಕ್ರಮೇಣ ಅದಕ್ಕೊಂದು ಧಾರ್ಮಿಕ ಸ್ವರೂಪ ಸಂಬಂಧಗಳೂ ಬೆಸೆದಿವೆ. ಹೀಗೆ ಕೃಷಿಗೂ, ಕುಡಿಯಲು ನೀರು ಸರಬರಾಜು ಮಾಡದ ಬಿಜೆಪಿ ಸರ್ಕಾರ ಜನರು ಗಂಗೆಯನ್ನು ಆರಾಧಿಸುವ ಭಾವನಾತ್ಮಕ ನಂಟನ್ನೇ ದುರ್ಬಳಕೆ ಮಾಡಿಕೊಳ್ಳಲು ಪ್ರಯತ್ನಿಸಿದೆ.

ಹಾಗೆಯೇ ಇದೇ ಮುಜರಾಯಿ ಇಲಾಖೆ ಶಿವರಾತ್ರಿಯ ಸಂದರ್ಭದಲ್ಲಿ ಸರ್ಕಾರವೇ ಜಾಗರಣೆಯ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆಯೋಜಿಸಿ ಸಂಘ ಪರಿವಾರಿಗಳ, ಬಿಜೆಪಿ ನಾಯಕರ ದಂಡನ್ನೇ ಅಣಿನೆರೆಸಿ ಲೋಕಸಭೆ ಪ್ರಚಾರ ಉದ್ಘಾಟಿಸಿತು. ಚುನಾವಣೆಯ ಓಟು ಸೆಳೆಯುವ ಪ್ರಯತ್ನವನ್ನು ಯಶಸ್ವಿಯಾಗಿ ನಡೆಸಿತು. ಅನಂತಕುಮಾರ್, ಸದಾನಂದಗೌಡ, ರಾಮಚಂದ್ರೇಗೌಡರಂಥಹವರು ತಮ್ಮ 'ಸಂಸ್ಕೃತಿ' ಪ್ರತಿಪಾದನೆಯಲ್ಲಿ ಪರಿವಾರದ ಹಾಗೂ ಅವರ ಬಿಜೆಪಿ ಸರ್ಕಾರವೂ ನಡೆಸಿದ ವಿಕೃತಿಗಳನ್ನು ಮುಚ್ಚಿಹಾಕಲು ಹವಣಿಸಿದರು. ಸಂಘ ಪರಿವಾರದ ಸೋಗಿಗೆ ಈಗ 'ಸಂಸ್ಕೃತಿ' ಪರಂಪರೆಯೇ ಮುಖ್ಯ ಮುಖವಾಡವಾಗಿದೆ. ಧಾರ್ಮಿಕತೆಯನ್ನೇ ಕೋಮುವಾದೀಕರಿಸುತ್ತಿದೆ. ಬಿಜೆಪಿಯ ಸರ್ಕಾರದ ಮೂಲಕ ಬಹಿರಂಗವಾಗಿ ಹೀಗೆ ಸಂವಿಧಾನದ ಆಶಯಗಳಿಗೆ ಅಪಚಾರವೆಸಗಿದೆ. ಇದು ಒಂದು ಜಾತಿ, ಧರ್ಮ ಪ್ರತಿನಿಧಿಸುವ ಸರ್ಕಾರವಲ್ಲ ಎಂಬುದನ್ನೂ ಗಮನಿಸಬೇಕು. ಧರ್ಮಗಳ ನಡುವೆ ವಿಭಜನೆ, ತಾರತಮ್ಯ ವನ್ನು ಸರ್ಕಾರವೇ ಬೆಳೆಸುತ್ತಿರುವುದು ಅಪಾಯಕರ.

ಮುಜರಾಯಿ ಇಲಾಖೆ ಏನಿದ್ದರೂ ಹಿಂದೂ ಧಾರ್ಮಿಕದತ್ತ ಸಂಸ್ಥೆಗಳ ನಿರ್ವಹಣೆ, ಭಾದ್ಯತೆಗೆ ಗಮನ ನೀಡಬೇಕಲ್ಲದೇ ಪಕ್ಷವೊಂದರ ಮತೀಯ ಅಜೆಂಡಾ ಜಾರಿಗೆ ಅಲ್ಲ ಎಂಬುವನ್ನು ಅರಿಯಬೇಕು.

ದುಡಿವ ಜನರ ಸಂಕಟ - ಸಂಘರ್ಷದತ್ತ ಜನ

■ ವಿ.ಜೆ.ಕೆ.ನಾಯರ್

ಫೆಬ್ರವರಿ - 2 ರಿಂದ 5 ರವರೆಗೆ ರಾಜ್ಯಾದ್ಯಂತ ಪಿಕೆಟಿಂಗ್, ಬಂಧನ, ಹೋರಾಟ...

ಜನರ ಹೆಚ್ಚುತ್ತಿರುವ ಸಂಕಟಗಳು ಅವರನ್ನು ಆಳುವವರ್ಗಗಳ ವಿರುದ್ಧ ಚಳುವಳಿಗೆ ಇಳಿಯುವಂತೆ ಮಾಡುತ್ತಿವೆ. ಇವತ್ತಿನ ಸರ್ಕಾರ ಕೂಡಾ ಹಿಂದಿನ ಸರ್ಕಾರದ ಹಾಗೇ ಚುನಾವಣೆ ಪ್ರಣಾಳಿಕೆಗಳಲ್ಲಿ ಹಲವಾರು ರಿಯಾಯಿತಿ ಘೋಷಿಸಿ, ಭರವಸೆ ನೀಡಿ ಅಧಿಕಾರಕ್ಕೆ ಬಂದಿತು. ಕಾರ್ಮಿಕ ಮಂತ್ರಿಗಳು ಕಾರ್ಮಿಕರಿಗೆ ಗೌರವಪೂರ್ಣ ಕನಿಷ್ಟ ವೇತನ ನಿಗದಿಪಡಿಸಲಾಗುವುದು ಎಂದು ಸಿಕ್ಕ ಸಿಕ್ಕಲ್ಲೆಲ್ಲಾ ಘೋಷಿಸುತ್ತಾರೆ. ಆದರೆ ಸಿಐಟಿಯು ಒತ್ತಾಯಿಸುತ್ತಿರುವಂತೆ ರಾಜ್ಯಾದ್ಯಂತ 6000 ಕನಿಷ್ಟ ಕೂಲಿ, ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿ 10,0000 ರೂಪಾಯಿ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ಮಾತ್ರ ಸಿದ್ದರಿಲ್ಲ.

ಬೊಬ್ಬೆ ಮಾತ್ರ!

ಸ್ವತಃ ಕಾರ್ಮಿಕ ಮಂತ್ರಿಯೇ ಸಭೆಯೊಂದರಲ್ಲಿ ಗುತ್ತಿಗೆ ಕಾರ್ಮಿಕರನ್ನು ಶೋಷಿಸಲಾಗುತ್ತಿರುವ ಕುರಿತು ಹೇಳಿದರು. ಹಾಗಿದ್ದರೆ ಕಳೆದ 3 ವರ್ಷಗಳಿಂದಲೂ ಸಹ ಗುತ್ತಿಗೆ ಕಾರ್ಮಿಕರ ಸಲಹಾ ಸಮಿತಿ ಸಭೆಯನ್ನೇಕೆ ಕರೆದಿಲ್ಲ ಎಂಬುದಕ್ಕೆ ಉತ್ತರ ಕೊಡಿ, ಹಾಗೆಯೇ ತತ್‌ಕ್ಷಣ ಸಭೆ ಕರೆಯಿರಿ ಎಂದು ಒತ್ತಾಯಿಸಲಾಯಿತು. ಉತ್ತರವಿಲ್ಲ. ಸಭೆಯನ್ನು ಕರೆಯುವುದಿಲ್ಲ, ಸಭೆಯನ್ನು ಕರೆಯಲು ಸಚಿವರಿಗೆ ಇರುವ ಅಡ್ಡಿಯಾದರೂ ಏನು? ಇಷ್ಟಿದ್ದೂ ಸಚಿವರು ಬಹಿರಂಗ ಸಭೆಯಲ್ಲಿ ಬೊಬ್ಬೆ ಹೊಡೆಯುವುದೇಕೆ?

ಗುತ್ತಿಗೆ ಕಾರ್ಮಿಕ ವ್ಯವಸ್ಥೆಯನ್ನು ಶಾಸನಾತ್ಮಕವಾಗಿ ನಿಯಂತ್ರಿಸಲು ಪರಿಣಾಮಕಾರಿ ವ್ಯವಸ್ಥೆ ಮಾಡಲು ಸಿಐಟಿಯು ಒತ್ತಾಯಿಸುತ್ತಿದೆ. ಗುತ್ತಿಗೆ ಕಾರ್ಮಿಕ ಸಲಹಾ ಮಂಡಳಿಯು ಗುತ್ತಿಗೆ ಪದ್ಧತಿಯ ಪರವಾನಗಿ ನೀಡಿಕೆ ನಿಯಂತ್ರಣಕ್ಕಾಗಿ ಉಪಸಮಿತಿಯೊಂದನ್ನು ರಚಿಸಲು ಅವಕಾಶವಿದೆ. ಕಾನೂನು ಬಾಹಿರವಾದ ಗುತ್ತಿಗೆ ವಿಧಾನಗಳನ್ನು ಇದರಿಂದ ನಿಯಂತ್ರಿಸಲು ಸಾಧ್ಯವಿದೆ.

ಏನು ದಾಡಿ?

ಅಂಗನವಾಡಿ ನೌಕರರು ತಮಗೆ ಸೂಕ್ತ ನಿವೃತ್ತಿ ವೇತನ ವ್ಯವಸ್ಥೆಗಾಗಿ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಸರ್ಕಾರ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಿದ್ಧವಿಲ್ಲ. ಇವರನ್ನು ತನ್ನ ನೌಕರರಲ್ಲ



ಎನ್ನುವ ಸರ್ಕಾರ, ಅವರಿಗೆ ತಮ್ಮ ಸೇವೆಯಿಂದ ನಿವೃತ್ತರಾಗಿ ಎಂದು ಹೇಳಲು ಹೇಗೆ ಸಾಧ್ಯ? ಸರ್ಕಾರ ಹಾಗೆ ಹೇಳುತ್ತಿದೆ. ಅದೂ ಯಾವುದೇ ಸೂಕ್ತ ನಿವೃತ್ತಿ ಸೌಲಭ್ಯ ನೀಡದೆ ಹೇಳುತ್ತಿದೆ. ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘವು ಸೂಕ್ತ ನಿವೃತ್ತಿ ವೇತನಕ್ಕಾಗಿ ಒತ್ತಾಯಿಸುತ್ತಿದೆ. ಈ ನ್ಯಾಯಬದ್ಧ ಬೇಡಿಕೆಯನ್ನು ಒಪ್ಪಿಕೊಳ್ಳಲು ಸರ್ಕಾರಕ್ಕೇನು ದಾಡಿ?

ಇನ್ನು ಗ್ರಾಮ ಪಂಚಾಯತ್ ಕಾರ್ಮಿಕರ ಪ್ರಶ್ನೆ. ಜಿಲ್ಲಾ ಪಂಚಾಯತ್ ನೌಕರರು, ತಾಲ್ಲೂಕು ಪಂಚಾಯತ್ ನೌಕರರು ಸರ್ಕಾರಿ ನೌಕರರು. ಆದರೆ ಗ್ರಾಮ ಪಂಚಾಯತಿ ನೌಕರರು ಸರ್ಕಾರಿ ನೌಕರರಲ್ಲ! ಇದೇನನ್ಯಾಯ! ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಗ್ರಾಮ ಪಂಚಾಯತ್ ನೌಕರರೂ ಸರ್ಕಾರಿ ನೌಕರರೇ. ರಾಜ್ಯ ಸರ್ಕಾರವೂ ಯಾಕೆ ಹಾಗೆ ಪರಿಗಣಿಸಬಾರದು.

ಆರ್.ಎಂ.ಸಿ. ಯಾರ್ಡ್‌ಗಳು, ಬಸ್, ರೈಲು ನಿಲ್ದಾಣಗಳು, ಕಾರ್ಖಾನೆಗಳು, ಬಟ್ಟೆ, ದಿನಸಿ ಇತ್ಯಾದಿ ಮಳಿಗೆಗಳಲ್ಲಿ ದುಡಿಯುವ ಹಮಾಲಿಗಳ ಬದುಕು ಹೇಗಿದೆ? ಅವರ ಕೆಲಸದ ಪರಿಸ್ಥಿತಿಯಲ್ಲಿ ಸುಧಾರಣೆ ಬೇಡವೇ? ಅವರಿಗೆ ಕಾಮಿಕ ಸೌಲಭ್ಯ ಬೇಡವೇ? ವಾಸಿಸಲು ಒಂದು ಸ್ವಂತದ್ದು ಎಂಬ ಮನೆ ಬೇಡವೇ? ಇದನ್ನೆಲ್ಲಾ ಕೇಳುವುದರಲ್ಲಿ ತಪ್ಪೇನಾದರೂ ಇದೆಯೇ? ಸರ್ಕಾರ ಯಾಕೆ ಇದನ್ನೆಲ್ಲಾ ಪರಿಗಣಿಸುತ್ತಿಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ದುಡಿಯುವ ಕೂಲಿಕಾರರಿಗೆ ಸರ್ಕಾರ ನೀಡುವ ಕೂಲಿ ಸಾಕೆ? ಈ ದುಬಾರಿ ಕಾಲದಲ್ಲಿ ಕನಿಷ್ಟ 150 ರೂಪಾಯಿಯಾದರೂ ದಿನಗೂಲಿ ಸಿಗದೆ ಹೋದರೆ ಹೇಗೆ?

2 ರೂ. ಗೆ ಅಕ್ಕಿ ಬೇಕು

ಹೀಗೆ ಇನ್ನೂ ಎಷ್ಟೋ ವಿಭಾಗಗಳ ದುಡಿಯುವ ಜನರಿದ್ದಾರೆ. ಅವರಿಗೆ ಸಮ್ಮಾನವಾದ ಪಡಿತರ ಚೀಟಿ, ನಿವೇಶನ, ಮನೆ ಮುಂತಾದ ಸಮಾನ ಬೇಡಿಕೆಗಳಿವೆ. ಚುನಾವಣಾ ಪ್ರಣಾಳಿಕೆಯಲ್ಲಿ 2 ರೂ. ಕೆ.ಜಿ. ಅಕ್ಕಿ ಕೊಡುವುದಾಗಿ ಹೇಳಿದರೂ ಏಕೆ ಜಾರಿಗೆ ಬಂದಿಲ್ಲ. ಪಡಿತರ ಚೀಟಿ ಕೊಡಲು ಆದಾಯ ಮಿತಿ ಘೋಷಣೆ ಏನೇನೋ. ಷರತ್ತು ನಿರ್ಬಂಧಗಳನ್ನು ಹಾಕಲಾಗುತ್ತಿದೆ.

ಸರ್ಕಾರ ಕೈಗಾರಿಕೋದ್ಯಮಿಗಳನ್ನು ಹಾಗೂ ಎಸ್‌ಇಝಡ್‌ಗಳನ್ನು ಪ್ರೋತ್ಸಾಹಿಸಲು ರಿಯಾಯಿತಿ ಹಲವು ಸೌಲಭ್ಯಗಳನ್ನು ಘೋಷಿಸುತ್ತಿದೆ. ಈ ಉದ್ದೇಶಕ್ಕಾಗಿ ಭೂಮಿತಿ ವಶಕ್ಕೆ ತೆಗೆದುಕೊಳ್ಳಲು ಸಿದ್ಧವಾಗುತ್ತಿದೆ. ಆದರೆ ಭೂಗಳ್ಳರು, ಶ್ರೀಮಂತರು ನುಂಗಿ ಹಾಕಿರುವ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಬಡವರು, ಅಸಂಘಟಿತ ಕಾರ್ಮಿಕರಿಗೆ ಹಂಚಲು ಸರ್ಕಾರಕ್ಕೇನು ತೊಂದರೆ. ಭೂಗಳ್ಳರ ಕಬ್ಜಾದಲ್ಲಿರುವ ಭೂಮಿಯ ಮರುವಶ ನಿಂತೇ ಹೋಗಿದೆ.

ಎಷ್ಟೆಲ್ಲಾ ಸಮಸ್ಯೆಗಳಿವೆ, ತುರ್ತು ಪ್ರಶ್ನೆಗಳಿವೆ. ಇದರ ಆಧಾರದಲ್ಲಿ ಕಾರ್ಮಿಕರು, ಜೊತೆಗೆ ರೈತರು, ವಿದ್ಯಾರ್ಥಿ ಯುವಜನರ ಮಹಿಳೆಯರು, ಕೂಲಿಕಾರರು ತಮ್ಮದೇ ಆದ ಪ್ರಶ್ನೆಗಳಿಗಾಗಿ ಒಂದುಗೂಡುತ್ತಿದ್ದಾರೆ.

ಸರ್ಕಾರ ಬೇಡಿಕೆ ಈಡೇರಿಸಬೇಕು, ಇಲ್ಲವಾದರೆ ತೀವ್ರ ಹೋರಾಟ ಎಂದು ಸಾರಿದ್ದಾರೆ. ಮಾರ್ಚ್ 2 ರಿಂದ ಮಾರ್ಚ್ 5 ರ ವರೆಗೆ ಅವರು ರಾಜ್ಯವ್ಯಾಪಿ ಸರ್ಕಾರಿ ಕಛೇರಿಗಳನ್ನು ಮುತ್ತಿಗೆ ಹಾಕಲು ನಿರ್ಧರಿಸಿದ್ದಾರೆ.

ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘ, ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ಹಾಗೂ ಹಲವಾರು ಸಂಘಟನೆಗಳು ಈ ಹೋರಾಟದಲ್ಲಿ ತಮ್ಮದೇ ಕಾರ್ಯಕ್ರಮಗಳೊಂದಿಗೆ ಪಾಲ್ಗೊಳ್ಳುತ್ತಿವೆ.

ಬಿಜೆಪಿ ಸರ್ಕಾರ ರಾಜ್ಯದಲ್ಲಿ ಭೂಸುಧಾರಣಾ ಕಾಯ್ದೆಗೆ ಜನವಿರೋಧಿ ತಿದ್ದುಪಡಿ ತರಲು ಮುಂದಾಗಿದೆ. ಕೃಷಿಭೂಮಿಯನ್ನು ಹಾಗೂ ಭೂಮಿಯ ಖರೀದಿದಾರರೇ ನೇರವಾಗಿ ರೈತರೊಂದಿಗೆ ಭೂಮಿ ಖರೀದಿ ಸಂಬಂಧ ವ್ಯವಹರಿಸಲು ಅವಕಾಶ ಅತ್ಯಂತ ಜನವಿರೋಧಿ ನೀತಿಯನ್ನು ತರಲು ಹೊರಟಿದೆ. ಈ ಪ್ರಶ್ನೆ ಹಾಗೂ ರೈತರ ಬೆಳೆಗೆ ಬೆಲೆ, ಬೆಂಬಲ ಬೆಲೆ, ಸಾಲಸೌಲಭ್ಯ, ಮಾರುಕಟ್ಟೆ ವ್ಯವಸ್ಥೆ ಇತ್ಯಾದಿ ಪ್ರಶ್ನೆಗಳ ಆಧಾರದಲ್ಲಿ ರೈತ ಸಂಘ, ಕೂಲಿ ಹೆಚ್ಚಳ, ಉತ್ತಮ ಪಡಿತರ ವ್ಯವಸ್ಥೆ ಇತ್ಯಾದಿ ಪ್ರಶ್ನೆಗಳ ಆಧಾರದಲ್ಲಿ ಕೂಲಿಕಾರರ ಸಂಘಗಳು ಹೋರಾಟಕ್ಕೆ ಸೇರಿವೆ. ○

........ಒಬಾಮ ಪ್ಯಾಕೇಜ್

ಪುಟ11 ರಿಂದ

ಕಾಣುತ್ತಿದೆ. ಇಲ್ಲಿ ಸುಮಾರು ಐದು ಲಕ್ಷ ಕಡಿಮೆ ಕೂಲಿಯ ಕಾರ್ಮಿಕರು ವಿಶ್ವದ ಅತ್ಯಂತ ವೆಚ್ಚದಾಯಕ ಐಷಾರಾಮದ ವಸ್ತುವನ್ನು ತಯಾರಿಸುತ್ತಿದ್ದರು. ಹೌದು, ಇಂದು ಹವಳ ಮತ್ತು ಆಭರಣಗಳ ಉದ್ದಿಮೆಯಲ್ಲಿ ಕೆಲಸ ಮಾಡುವ ಕೆಲಸ ಮಾಡುವ ಶ್ರಮಿಕರದ್ದು ಶೋಚನೀಯ ಸ್ಥಿತಿ.

ರಾಮ್ ಮುಹೂರತ್ ಕಳೆದ 16 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನಿಗೆ ಈಗಲೂ ಕೆಲಸವೇನೋ ಇದೆ. ಆದರೆ ಆದಾಯ ಇಳಿದಿದೆ. "ದೀಪಾವಳಿಯ ಮೊದಲು ಒಂದು ಪೀಸಿಗೆ 6ರೂ.75ಪೈಸೆ ಕೊಡುತ್ತಿದ್ದರು. ಒಂದು ಪೀಸ್ ಮುಗಿಸಲು 20 ನಿಮಿಷ ಬೇಕಾಗುತ್ತದೆ. ಅಂದರೆ 12 ಗಂಟೆಯ ಶಿಫ್ಟಿನಲ್ಲಿ 6,000ದಿಂದ 7,000ರೂ. ವರೆಗೆ ಸಂಪಾದಿಸುತ್ತಿದ್ದೆ. 20 ಶೆ. ಏರಿಸುವುದಾಗಿಯೂ ಹೇಳಿದರು. ಸಂತೋಷವಾಗಿತ್ತು. ಏರಲಿಲ್ಲ. ದೀಪಾವಳಿಯ ನಂತರ ಮಾಲಕರು ಪೀಸ್ ರೇಟನ್ನು 5ರೂ.ಗೆ ಇಳಿಸಿದರು. ಕೆಲಸದ ವೇಳೆಯೂ 12 ಗಂಟೆಯಿಂದ 5 ಗಂಟೆಗಿಳಿಯಿತು. ಮೊದಲು ಸಣ್ಣಪುಟ್ಟ ತಪ್ಪುಗಳಾದರೆ ಅದನ್ನು ಬೇರೆಡೆಗೆ ಕಳಿಸಿ ಪಾಲಿಶ್ ಮಾಡಿಸುತ್ತಿದ್ದರು. ಈಗ ಸಣ್ಣ ತಪ್ಪನ್ನೂ ಅವರು ಸಹಿಸುವುದಿಲ್ಲ' ಎನ್ನುತ್ತಾನೆ ಅವನು.

ಸೂರತ್ ವಿಶ್ವದ ಅತಿದೊಡ್ಡ ವಜ್ರೋದ್ಯಮದ ಕೇಂದ್ರ. 3000 ಕ್ಕೂ ಹೆಚ್ಚು ಘಟಕಗಳಲ್ಲಿ ಸುಮಾರು ಐದು ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆಭರಣಗಳ ಬೆಲೆ, ಅವುಗಳ ವಹಿವಾಟಿನಿಂದ ಮಾಲಕರು ಗಳಿಸುತ್ತಿದ್ದ ಲಾಭ ಇವುಗಳಿಗೆ ಹೋಲಿಸಿದರೆ ಕಾರ್ಮಿಕರಿಗೆ ಸಿಗುತ್ತಿದ್ದುದು ಅಲ್ಪವೇ. ಒಬ್ಬ ಸಾಮಾನ್ಯ ಕೆಲಸಗಾರನಿಗೆ ಸರಾಸರಿ ತಿಂಗಳಿಗೆ 6,000ರೂ ಸಿಗುತ್ತಿತ್ತು. ನುರಿತ ಕೆಲಸಗಾರರಿಗೆ ಹೆಚ್ಚೇ ಸಿಗುತ್ತಿತ್ತು. ಎಲ್ಲವೂ ಚೆನ್ನಾಗಿಯೇ ಇತ್ತು. ಆದರೆ ಸಪ್ಟಂಬರ್‌ನಲ್ಲಿ ಅಮೆರಿಕಾದಲ್ಲಿ ಹೂಡಿಕೆ ಬ್ಯಾಂಕ್ ಲೆಹ್ಮಾನ್ ಬ್ರದರ್ಸ್ ಕುಸಿದ ಸುದ್ದಿಯಿಂದ ಸೂರತ್‌ಗೆ ವಜ್ರಾಘಾತವೇ ಆಯಿತು. ಈಗ 2000 ಘಟಕಗಳು ಮುಚ್ಚಿವೆ. ಸುಮಾರು ಎರಡು ಲಕ್ಷ ಕಾರ್ಮಿಕರಿಗೆ ಕೆಲಸವಿಲ್ಲ. ಸೂರತ್‌ನ ಸಂಸ್ಕರಿತ ವಜ್ರಗಳಲ್ಲಿ ಅರ್ಧದಷ್ಟು ಅಮೆರಿಕಾದ ಮಾರುಕಟ್ಟೆಗೆ ಹೋಗುತ್ತಿತ್ತು. ಈಗ ಆ ಬೇಡಿಕೆ ತೀವ್ರವಾಗಿ ಇಳಿದಿದೆ.

"ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಟೆಲಿವಿಶನ್‌ನಲ್ಲಿ ಮಾತಾಡುತ್ತ ಅಮೆರಿಕನ್ ಆರ್ಥಿಕವನ್ನು ಮೇಲಕ್ಕೆತ್ತಲು ವರ್ಷಗಳೇ ಹಿಡಿಯಬಹುದು ಎಂದಿದ್ದಾರೆ. ಅದು ನಮಗೊಂದು ಸಂಕೇತ. ಅಮೆರಿಕನ್ ಆರ್ಥಿಕ ಚೈತನ್ಯಶೀಲಗೊಳ್ಳುವ ವರೆಗೆ ನಾವು ಚೇತರಿಸಿಕೊಳ್ಳುವುದಿಲ್ಲ. ನಮ್ಮದು ಐಷಾರಾಮಿ ಐಟಂ. ಅದರಿಂದಾಗಿ ಚೇತರಿಕೆಗೆ ಇನ್ನೂ ಹೆಚ್ಚು ಸಮಯ ಬೇಕು" ಎನ್ನುತ್ತಾರೆ ಸೂರತ್‌ನ ಅತಿ ದೊಡ್ಡ ವಜ್ರದ ರಫ್ತುಗಾರ ಜೀವರಾಜ್ ಭಾಯಿ ಸುರಾಣೆ. ಆದರೆ ಅದುವರೆಗೆ ಈ ಎರಡು ಲಕ್ಷ ಕಾರ್ಮಿಕರು ಕಾಯಲು ಸಾಧ್ಯವೇ?

ಇದೇ ರೀತಿ ಸಿದ್ಧ ಉಡುಪು ಉದ್ದಿಮೆಯನ್ನು ಈ ಸುನಾಮಿ ಮುಳುಗಿಸಿ ಬಿಡುತ್ತಿದೆ. ಐಟಿ ಉದ್ದಿಮೆಯಂತೂ ಈಗ ಬೇರೆಯೇ ಕಾರಣಕ್ಕೆ ಸುದ್ದಿಯಲ್ಲಿದೆ. ಈ ಬಗ್ಗೆ ಮುಂದಿನ ವಾರ ನೋಡೋಣ.

ಪಶ್ಚಿಮ ಬಂಗಾಳ, ಕೇರಳ ತೋರಿದ ದಾರಿ

ಇಂತಹ ಪರಿಸ್ಥಿತಿಯಲ್ಲೂ ಕೇಂದ್ರ ಸರಕಾರದ ಬಜೆಟ್ ಈ ಆತಂಕಕಾರಿ ಸ್ಥಿತಿಯ ಬಗ್ಗೆ ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ. ಬಜೆಟ್‌ನ ಮೇಲಿನ ಚರ್ಚೆಯನ್ನು ಮುಗಿಸುವ ವೇಳೆಗೆ ಹಣಕಾಸು ಮಂತ್ರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಣಬ್ ಮುಖರ್ಜಿಯವರು ಕೇಂದ್ರ ಅಬಕಾರಿ ಸುಂಕದಲ್ಲಿ 2 ಶೇಕಡಾ ಮತ್ತು ಸೇವಾತೆರಿಗೆಯಲ್ಲಿ 2ಶೇಕಡಾ ಇಳಿಸುವ ಘೋಷಣೆ ಮಾಡಿದರು. ಇದರ ಮೊತ್ತ 30,000ಕೋಟಿ ರೂ.ಗಳಂತೆ. ಆದರೆ ಇದರಿಂದ ಪ್ರಯೋಜನವಾಗುವುದು ಮೇಲ್ದರ್ಜೆಯ ಕಾರು ಕೊಳ್ಳಬೇಕೆಂಬ ಕೆಲವರಿಗೆ ಮಾತ್ರ. ಉದ್ಯೋಗ ಕಳಕೊಳ್ಳುವ, ಉದ್ಯೋಗವಿಲ್ಲದ ಕೋಟ್ಯಂತರ ಜನಗಳ ಕೊಳ್ಳುವ ಶಕ್ತಿಯನ್ನೇನೂ ಇದು ಹೆಚ್ಚಿಸುವುದಿಲ್ಲ. ಹಾಗಿರುವಾಗ ಆರ್ಥಿಕ ಚೇತರಿಕೆ ಹೇಗೆ ಸಾಧ್ಯ?(ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಲೇಖನ ನೋಡಿ). ○

ಭಾರತದ ಕೃಷಿ ರಂಗಕ್ಕಿನ್ನೊಂದು ಕುತ್ತು

ರಾಷ್ಟ್ರೀಯ ವಿಚಾರಸಂಕಿರಣದ ವರದಿ

ಇತ್ತೀಚೆಗೆ ಕೇರಳದಲ್ಲಿ ನಡೆದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಭಾರತದ ಕೃಷಿ ರಂಗಕ್ಕೆ ಬಂದೊದಗುತ್ತಿರುವ ಅಪಾಯಗಳ ಬಗೆಗೆ ಚರ್ಚಿಸಲಾಯಿತು. ಒಂದು ವರದಿ.

ನಿತ್ಯಾನಂದಸ್ವಾಮಿ

ಭಾರತದ ಕೃಷಿ ರಂಗ ಈಗಾಗಲೇ ನೆಲಕಚ್ಚಿದೆ. ಸುಧಾರಣೆಗಳ ಹೆಸರಿನಲ್ಲಿ 1990 ರ ದಶಕದಿಂದ ಆರಂಭಿಸಲಾದ ನವ ಉದಾರೀಕರಣದ ಧೋರಣೆಗಳಿಂದಾಗಿ 2 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ನಮ್ಮ ಎಲ್ಲ ಆರ್ಥಿಕ ಸಮಸ್ಯೆಗಳಿಗೆ ಸರ್ಕಾರದ ನಿಯಂತ್ರಣ, ಸರ್ಕಾರದ ಮಧ್ಯ ಪ್ರವೇಶವೇ ಕಾರಣ ಎಂದು ಆರೋಪಿಸಿ ಮಾರುಕಟ್ಟೆ ಶಕ್ತಿಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಯಿತು. ಕೃಷಿ ರಂಗಕ್ಕೆ ಹಣ ಹೂಡುವ, ರೈತರ ಬೀಜ, ಗೊಬ್ಬರ ಕ್ರಿಮಿನಾಶಕಗಳಿಗೆ ಅಗತ್ಯ ಸಬ್ಸಿಡಿಯನ್ನು ಒದಗಿಸುವ, ರೈತರಿಗೆ ಸಾಂಸ್ಥಿಕ ಸಾಲವನ್ನು ನೀಡುವ, ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾಡುವ ತನ್ನ ಜವಾಬ್ದಾರಿಯಿಂದ ಸರ್ಕಾರ ಹಿಂದಕ್ಕೆ ಸರಿಯಿತು. ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಆಮದುಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧ ತೆಗೆದುಹಾಕಿ ಕೃಷಿ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯ ಬಾಗಿಲನ್ನು ತೆರೆಯುವ ಮೂಲಕ ನಮ್ಮ ರೈತರು ಬೆಳೆದ ಫಸಲಿಗೆ ಯೋಗ್ಯ ಬೆಲೆ ಸಿಗದಂತೆ ಮಾಡಲಾಯಿತು. ಹೀಗೆ ಕೃಷಿ ಪ್ರಧಾನವಾದ ಈ ದೇಶದಲ್ಲಿ ಕೃಷಿ ಎಂಬುದು ಒಂದು ಲಾಭದಾಯಕ ವೃತ್ತಿಯಾಗಿ ಉಳಿಯದಂತಾಯಿತು. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ದೇಶದಲ್ಲಿ ಈ ಅನಾಹುತವನ್ನು ಉದ್ಘಾಟನೆ ಮಾಡಿದರೆ ನಂತರದ ವಾಜಪೇಯಿ ನೇತೃತ್ವದ ಸರ್ಕಾರ ಇದೇ ದಿವಾಳಿಕೋರ ನೀತಿಗಳನ್ನು ಅತ್ಯಂತ ಮುತುವರ್ಜಿಯಿಂದ ಮುಂದುವರೆಸಿತು. ಈ ಎಲ್ಲ ಬೆಳವಣಿಗೆಗಳಿಂದ ಪಾಠ ಕಲಿಯಲು ಒಪ್ಪದ ಪ್ರಸಕ್ತ ಕಾಂಗ್ರೆಸ್ ನೇತೃತ್ವದ ಸರ್ಕಾರ, ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೂಲಕ ದೇಶದ ರೈತಾಪಿ ವರ್ಗಗಳಿಗೆ ನೀಡಿದ ಭರವಸೆಗಳನ್ನು ಜಾರಿಗೊಳಿಸದೆ ಅವರ ಬದುಕಿನ ಭರವಸೆಯನ್ನೇ ಕಿತ್ತುಕೊಂಡಿದೆ.

ಒಡೆದುಹೋದ ನೀರ ಮೇಲಿನ ಗುಳ್ಳೆ

ಭಾರತದ ಕೃಷಿ ರಂಗ ಚೇತರಿಸಿಕೊಳ್ಳಲಾಗದ ಆಘಾತಕ್ಕೆ ಸಿಕ್ಕಿಹಾಕಿಕೊಂಡಿರುವಾಗಲೇ ಇನ್ನೊಂದು ಆಘಾತಕ್ಕೆ ತುತ್ತಾಗಿದೆ. ಇದನ್ನು ಒಂದು ಹೊಸ ಆಘಾತ ಎನ್ನುವುದಕ್ಕಿಂತ ಹಳೆಯ ಆಘಾತದ ಮುಂದುವರೆದ ಪೆಟ್ಟು ಎಂದು ಕರೆಯುವುದೇ ಹೆಚ್ಚು ಸರಿಯಾಗಬಹುದು. ಈ ಆಘಾತ ಜಾಗತಿಕ ಮಾರುಕಟ್ಟೆಯ ಮಿಥ್ಯವನ್ನು ಒಡೆದುಹಾಕಿದೆ. ಭಾರತದ ರೈತರಿಗೆ ಜಾಗತಿಕ ಮಾರುಕಟ್ಟೆ ಎಂಬ 'ಸ್ವರ್ಗ' ದ ಆಸೆ ತೋರಿಸಲಾಗಿತ್ತು. ವಾಣಿಜ್ಯ ಬೆಳೆಗಳಿಗೆ ಜಾಗತಿಕ ಬೆಲೆಗಳ ಆಮಿಷ ಒಡ್ಡಲಾಗಿತ್ತು. ಆದರೆ ಈಗ ಆ ಗಾಳಿಗೋಪುರ ಕುಸಿದುಬಿದ್ದಿದೆ.

ವಿಶ್ವ ಬಂಡವಾಳಶಾಹಿ ಕುಸಿತದಿಂದ ಅಮೇರಿಕ ಮತ್ತು ಯುರೋಪಿನ ದೇಶಗಳಲ್ಲಿನ ನೂರಾರು ಬೃಹತ್ ಬ್ಯಾಂಕುಗಳು ದಿವಾಳಿಯಾಗಿವೆ. ಲಕ್ಷಾಂತರ ಜನರು ತಮ್ಮ ಉಳಿತಾಯದ ಹಣವನ್ನು ಕಳೆದುಕೊಂಡಿದ್ದಾರೆ. ಬ್ಯಾಂಕುಗಳಿಂದ ಹಣ ಪಡೆದು ವ್ಯವಹಾರ ನಡೆಸುತ್ತಿದ್ದ ಲಕ್ಷಗಟ್ಟಲೆ ಉದ್ಯಮಗಳು ಮುಚ್ಚಿವೆ. ಇದರ ಪರಿಣಾಮವಾಗಿ ಲಕ್ಷ ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ವಿಶ್ವದಾದ್ಯಂತ ರಫ್ತು ವ್ಯಾಪಾರದ ಮೇಲೆ ಈ ಅವಾಂತರವು ಗಂಭೀರವಾದ ಪರಿಣಾಮ ಬೀರಿದೆ. ಆರ್ಥಿಕ ಹಿಂಜರಿತಕ್ಕೆ ಒಳಗಾಗಿರುವ ಬಂಡವಾಳಶಾಹಿ ದೇಶಗಳೊಂದಿಗೆ ವ್ಯಾಪಾರದಲ್ಲಿ ತೊಡಗಿದ್ದ ದೇಶಗಳ ರಫ್ತು ವ್ಯಾಪಾರ ಕುಸಿದಿದೆ. ಬಿಕ್ಕಟ್ಟುಗ್ರಸ್ತ ಈ ದೇಶಗಳು ಬೇರೆ ದೇಶಗಳಿಂದ ಕಚ್ಚಾ ವಸ್ತುಗಳನ್ನು, ಸಿದ್ಧವಸ್ತುಗಳನ್ನು ಬಿಡಿ ಭಾಗಗಳನ್ನು ಆಮದು ಮಾಡಿಕೊಳ್ಳುವುದನ್ನು ಗಣನೀಯವಾಗಿ ಕಡಿಮೆ ಮಾಡಿಕೊಂಡಿವೆ. ಹೀಗೆ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮ ಇಡೀ ವಿಶ್ವಕ್ಕೇ ಹಬ್ಬುವಂತಾಗಿದೆ.

ಪ್ರಸಕ್ತ ಆರ್ಥಿಕ ಹಿಂಜರಿತವು ವಿಶ್ವ ಮಾರುಕಟ್ಟೆಯತ್ತ ಮುಖ ಮಾಡಿಕೊಂಡಿದ್ದ ಭಾರತದ ಕೃಷಿಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರಲಾರಂಭಿಸಿದೆ. ಕೃಷಿ ಉತ್ಪನ್ನಗಳ ರಫ್ತು ಗಣನೀಯವಾಗಿ ಕುಸಿಯಲಾರಂಭಿಸಿದ್ದು, ರೈತರು ತೀವ್ರ ಬೆಲೆ ಕುಸಿತಕ್ಕೆ ಒಳಗಾಗುತ್ತಿದ್ದಾರೆ. ವಿದೇಶಗಳಿಗೆ ರಫ್ತು ಆಗುತ್ತಿದ್ದ ಹತ್ತಿ, ಕಾಫಿ, ಅಡಿಕೆ, ಏಲಕ್ಕಿ, ಕಾಳುಮೆಣಸು ಮುಂತಾದವುಗಳ ಬೆಲೆ ಕುಸಿತು ರೈತರು ತೀವ್ರ ಹಾನಿ ಅನುಭವಿಸಲಿದ್ದಾರೆ.

ರಾಷ್ಟ್ರ ಮಟ್ಟದ ವಿಚಾರ ಸಂಕಿರಣ :

ಇಂದು ಅನಾವರಣಗೊಳ್ಳುತ್ತಿರುವ ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ದೇಶದ ಕೃಷಿ ರಂಗದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಲು ಕೇರಳದ ವಾಯನಾಡ್ ಜಿಲ್ಲೆಯ ಕಲ್ಪೆಟ್ಟಾ ಎಂಬಲ್ಲಿ ಇತ್ತೀಚೆಗೆ ಮೂರು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ ಏರ್ಪಡಿಸಿದ್ದ ಈ ವಿಚಾರ ಸಂಕಿರಣದಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞರು, ಕೃಷಿ ತಜ್ಞರು, ರಾಜಕೀಯ ಮುಖಂಡರು ಮತ್ತು ಸಾಮಾಜಿಕ ಕಾರ್ಯಕರ್ತರು ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

1930 ರ ದಶಕದಲ್ಲಿ ಇದೇ ರೀತಿಯ ಮಹಾ ಬಿಕ್ಕಟ್ಟು ವಿಶ್ವವನ್ನು ಆವರಿಸಿತ್ತು. ವಿಶ್ವದ ಜನತೆ ಅಪಾರ ಸಂಕಷ್ಟಗಳಿಗೆ ಬಲಿಯಾಗಿತ್ತು. ಇದೇ ಅವಧಿಯಲ್ಲಿ ಸಮಾಜವಾದಕ್ಕಾಗಿ ಕಾರ್ಮಿಕ ವರ್ಗದ ಚಳುವಳಿ ಬೆಳೆದು ಬರುವಂತಾಯಿತು. ರಾಷ್ಟ್ರೀಯ ವಿಮೋಚನಾ ಆಂದೋಲನಗಳು ಬುಗಿಲೆದ್ದವು. ವಿಶ್ವ ಸಾಮ್ರಾಜ್ಯವಾದಿ ಶಕ್ತಿಗಳ ನಡುವಿನ ವೈರುಧ್ಯಗಳು ತೀವ್ರಗೊಳ್ಳುವಂತಾಗಿ ಎರಡನೇ ಜಾಗತಿಕ ಯುದ್ಧ ಸ್ಫೋಟಗೊಳ್ಳುವಂತಾಯಿತು. ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಯಶಸ್ವಿಯಾಗುವುದರೊಂದಿಗೆ ವಿಶ್ವ ಸಾಮ್ರಾಜ್ಯವಾದ ಶಕ್ತಿಗುಂದುವಂತಾಯಿತು. 1940 ರ ದಶಕದ ಕೊನೆಯಲ್ಲಿ ಭಾರತದಲ್ಲಿ ದೇಶೀಯ ಬಂಡವಾಳಶಾಹಿ ವರ್ಗದ ನೇತೃತ್ವದಲ್ಲಿ ಮತ್ತು ಚೀನಾ ದೇಶದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಯಶಸ್ವಿಯಾದವು. ಅಂದಿನ ವಸಾಹತುಶಾಹಿ ಆಳ್ವಿಕೆಯ ಹಾಗೂ ಪಾಳೇಗಾರಿ ಭೂಮಾಲಿಕ ಶೋಷಣೆಯ ವಿರುದ್ಧ ಬುಗಿಲೆದ್ದ ತೆಲಂಗಾಣ, ಪುನ್ನಪ್ರ ವಯಲಾರ್, ಕಯ್ಯೂರು, ವಾರ್ಲಿ, ತೇಬಾಗ ಮೊದಲಾದ ಸಮರಶೀಲ ರೈತ ಹೋರಾಟಗಳು ಸಹಜವಾಗಿಯೇ ಭಾರತದ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ಬಲಪಡಿಸಿದವು. ಅಂದಿನ ವಿಶ್ವ ಆರ್ಥಿಕ ಬಿಕ್ಕಟ್ಟು ಮತ್ತು ಅದರ ಪರಿಣಾಮವಾಗಿ ತಲೆದೋರಿದ ಸಂಕಷ್ಟಗಳ ಹಿನ್ನೆಲೆಯಲ್ಲೇ ಆ ಚಾರಿತ್ರಿಕವಾದ ರೈತ ಬಂಡಾಳಯಗಳು ಬೆಳೆದುಬಂದಿದ್ದವು ಎಂದು ರಾಷ್ಟ್ರಮಟ್ಟದ ಈ ವಿಚಾರಸಂಕಿರಣದಲ್ಲಿ ಸ್ಮರಿಸಲಾಯಿತು.

ಪ್ರಸಕ್ತ ಬಿಕ್ಕಟ್ಟು ವಿಶ್ವದ ಜನತೆಯ ಮೇಲೆ ಇದೇ ರೀತಿಯ, ಅಥವಾ ಇದಕ್ಕೂ ತೀವ್ರ ಪ್ರಮಾಣದ ದುಷ್ಪರಿಣಾಮಗಳನ್ನು ಉಂಟುಮಾಡಲಿದೆ ಎಂದು ವಿಶ್ವದ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರೇ ಒಪ್ಪಿಕೊಂಡಿದ್ದಾರೆ. ಇಂದಿನ ಈ ಬಿಕ್ಕಟ್ಟು ವಿಶ್ವದ ರಾಜಕೀಯ ಮತ್ತು ಸಾಮಾಜಿಕ ಚಿತ್ರವನ್ನು ಬದಲಾಯಿಸದೆ ಇರಲಾರದು. ಪ್ರಸಕ್ತ ಪರಿಸ್ಥಿತಿಯ ಮೂಲಭೂತ ಪ್ರವೃತ್ತಿಯನ್ನು ದೇಶದ ಪ್ರಗತಿಪರ ಶಕ್ತಿಗಳು ಸರಿಯಾಗಿ ಅರ್ಥ ಮಾಡಿಕೊಂಡು ಸಮರ್ಪಕವಾಗಿ ಮಧ್ಯ ಪ್ರವೇಶ ಮಾಡುವುದು ಬಹಳ ಮುಖ್ಯವಾಗಿದೆ.

ವಾಯನಾಡ್ ಎಂಬುದು ತಮಿಳುನಾಡು ಮತ್ತು ಕರ್ನಾಟಕದ ಗಡಿಯಲ್ಲಿರುವ ಕೇರಳದ ಚಿಕ್ಕದಾದ ಗುಡ್ಡಗಾಡು ಜಿಲ್ಲೆ. 2000 ಇಸವಿಯ ಆರಂಭದಲ್ಲಿ ಅತಿ ಹೆಚ್ಚು ರೈತರ ಆತ್ಮಹತ್ಯೆಗಳು ಸಂಭವಿಸಿದ್ದು ಈ ಜಿಲ್ಲೆಯಲ್ಲಿ. ಕಿಸಾನ್ ಸಭಾ ಮತ್ತು ಆದಿವಾಸಿ ಕ್ಷೇಮ ಸಮಿತಿಗಳ ನೇತೃತ್ವದಲ್ಲಿ ನಡೆಸಲಾದ ಚಳುವಳಿಗಳು 2006 ರಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರ ಕೈಗೊಂಡ ಸಮಯೋಚಿತ ಕ್ರಮಗಳಿಂದಾಗಿ ಬದುಕಿನಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದ ರೈತಾಪಿ ಜನಗಳಲ್ಲಿ ಭರವಸೆಯ ಬೆಳಕು ಮೂಡುವಂತಾಯಿತು. ಎಲ್ಲಾ ರೈತಾಪಿ ವಿಭಾಗಗಳನ್ನು ಸೆಳೆಯುವಲ್ಲಿ ಯಶಸ್ವಿಯಾದ ಇಲ್ಲಿನ ರೈತ ಚಳುವಳಿಯು ಪರಂಪರಾಗತವಾಗಿ ಬಲಪಂಥೀಯ ರಾಜಕೀಯ ಪ್ರಭಾವದಡಿಯಲ್ಲಿದ್ದ ಈ ಜಿಲ್ಲೆಯ ರಾಜಕೀಯ ಚಿತ್ರವನ್ನೇ ಬದಲಾಯಿಸುವಲ್ಲಿ ಯಶಸ್ವಿಯಾಯಿತು. ಇಲ್ಲಿ ಕಳೆದ 3 ಸಾರ್ವತ್ರಿಕ ಚುನಾವಣೆಗಳಲ್ಲಿ ಎಡಪಂಥೀಯ ಅಭ್ಯರ್ಥಿಗಳೇ ಚುನಾಯಿತರಾಗುತ್ತಿರುವುದು ಗಮನಾರ್ಹವಾಗಿದೆ.

ಕಾರ್ಮಿಕ, ರೈತರ ಮೈತ್ರಿ ಬಲಪಡಿಲು ಕರೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸಂಗಾತಿ ಪ್ರಕಾಶ್ ಕಾರಟ್ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ನವ ಉದಾರೀಕರಣದ ಸುಧಾರಣೆಗಳಿಂದಾಗಿ, ಗ್ರಾಮೀಣ ಭಾರತದಲ್ಲಿ ಒಂದು ಕಡೆ ಭೂಮಾಲೀಕರು, ಲೇವಾದೇವಿಗಾರರು ಮತ್ತು ವ್ಯಾಪಾರಸ್ಥರು ಹಾಗೂ ಇನ್ನೊಂದು ಕಡೆ ರೈತಾಪಿ ಜನವಿಭಾಗಗಳ ನಡುವೆ ಹೇಗೆ ವೈರುಧ್ಯಗಳು ಆಳವಾಗುತ್ತಾ ಹೋಗುತ್ತಿವೆ ಎಂಬುದನ್ನು ವಿವರಿಸಿದರು. "ಮುಂದೆ ಬರುವ ಹೋರಾಟಗಳಲ್ಲಿ, ಕಾರ್ಷಿಕ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಕಾರ್ಮಿಕ, ರೈತರ ಮೈತ್ರಿಯನ್ನು ಕಟ್ಟಲು ವಿಶೇಷ ಗಮನ ನೀಡಬೇಕಾಗಿದೆ. ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸಲು, ದೂರಗಾಮಿಯಾದ ಪ್ರಜಾಸತ್ತಾತ್ಮಕ ಪರಿವರ್ತನೆಗಳನ್ನು ಸಾಧಿಸಲು ಮತ್ತು ಸರ್ವತೋಮುಖವಾದ ಸಾಮಾಜಿಕ ಪ್ರಗತಿಯನ್ನು ದೃಢಪಡಿಸಲು ಈ ಮೈತ್ರಿಯೇ ಅತ್ಯಂತ ಪ್ರಮುಖವಾದ ಶಕ್ತಿಯಾಗಿರುತ್ತದೆ. ರೈತರು ಮತ್ತು ಕೃಷಿ ಕೂಲಿಕಾರರು ತಮ್ಮ ವರ್ಗಪ್ರಶ್ನೆಗಳಿಗಾಗಿ ನಡೆಸುವ ಹೋರಾಟಗಳಿಗೆ ಕಾರ್ಮಿಕ ವರ್ಗ ನೇರವಾದ ಬೆಂಬಲ ನೀಡುವಂತಾಗುವುದೇ ಈ ಮೈತ್ರಿಯ ಗುರಿಯಾಗಬೇಕು. ಮುಂಬರುವ ದಿನಗಳಲ್ಲಿ ಈ ಮೈತ್ರಿಯನ್ನು ಕಟ್ಟಲು ಹೊಸ, ಕಲ್ಪನಾತ್ಮಕ ವಿಧಾನಗಳನ್ನು ಕಂಡುಕೊಳ್ಳಬೇಕಾಗಿದೆ" ಎಂದು ಅವರು ಹೇಳಿದರು.

ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ದಿಕ್ಸೂಚಿ ಭಾಷಣವನ್ನು ಮಾಡಿದ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಧ ಸಂಗಾತಿ ಎಸ್.ರಾಮಚಂದ್ರನ್ ಪಿಳ್ಳೈ ಅವರು ವಿಶ್ವ ಹಣಕಾಸು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತ ಸರ್ಕಾರ ತನ್ನ ಕೃಷಿ ಧೋರಣೆಯನ್ನು ಬದಲಾಯಿಸಬೇಕು ಎಂದು ಆಗ್ರಹಿಸಿದರು. ವಿಶ್ವದ ಮೇಲೆ ಹಾಗೂ ವಿಶೇಷವಾಗಿ ಭಾರತದ ಆರ್ಥಿಕತೆಯ ಮೇಲೆ ಇಷ್ಟೊಂದು ದುಷ್ಪರಿಣಾಮಗಳು ಆಗುತ್ತಿರುವಾಗಲೂ ಸರ್ಕಾರ ಭಾರತದ ಕೃಷಿ ರಂಗವನ್ನು ಜಾಗತಿಕ ವ್ಯಾಪಾರ ಮತ್ತು ಕಾರ್ಪೊರೇಟ್ ಕಂಪನಿಗಳ ಒಳನುಗ್ಗುವಿಕೆಗೆ ಹೆಚ್ಚೆಚ್ಚು ಅವಕಾಶ ಮಾಡಿಕೊಡುತ್ತಾ ಹೋದರೆ, ರೈತಾಪಿ ಜನಗಳ ಸಮಸ್ಯೆಗಳು ಮತ್ತು ಸಂಕಷ್ಟಗಳು ಬಹುಪಾಲು ತೀವ್ರಗೊಳ್ಳಲಿದೆ. 1930ರ ಬಿಕ್ಕಟ್ಟಿನ ಹಿನ್ನೆಲೆಯ ಭಾರತದ ಸ್ವಾತಂತ್ರ್ಯ ಚಳುವಳಿಯ ಮುಖ್ಯ ಪ್ರವಾಹದೊಂದಿಗೆ ದೇಶದ ರೈತಾಪಿ ಜನವಿಭಾಗಗಳನ್ನು ಸೆಳೆದು ತಂದ ಅಖಿಲ ಭಾರತ ಕಿಸಾನ್ ಸಭಾದ ಪಾತ್ರವನ್ನು ನೆನಪಿನಿಂದ ಅವರು, ಇಂದು ಅನಾವರಣಗೊಳ್ಳುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕಾರ್ಮಿಕ ರೈತರ ದೃಢವಾದ ಸಖ್ಯತೆಯನ್ನು ಕಟ್ಟುವ ಮೂಲಕ ಅಂದಿನ ಉಜ್ವಲ ಪರಂಪರೆಯನ್ನು ಮತ್ತೆ ಮುಂದಿನ ಉತ್ತುಂಗಕ್ಕೆ ಕೊಂಡೊಯ್ಯಬೇಕಾಗಿದೆ ಎಂದು ಹೇಳಿದರು.


ಐದು ಪ್ರಮುಖ ಗೋಷ್ಠಿಗಳು

ವಿಚಾರ ಸಂಕಿರಣವನ್ನು 5 ಪ್ರಮುಖ ಗೋಷ್ಠಿಗಳಲ್ಲಿ ವಿಂಗಡಿಸಲಾಗಿತ್ತು. ಪ್ರತಿಯೊಂದು

ಪುಟ 14ಕ್ಕೆ

ಜಗದಗಲ

ಶರತ್‌ಚಂದ್ರ



1930 ರ ಮಹಾಕುಸಿತ ಹೇಗಿತ್ತು ?

ಈಗಿನ ಜಾಗತಿಕ ಆರ್ಥಿಕ ಬಿಕ್ಕಟ್ಟು ಕಳೆದ ಹಲವು ದಶಕಗಳ ಹಲವು ಬಿಕ್ಕಟ್ಟುಗಳಿಗಳಲ್ಲೇ ತೀವ್ರವಾದುದು. ಇದು ಪುನರಾವರ್ತನೆಯಾಗುತ್ತಾ ಹೋಗುವ 'ವಾಣಿಜ್ಯ ಚಕ್ರ' ದ ಒಂದು ಭಾಗ ಮಾತ್ರ ಅಲ್ಲ. ಇದನ್ನು ಕಳೆದ ಶತಮಾನದ 1930 ರ ದಶಕದ 'ಮಹಾ ಕುಸಿತ' ದ ಜತೆ ಮಾತ್ರ ಹೋಲಿಸಲು ಸಾಧ್ಯ. ಈ ಆರ್ಥಿಕ ಬಿಕ್ಕಟ್ಟು ಅಂತಹ ಭೀಕರ ಕುಸಿತದತ್ತ ಸಾಗುತ್ತಿದೆ. ಇದು ಅದಕ್ಕಿಂತಲೂ ಭೀಕರವಾಗುವ ಸಾಧ್ಯತೆ ಇದೆ ಎಂದು ಈಗ ಹೆಚ್ಚಿನ ಅರ್ಥಶಾಸ್ತ್ರಜ್ಞರು ಒಪ್ಪಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ 1930 ರ ದಶಕದ ಮಹಾಕುಸಿತ ಹೇಗಿತ್ತು? ಅದಕ್ಕೆ ಕಾರಣವಾದ ಅಂಶಗಳು ಏನು? ಬೇರೆ ಬೇರೆ ದೇಶಗಳಲ್ಲಿ ಅದರ ರಾಜಕೀಯ, ಆರ್ಥಿಕ ಸಾಮಾಜಿಕ ಪರಿಣಾಮಗಳೇನು? ಯಾವ ಪರಿಹಾರಗಳನ್ನು ಕಂಡುಕೊಳ್ಳಲಾಯಿತು? ಸಾಂಸ್ಕೃತಿಕ ಕ್ಷೇತ್ರದಲ್ಲಿ ಅದು ಹೇಗೆ ವ್ಯಕ್ತವಾಯಿತು ? ಎಂದು ತಿಳಿದುಕೊಳ್ಳುವುದು ಉಪಯುಕ್ತವಾದೀತು. ಈ ಅಂಶಗಳ ಬಗ್ಗೆ ಮಾಹಿತಿ ನೀಡುವ ಲೇಖನಗಳ ಸರಣಿಯೊಂದನ್ನು 'ಜನಶಕ್ತಿ' ಆರಂಭಿಸುತ್ತಿದೆ. ಅದರ ಮೊದಲ ಕಂತು.

1930 ರ ಮಹಾಕುಸಿತದ ಪರಿಣಾಮ ಅಮೆರಿಕದ ಮೇಲೆ ಏನಾಯ್ತು ?

ಈ ಕೆಳಗಿನ ಅಂಕೆಸಂಖ್ಯೆಗಳು ಬೆಚ್ಚಿ ಬೀಳಿಸುವಂತವು.

- 1.3 ಕೋಟಿ ಜನ ನಿರುದ್ಯೋಗಿಗಳಾದರು. 1932 ರಲ್ಲಿ ಸತತ ಉದ್ಯೋಗ ಅಥವಾ ಆದಾಯ ಇಲ್ಲದ 3.4 ಕೋಟಿ ಕುಟುಂಬಗಳಿದ್ದವು.
- 1929 ಮತ್ತು 1932 ರ ನಡುವೆ ಕೈಗಾರಿಕಾ ಉತ್ಪಾದನೆ ಶೇ. 45 ರಷ್ಟು ಕಡಿಮೆ ಆಯಿತು.
- 1929 ಮತ್ತು 1932 ರ ನಡುವೆ ಮನೆ ನಿರ್ಮಾಣ ಶೇ. 80 ರಷ್ಟು ಕಡಿಮೆ ಆಯಿತು.
- 1933 ರ ಹೊತ್ತಿಗೆ 25 ಸಾವಿರ ಅಮೆರಿಕನ್ ಬ್ಯಾಂಕುಗಳಲ್ಲಿ 11 ಸಾವಿರ ಬ್ಯಾಂಕುಗಳು ದಿವಾಳಿಯಾಗಿ ಮುಚ್ಚಿದವು.
- 1920 ರಲ್ಲಿ ಬ್ಯಾಂಕುಗಳ ಒಟ್ಟು ವಹಿವಾಟು ಒಟ್ಟು ಉತ್ಪಾದನೆಯ (ಅಥವಾ ಜಿಡಿಪಿ - 50 ಶತಕೋಟಿ ಡಾಲರು) ಅರ್ಧದಷ್ಟು ಇತ್ತು.
- 1929 ಮತ್ತು 1932 ರ ನಡುವೆ ಅಮೆರಿಕದ ಒಟ್ಟು ಉತ್ಪಾದನೆ (ಅಥವಾ ಜಿಡಿಪಿ) ಶೇ. 30 ರಷ್ಟು ಕಡಿಮೆ ಆಯಿತು. ಶೇರು ಮಾರುಕಟ್ಟೆ ಶೇ. 90 ರಷ್ಟು ಮೌಲ್ಯ ಕಳೆದುಕೊಂಡಿತು.
- 1929 ಮತ್ತು 1933 ರ ನಡುವೆ ನಿರುದ್ಯೋಗದ ಪ್ರಮಾಣ ಶೇ. 3 ರಿಂದ ಶೇ. 25 ಕ್ಕೆ ಜಿಗಿಯಿತು. ಕೈಗಾರಿಕಾ ನಿರುದ್ಯೋಗದ ಪ್ರಮಾಣ ಇನ್ನು ಹೆಚ್ಚು ಶೇ. 37 ಇತ್ತು.
- ಕೆಲವು ಪ್ರದೇಶಗಳಲ್ಲಿ ನಿರುದ್ಯೋಗದ ಪ್ರಮಾಣ ಇನ್ನು ಹೆಚ್ಚು (ಒಹೈಯೊ - ಶೇ. 60, ಟೊಲೆಡೊ - ಶೇ. 80) ಇತ್ತು
- ಸೋವಿಯೆಟ್ ವ್ಯಾಪಾರೀ ಸಂಸ್ಥೆಯೊಂದು ಸೋವಿಯೆಟ್ ಒಕ್ಕೂಟದಲ್ಲಿ ಉದ್ಯೋಗಗಳಿಗೆ ಅರ್ಜಿ ಕರೆದಾಗ ಪ್ರತೀ ದಿನ 350 ಅರ್ಜಿಗಳು ಬಂದು ಬೀಳಲಾರಂಭಿಸಿದವಂತೆ
- ಹತ್ತು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಈ ಬಿಕ್ಕಟ್ಟಿನ ಅವಧಿಯಲ್ಲಿ ತಮ್ಮ ಹೊಲಗಳನ್ನು ಕಳೆದುಕೊಂಡರು
- 1929 ಮತ್ತು 1932 ರ ನಡುವೆ ಕಂಪನಿಗಳ ಲಾಭ ಶೇ. 90 ರಷ್ಟು ಕುಸಿಯಿತು.
- 1929 ಮತ್ತು 1932 ರ ನಡುವೆ ಸರಾಸರಿ ಅಮೆರಿಕದ ಕುಟುಂಬದ ಆದಾಯ ಶೇ. 40 ರಷ್ಟು ಕುಸಿಯಿತು.
- 1929 ಮತ್ತು 1932 ರ ನಡುವೆ ಸರಾಸರಿ ಅಮೆರಿಕದ ಕುಟುಂಬದ ಆದಾಯ ಶೇ. 40 ರಷ್ಟು ಕುಸಿಯಿತು.
- 1929 ಮತ್ತು 1933 ರ ನಡುವೆ 90 ಲಕ್ಷ ಬ್ಯಾಂಕು ಅಕೌಂಟುಗಳು ಖಾಲಿಯಾದವು.
- 1932 ರ ಹೊತ್ತಿಗೆ 2.7 ಲಕ್ಷ ಕುಟುಂಗಳು ಮನೆ ಕಳೆದುಕೊಂಡರು.
- 20 ಲಕ್ಷ ನಿರ್ಗತಿಕರು ಮನೆ ಇಲ್ಲದೆ ದೇಶದಲ್ಲಿ ಅಲೆಯುತ್ತಿದ್ದರು.
- 1933 ರಲ್ಲಿ ಕೇಂದ್ರ ಸಕಾರ ಶೇ. 60 ರಷ್ಟು ನಾಗರಿಕರು ಬಡವರು ಎಂದು ಪರಿಗಣಿಸಿತು.
- ಅರಕಾನ್ಸಸ್ ನ ನಾಗರಿಕ ಕೆಲಸ ಹುಡುಕಿಕೊಂಡು 900 ಮೈಲು ನಡೆದು ಹೋದನಂತೆ.
- 1929 ಮತ್ತು 1933 ರ ನಡುವೆ ಸರಾಸರಿ ವಾರ್ಷಿಕವಾಗಿ ಅಮೆರಿಕಕ್ಕೆ ವಲಸೆ ಬರು[ವ] ಸಂಖ್ಯೆ 2.8 ಲಕ್ಷದಿಂದ 23 ಸಾವಿರಕ್ಕೆ ಕುಸಿಯಿತು.
- ಈ ವರ್ಷಗಳಲ್ಲಿ ಅಮೆರಿಕದಿಂದ ವಲಸೆ ಹೋದವರ ಸಂಖ್ಯೆ ವಲಸೆ ಬಂದವರ ಸಂಖ್ಯೆಗಿಂತ ಹೆಚ್ಚಿತ್ತು.
- ನ್ಯೂಯಾರ್ಕ್‌ನಲ್ಲಿ ಪೋಷಕಾಂಶಗಳ ಕೊರತೆಯಿರುವ ಮಕ್ಕಳ ಪ್ರಮಾಣ ಶೇ. 2[illegible] ರಷ್ಟು ಇತ್ತು. ಗಣಿ ಕೈಗಾರಿಕೆಗಳಿದ್ದ ಪ್ರದೇಶಗಳಲ್ಲಿ (ಪಶ್ಚಿಮ ವರ್ಜಿನಿಯಾ, ಇಲಿಯನೋಯ್, ಕೆಂಟುಕಿ, ಪೆನ್ಸಿಲ್ವೇನಿಯಾ, ಈ ಪ್ರಮಾಣ ಶೇ. 90 ರಷ್ಟು ಇತ್ತು.
- ಕ್ಷಯ ವ್ಯಾಪಕವಾಗಿ ಈ ಅವಧಿಯಲ್ಲಿ ಅಮೆರಿಕದಲ್ಲಿ ಕಾಣ ಬಂತು.

ಭಾರತದ ಕೃಷಿ ರಂಗಕ್ಕಿನ್ನೊಂದು ಕುತ್ತು....

ಪುಟ 13 ರಿಂದ

ಗೋಷ್ಠಿಯಲ್ಲಿ ಒಂದು ಪ್ರಬಂಧವನ್ನು ಮಂಡಿಸಲಾಗುತ್ತಿತ್ತು. ಪ್ರಬಂಧ ಮಂಡನೆಯ ನಂತರ ಗಂಭೀರವಾದ ಸೈದ್ಧಾಂತಿಕ ಚರ್ಚೆ, ವಿಮರ್ಶೆ ನಡೆಸಲಾಗಿತ್ತು. ಚರ್ಚೆಯ ಕೊನೆಯಲ್ಲಿ ರಾಜಕೀಯ ಸ್ಪಷ್ಟನೆಯನ್ನು ನೀಡುವ ಮೂಲಕ ಕಾರ್ಷಿಕ ಚಳುವಳಿಯ ಮುಂದಿನ ದಾರಿಯನ್ನು ಸ್ಪಷ್ಟಪಡಿಸಲಾಗುತ್ತಿತ್ತು.

ಮೊದಲ ಗೋಷ್ಠಿಯಲ್ಲಿ "ಯುದ್ಧ ನಂತರದ ಅವಧಿಯಲ್ಲಿ ಕಾರ್ಷಿಕ ಪ್ರಶ್ನೆ ಮತ್ತು ಭಾರತದ ರೈತರು" ಎಂಬ ವಿಷಯದ ಕುರಿತಾದ ಪ್ರಬಂಧವನ್ನು ಖ್ಯಾತ ಅರ್ಥಶಾಸ್ತ್ರ ಪ್ರೊ. ಉತ್ಸಾ ಪಟ್ನಾಯಕ್ ಅವರು ಮಂಡಿಸಿದರು. ಪ್ರೊ.ಪಟ್ನಾಯಕ್ ಅವರು ಸ್ವಾತಂತ್ರ್ಯ ನಂತರ ಗ್ರಾಮೀಣ ಭಾರತದಲ್ಲಿ ಬದಲಾಗುತ್ತಿರುವ ವೈರುಧ್ಯಗಳ ಬಗ್ಗೆ ಹಾಗೂ ನವ ಉದಾರೀಕರಣದ ನೀತಿಗಳ ವಿರುದ್ಧ ರೈತರನ್ನು ಸಂಘಟಿಸುವ ಬಗ್ಗೆ ಒತ್ತುಕೊಟ್ಟು ಮಾತನಾಡಿದರು. ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಸಂಗಾತಿ ಅಶೋಕ್ ದಾವಲೆ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಘೋಷ್ಠಿಯಲ್ಲಿ ನಡೆದ ಗಂಭೀರ ಚರ್ಚೆಯಲ್ಲಿ ಡಾ. ರಾಮ್‌ಕುಮಾರ್ ಮತ್ತು ಪ್ರೊ.ವೆಂಕಟೇಶ್ ಅತ್ರೇಯಾ ಭಾಗವಹಿಸಿದ್ದರು.

ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಸಿದ್ಧ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರ ಜ್ಞ ಪ್ರೊ. ಪ್ರಭಾತ್ ಪಟ್ನಾಯಿಕ್ ವಹಿಸಿದ್ದರು. "ವಿಶ್ವ ಆರ್ಥಿಕ ಬಿಕ್ಕಟ್ಟು ಮತ್ತು ಭಾರತದ ಕಾರ್ಷಿಕ ಪರಿಸ್ಥಿತಿಯ ಮೇಲೆ ಅದರ ಪರಿಣಾಮ" ಎಂಬ ವಿಷಯದ ಕುರಿತು ಪ್ರೊ ಸಿ.ಪಿ.ಚಂದ್ರಶೇಖರ್ ತಮ್ಮ ಪ್ರಬಂಧವನ್ನು ಮಂಡಿಸುತ್ತಾ ವಿಶ್ವ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ವಿವರವಾಗಿ ವಿಶ್ಲೇಷಿಸಿದರು. ಪ್ರೊ. ಅಭಿಜಿತ್ ಸೇನ್ ಭಾಗವಹಿಸಿ ಚರ್ಚೆಯನ್ನು ಶ್ರೀಮಂತಗೊಳಿಸಿದರು.

ಮೂರನೇ ಗೋಷ್ಠಿಯಲ್ಲಿ ಪ್ರೊ.ಪ್ರಭಾತ್ ಪಟ್ನಾಯಿಕ್ ಅವರು "ಕಾರ್ಷಿಕ ಪ್ರಶ್ನೆ ಮತ್ತು ಪ್ರಸಕ್ತ ಸಾಮ್ರಾಜ್ಯವಾದ" ಎಂಬ ವಿಷಯದ ಕುರಿತು ತಮ್ಮ ಪ್ರಬಂಧವನ್ನು ಮಂಡಿಸಿದರು. ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆಯ ಸಚಿವರಾದ ಸಂಗಾತಿ ಸೂರ್ಯಕಾಂತ ಮಿಶ್ರ ಮತ್ತು ಪ್ರಸನ್ನಿತ್ ಬೋಸ್ ಚರ್ಚೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರಾದ ಸಂಗಾತಿ ಸೀತಾರಾಂ ಯೆಚೂರಿ ಅವರು ಆಳವಾದ ಸೈದ್ಧಾಂತಿಕ ಚರ್ಚೆಯನ್ನು ಸುಂದರವಾಗಿ ಸಮಾರೋಪ ಮಾಡಿ ವಿಚಾರ ಸಂಕಿರಣಕ್ಕೆ ರಾಜಕೀಯ ದಿಕ್ಸೂಚಿಯನ್ನು ನೀಡಿದರು.

ನಾಲ್ಕನೆಯ ಗೋಷ್ಠಿ 'ಪ್ರಸಕ್ತ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರೈತರ ಬೇಡಿಕೆಗಳು" ಎಂಬ ವಿಷಯದ ಮೇಲಿನ ಚರ್ಚೆಗೆ ಮೀಸಲಾಯ್ತು. ವಿಷಯವನ್ನು ಕುರಿತು ಪ್ರೊ. ಜಯತಿ ಘೋಷ್ ತಮ್ಮ ಪ್ರಬಂಧವನ್ನು ಮಂಡಿಸಿದರು. ತಮಿಳುನಾಡು ಕಿಸಾನ್ ಸಭಾದ ಕಾರ್ಯದರ್ಶಿ ಸಂಗಾತಿ ಬಾಲಕೃಷ್ಣ ಗೋಷ್ಠಿಯ ಅಧ್ಯಕ್ಷತೆ ವಹಿಸಿದರು. ಚರ್ಚೆಯಲ್ಲಿ ಸಂಗಾತಿ ಅಶೋಕ್ ದಾವಳೆ ಮತ್ತು ಡಾ. ಜ್ಯೋತಿರ್‌ಮೊಯ್ ಭಟ್ಟಾಚಾರ್ಯ ಭಾಗವಹಿಸಿದ್ದರು. ಪ್ರತಿನಿಧಿಗಳೂ ತಮ್ಮ ಸಲಹೆಗಳನ್ನು ನೀಡುವ ಮೂಲಕ ಚರ್ಚೆಯನ್ನು ಅರ್ಥಪೂರ್ಣಗೊಳಿಸಿದರು.

ಐದನೆಯ ಗೋಷ್ಠಿಯಲ್ಲಿ "ಬಿಕ್ಕಟ್ಟು ಮತ್ತು ಗ್ರಾಮೀಣ ಜನಜೀವನ" ಕುರಿತು ಪ್ರೊ. ವೆಂಕಟೇಶ್ ಅತ್ರೇಯಾ ಪ್ರಬಂಧ ಮಂಡಿಸಿದರು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಸಂಗಾತಿ ಎ.ವಿಜಯರಾಘವನ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಸಂಗಾತಿ ಸುನಿತ್ ಚೋಪ್ರಾ ಮತ್ತು ಸ್ಮಿತಾ ಗುಪ್ತಾ ಚರ್ಚೆಯಲ್ಲಿ ಭಾಗವಹಿಸಿದ್ದರು.

ಕೊನೆಯಲ್ಲಿ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳಾದ ಸಂಗಾತಿ ಕೆ.ವರದರಾಜನ್ ಅವರು "ರೈತ ಹಾಗೂ ಕೃಷಿ ಕೂಲಿಕಾರರ ಬೇಡಿಕೆ ಪಟ್ಟಿ"ಯ ಕರಡನ್ನು ಮಂಡಿಸಿದರು. ಸಂಗಾತಿ ಎಸ್.ರಾಮಚಂದ್ರನ್ ಪಿಳ್ಳೈ ಅಧ್ಯಕ್ಷತೆ ವಹಿಸಿದ್ದರು. ಪ್ರತಿನಿಧಿಗಳು ತಮ್ಮ ಸಲಹೆಗಳನ್ನು ನೀಡುವ ಮೂಲಕ ಬೇಡಿಕೆಗಳ ಪಟ್ಟಿಯನ್ನು ಪರಿಪೂರ್ಣಗೊಳಿಸಿದರು. ಕಿಸಾನ್ ಸಭಾ ಮತ್ತು ಕೂಲಿಕಾರರ ಸಂಘಗಳು ಈ ಬೇಡಿಕೆಗಳ ಪಟ್ಟಿಯನ್ನು ಅಂತಿಮಗೊಳಿಸುವುದೆಂದು ನಿರ್ಧರಿಸಲಾಯಿತು.

ಕಾರ್ಮಿಕ, ರೈತರ ಸಖ್ಯತೆಯನ್ನು ಬಲಪಡಿಸುವ ಮೂಲಕ, ನವ ಉದಾರೀಕರಣ ನೀತಿಗಳ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವತ್ತ ಈ ರಾಷ್ಟ್ರೀಯ ವಿಚಾರ ಸಂಕಿರಣ ಭಾರತದ ಕಾರ್ಷಿಕ ಚಳುವಳಿ ದೃಷ್ಟಿಕೋನವನ್ನು ಹರಿತಗೊಳಿಸಿತು ಎನ್ನುವುದರಲ್ಲಿ ಸಂಶಯವಿಲ್ಲ.

ಛಿದ್ರಗೊಳ್ಳುತ್ತಿದೆ ಬದುಕು....

ಆರ್ಥಿಕ ಬಿಕ್ಕಟ್ಟಿನ ಪರಿಣಾಮ ವ್ಯಕ್ತಿಯೊಬ್ಬನ ಮನಸ್ಸಿನಲ್ಲಿ ಕುಟುಂಬವೊಂದರ ಒಳಗೆ ಎಂತಹ ತಲ್ಲಣ ಉಂಟು ಮಾಡಬಹುದು? ಒಂದು ಹೃದಯಸ್ಪರ್ಶಿ ಅನುಭವ ಇಲ್ಲಿದೆ ಓದಿ...

ಕೆ.ಮಹಾಂತೇಶ್

ಈಗ ಕೆಲವು ದಿನಗಳ ಹಿಂದಿನ ಮಾತು. ಬೆಳಗಾವಿಯಿಂದ ಒಂದು ಖಾಸಗಿ ಬಸ್‌ನಲ್ಲಿ ಬೆಂಗಳೂರಿನತ್ತ ಹೊರಟಿದ್ದೆ. ರಾತ್ರಿ 10ರ ಸಮಯಕ್ಕೆ ಬಸ್ಸು ಧಾರವಾಡಕ್ಕೆ ಬಂತು. ನನ್ನ ಪಕ್ಕದಲ್ಲಿನ ಕಿಟಕಿಯ ಸೀಟೊಂದು ಬೆಳಗಾಂನಿಂದಲೂ ಖಾಲಿಯೇ ಇತ್ತು. ಧಾರವಾಡದಲ್ಲಿ ಸುಮಾರು 40 ರಿಂದ 45ರ ಪ್ರಾಯದ ವ್ಯಕ್ತಿಯೊಬ್ರು ಆ ಸೀಟಿಗೆ ಬಂದ್ರು. ಅವರನ್ನು ಬೀಳ್ಕೊಡಲು ಬಹುಶ: ಹತ್ತು ಹದಿನೈದು ಜನರ ದಂಡವೇ ಬಂದಿತ್ತೆಂದು ಕಾಣುತ್ತದೆ. ಹಾಗಾಗಿ ಬಸ್‌ನ ಹೊರಗಡೆಯ ಕಿಟಕಿಯಿಂದ ಒಬ್ರು ತಪ್ಪುತ್ಲೆ, ಮತ್ತೊಬ್ರು ಭೈಯಾ, ಭೈಯಾ, ಭೇಟಾ.... ಭೇಟಾ ಅಂತ ಕರೆಯುತ್ತಲೇ ಇದ್ರು. ಅಷ್ಟರೊಳಗೆ ಅವರ ಹೆಂಡತಿ ತನ್ನ ಮಗಳೊಂದಿಗೆ ಬಸ್‌ನೊಳಗೆ ಆತನ ಸೀಟಿನ ಹತ್ರ ಬಂದು - 'ಆಪ್ ಇದರ್‌ಸೇ ಅಮರಾ ಚಿಂ...ತ್‌ಕರೋ, ಇದರ ಕೋಯಿಬಿ ಪ್ರಾಬ್ಲಮ್ ನಯಿ (ನೀವು ಇಲ್ಲಿರುವ ನಮ್ಮ ಬಗ್ಗೆ ಚಿಂತೆ ಮಾಡ್ಬೇಡಿ. ಇಲ್ಲಿ ನಮಗೇನೂ ಸಮಸ್ಯೆಯಿಲ್ಲ) ವಹಾಸೆ ತುಮಾರ ಕಾಮ್‌ಸೇ ಚಿಂತಾ ಕರೋ...." (ಅಲ್ಲಿಯ ನಿಮ್ಮ ಕೆಲಸದ ಬಗ್ಗೆ ಗಮನಹರಿಸಿ) ಅಂತ ಐದಾರು ಬಾರಿ ಗಂಡನ ಕೈಹಿಡಿದು ಹೇಳುತ್ತಲೇ ಇದ್ರು.... ಅಷ್ಟೊತ್ತಿಗೆ ಬಸ್‌ನ ಹುಡುಗ ಇಳಿರ್ರಿ... ಇಳಿರ್ರಿ ಅಂತ ಕೂಗಿದ. ಬಸ್ಸು.. ಮಲೆನಾಡಿನ ಆ ಧಾರವಾಡದ ಮಾಗಿ ಚಳಿಯಲಿ ತಣ್ಣನೆ ಮುಂದೆ ಸಾಗಿತು. ನಾನು ಕುಳಿತಿದ್ದ ಸೀಟನ್ನು ಹಿಂದಕ್ಕೆಳೆಯುತ್ತಾ ಸ್ವಲ್ಪ ಹಿಂದಕ್ಕೆ ಒರಗಿದೆ. ಪಕ್ಕದಲ್ಲಿದ್ದ ಆ ವ್ಯಕ್ತಿಗೆ ಹೆಂಡತಿ, ಮಕ್ಕಳು, ಬಂಧುಗಳ ನೆನಪು ಗಾಢವಾಗಿ ಕಾಡಿತೆಂದು ಕಾಣುತ್ತದೆ. ಬಸ್ಸು ಹೊರಟ ಒಂದೆರಡು ಕ್ಷಣದಲ್ಲೇ ಬಿಕ್ಕಳಿಸುತ್ತಾ, ಮುಖಕ್ಕೆ ಕರ್ಚಿಫನ್ನು ಹಾಕಿ ಒಂದೇ ಸಮನೆ ಅಳಲು ಆರಂಭಿಸಿದರು.

ನಾನು ನಿದ್ದೆಗೆ ಜಾರಲು ಯತ್ನಿಸುತ್ತಿದ್ದ ನನಗೆ ಆತನ ಅಳು ಎಚ್ಚರಗೊಳಿಸಿತು. ಏನು ಮಾಡಬೇಕೆಂದು ತೋಚದೆ ಚಿಂತಾಕ್ರಾಂತನಾದೆ. ಆದ್ರೆ ಆತನ ಮನದೊಳಗಿನ ಕಣ್ಣೀರೆಲ್ಲಾ ಹೊರಬರಲಿ ಎಂದು ಸ್ವಲ್ಪ ಸಮಯ ಸುಮ್ಮನಿದ್ದೆ. ನಂತರ ನಿಧಾನವಾಗಿ ಆತನನ್ನು ಮಾತಿಗೆಳೆದೆ.

ಆತ ಮೂಲತಃ ಬೆಂಗಳೂರಿನ ಸಿವಿಲ್ ಎಂಜಿನೀಯರ್. ಸದ್ಯ ದುಬೈನಲ್ಲಿ ದೊಡ್ಡ ಖಾಸಗಿ ಕಂಪನಿಯೊಂದರಲ್ಲಿ ಕೆಲಸ. ಅವರ ತಂದೆ ಬೆಂಗಳೂರು ಹೆಚ್.ಎ.ಎಲ್‌ನಲ್ಲಿ ರಿಟೈರ್ಡ್ ನೌಕರ. ಹೀಗೆ ವಿಶ್ವಾಸದೊಂದಿಗೆ ವಿವರವನ್ನು ಪಡೆದುಕೊಂಡ ನಂತರ ನನ್ನ ಮಾತನ್ನು ದುಬೈನಲ್ಲಿ ಇತ್ತೀಚಿನ 'ಆರ್ಥಿಕ ಕುಸಿತ'ದತ್ತ ಹೊರಳಿಸಿ ಉತ್ತರಕ್ಕಾಗಿ ಆಸಕ್ತಿಯಿಂದ ಅವರತ್ತ ನೋಡಿದೆ.

ನಾನು ಕೆಲಸ ಮಾಡುತ್ತಿರುವ ಕಂಪನಿಯಲ್ಲಿ ಸದ್ಯ ಈ ಕುಸಿತ ಪರಿಣಾಮ ಬೀರಿಲ್ಲ. ಆದ್ರೂ ದುಬೈನಲ್ಲಿರುವ ನೂರಾರು ಸಣ್ಣ ಸಣ್ಣ ಕಂಪನಿಗಳ ಮೇಲೆ ಅದು ಕೆಟ್ಟ ಪರಿಣಾಮ ಬೀರಿದೆ. ನೂರಾರು ...ಯರು ತವರೊಂದಿಗೆ ವಾಪಸ್ಸಾಗುತ್ತಿದ್ದಾರೆ. ಇದು ಬೇಸರ ಸಂಗತಿ ಅಂದ್ರು. ಹಾಗೆ ಮಾತನಾಡುತ್ತಲೇ ನಾನು ಮತ್ತಷ್ಟು ಆತ್ಮೀಯನಾಗುತ್ತಲೇ ಅವರದೇ ಬದುಕಿನ ಪುಟವನ್ನು ತೆರೆದಿಟ್ಟರು.

ಸಾರ್ ನಿಜ ಹೇಳಬೇಕಂದ್ರೆ, ನಾನು ಕೆಲಸ ಮಾಡುತ್ತಿರುವ ಕಂಪನಿಯು ಈ ಪರಿಸ್ಥಿತಿಯಲ್ಲಿ ನಮಗೆ ಯಾವಾಗ ಬೇಕಾದ್ರು ಹೊರಹಾಕಬಹುದು ಅಂತ ಹೆದರಿಕೆ ಶುರುವಾಗಿದೆ. ನನಗೆ ಎರಡು ಜನ ಮಕ್ಳು. ಬೆಂಗಳೂರು ಇಂದಿರಾನಗರದಲ್ಲಿ ಸ್ವಂತದ್ದು ಮನೆಯಿದೆ. ನನ್ನ ಮಗ ಈಗ ಎಸ್‌ಎಸ್‌ಎಲ್‌ಸಿ. ಮಗಳು ಹುಟ್ಟಿನಿಂದಲೂ ರಕ್ತದಲ್ಲಿ ಹಿಮೊಗ್ಲೋಬಿನ್ ಕೊರತೆಯಿಂದ ನರಳುತ್ತಿದ್ದಾಳೆ. ನೀವೇ ನೋಡಿದ್ರಲ್ಲ. ಅವ್ಳು ಎಷ್ಟು ಸಣ್ಣದಾಗಿ ಕಾಣುತ್ತಿದ್ಲು. ಅವಳಿಗೆ ಪ್ರತಿ ತಿಂಗಳು ಡಯಾಲಿಸಿಸ್ (ರಕ್ತ ಬದಲು) ಮಾಡಬೇಕು. ಅದಕ್ಕೆ ದುಬೈನಲ್ಲಿಪ್ರತಿ ತಿಂಗಳು 5 ಸಾವಿರ ದಿನಾರ್ ಹಣ ಬೇಕು. (ರೂಪಾಯಿಯಲ್ಲಿ 50 ಸಾವಿರ) ಈಗ ಪರಿಸ್ಥಿತಿ ನೋಡಿದ್ರ ನನ್ನ ಕೆಲ್ಸದ ಬಗ್ಗೆ ಗ್ಯಾರಂಟಿಯಿಲ್ಲ. ನಾನು ನಿಜವಾಗ್ಲೂ ಎರಡು ತಿಂಗಳು ರಜೆ ಹಾಕಿ ಬಂದಿದ್ದೆ. ಆದ್ರೆ ಕೂಡಲೇ ವಾಪಸ್ ಬನ್ನಿ ಅಂತಾ ಕಂಪನಿಯಿಂದ ಕರೆ ಮಾಡ್ತಾನೆ ಇದ್ದಾರೆ. ನಾನು ಇಲ್ಲದ ಒಂದು ತಿಂಗಳಲ್ಲಿ ಅಲ್ಲಿ ಏನೇನು ಬದಲಾವಣೆ ಅಗಿದೆಯೋ ನನಗೆ ಗೊತ್ತಿಲ್ಲ. ಇಂತಹ ಪರಿಸ್ಥಿತಿಯನ್ನು ನಾನು ಮೊದಲೇ ಅಂದಾಜು ಮಾಡಿದ್ದೆ. ಹಾಗಾಗಿಯೇ ನನ್ನ ಹೆಂಡತಿ, ಮಕ್ಕಳನ್ನು ಮುಂಜಾಗ್ರತೆಯಿಂದಲೇ ಇಲ್ಲಿಗೆ ವಾಪಸ್ ಕರೆತಂದು ಧಾರವಾಡದಲ್ಲಿ ಬಿಟ್ಟು ಹೊರಡುತ್ತಿದ್ದೇನೆ. ಇಲ್ಲಿ ಸಂಬಂಧಿಕರೆಲ್ಲಾ ಇದ್ದಾರೆ. (ಬೆಂಗಳೂರಿಗಿಂತ ಧಾರವಾಡ ಖರ್ಚಿನಲ್ಲಿ ಕಡಿಮೆ ಅನ್ನೋ ಒಂದು ಕಾರಣದಿಂದ) ಅಲ್ಲಿ ಶಿಕ್ಷಣ ತುಂಬಾ ದುಬಾರಿ. ಮನೆ ಬಾಡಿಗೆ ದುಬಾರಿ. ಇನ್ನೂ ಔಷಧಿ ಖರ್ಚು ಗಗನಕ್ಕೇರಿದೆ. ನನ್ನಂತ ಆಫಿಸರ್‌ಗೆ ಈಗೇನೋ ಕಂಪನಿ ಔಷಧಿ ಖರ್ಚು ಭರಿಸುತ್ತಿದೆ. ಆದರೆ ಮುಂದೆ ಕಷ್ಟ ಅನಿಸ್ತಿದೆ. ಅಲ್ಲಿ ನನ್ನ ಮಗಳಿಗೆ ಪ್ರತಿ ತಿಂಗಳು 5000 ದಿನಾರ್ ಖರ್ಚು ಮಾಡ್ತಿದ್ದೆ. (50 ಸಾವಿರ) ಆದ್ರೆ ಬೆಂಗಳೂರಿನ ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಪ್ರತಿ ತಿಂಗಳಿಗೆ 2 ಸಾವಿರ ಮಾತ್ರ ಸಾಕು... ಒಂದೇ ವೇಳೆ ಅಲ್ಲಿ ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆದುಹಾಕಿದ್ರೆ... ಇಷ್ಟೆಲ್ಲಾ ಒಂದೇ ಬಾರಿಗೆ ನಿಭಾಯಿಸೋದು ಕಷ್ಟ. ಆದ್ದರಿಂದಲೇ ಹೆಂಡತಿ, ಮಕ್ಕಳನ್ನು ಮುಂಜಾಗ್ರತೆಯಿಂದಲೇ ಇಲ್ಲಿಗೆ ತಂದು ಬಿಟ್ಟು ಹೊರಟಿದ್ದೇವೆ ಸಾರ್' ಅಂತಾ ದುಬೈನಲ್ಲಿ ಬಂದಿರುವ ಮುಂದೆಯೂ ಬರಬಹುದಾದ 'ಆರ್ಥಿಕ ಬಿಕ್ಕಟ್ಟಿನ' ಮುಖಗಳನ್ನು ಬಿಚ್ಚುತ್ತಾ ಹೋದರು ಆ ವ್ಯಕ್ತಿ.

ಮುಂಜಾನೆ ನಸು ಬೆಳಕಿನಲ್ಲಿ ನಾನು ಬೆಂಗಳೂರಿನಲ್ಲಿ ಇಳಿಯುವ ಸ್ಟಾಪು ಬಂತು. ಇಳಿಯುವ ಮುನ್ನ ಆತನನ್ನು ಮಾತನಾಡಿಸಿ ಗುಡ್ ಬೈ ಹೇಳುವ ಬಯಕೆಯೊಂದಿಗೆ ಮುಖ ನೊಡಿದೆ. ಬೆಳಗಿನ ಆ ಪ್ರಶಾಂತತೆಯಲ್ಲಿ ಆತನಿನ್ನೂ ಹೆಂಡತಿ, ಮಕ್ಕಳು ರಾತ್ರಿ ಬೀಳ್ಕೊಟ್ಟ ಆ ಸಿಹಿ ನೆನಪಿನಲ್ಲಿ ಕನಸಿನಲ್ಲಿದ್ದಂತೆ ಭಾಸವಾಯಿತು. ಜಗತ್ತಿನೆಲ್ಲೆಡೆ ಏಳುತ್ತಿರುವ 'ಆರ್ಥಿಕ ಬಿಕ್ಕಟ್ಟಿನಿಂದ' ಆತನ ಕುಟುಂಬ, ಮಗನ ಶಿಕ್ಷಣ, ವಿಶೇಷವಾಗಿ ಮಗಳ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆಯಲ್ಲ ಎಂದು ಚಿಂತಿಸುತ್ತಾ, ಇಂತಹ ಅದೆಷ್ಟೋ ಸಾವಿರ ಸಾವಿರ ಕುಟುಂಬಗಳ ನೆಮ್ಮದಿಯನ್ನು 'ಈ ಕರಿನೆರಳು' ಕಾಡಲಿದೆಯೋ ಎಂಬ ಚಿಂತನೆಯೊಂದಿಗೆ ಬಸ್ ಇಳಿದು ಭಾರವಾದ ಹೃದಯದೊಂದಿಗೆ ಮನೆಯತ್ತ ಹೆಜ್ಜೆ ಹಾಕಿದೆ.

ಕೊನೆ ಮಾತು

ಅಂದ ಹಾಗೆ ಅಮೇರಿಕದ ದೊಡ್ಡಣ್ಣನ ಹೊಟ್ಟೆಯೊಳಗಿಂದ ಆರಂಭಗೊಂಡಿರುವ ಈ 'ಆರ್ಥಿಕ ಬಿಕ್ಕಟ್ಟಿನ' ಸುನಾಮಿ ವೇಗ ಜಗದೆಲ್ಲೆಡೆ ಆಳವಾಗಿ ಎಲ್ಲೆಲ್ಲೊ ಪಸರಿಸಿದೆಯಂತೆ. ಆದರೂ ಅದಿನ್ನೂ ನಮ್ಮ ಕಣ್ಣಿಗೆ ಕಾಣುತ್ತಿಲ್ಲ ಯಾಕೆ ಗೊತ್ತೆ?

ಬಂಡವಾಳಶಾಹಿ ಹಿಡಿತದಲ್ಲಿರುವ ಮಾಧ್ಯಮಗಳ ಮಾಲೀಕರು, ಆಯಾ ದೇಶಗಳಲ್ಲಿ ಆರ್ಥಿಕ ಕುಸಿತ ಉಂಟಾಗಿದೆ ಎಂದು ಯಾರಾದರೂ ಪತ್ರಕರ್ತರು ಸುದ್ದಿ ಬರೆದರೆ, ಅಂತಹವರ ಮೇಲೆ ಭಾರೀ ದಂಡ ಇಲ್ಲವೇ ಅವರನ್ನು ಕೆಲಸದಿಂದ ಕಿತ್ತುಹಾಕುವ ಬೆದರಿಕೆ ಹಾಕುತ್ತಿದ್ದಾರಂತೆ! ಹೇಗಿದೆ. ಬಂಡವಾಳಶಾಹಿ ವರಸೆ?

ಮಾಲೀಕರಿಲ್ಲದ ಕಾರುಗಳು

ಕಳೆದ ನಾಲ್ಕು ತಿಂಗಳಲ್ಲಿ ಮಾಲೀಕರಿಲ್ಲದ 3000 ಕಾರುಗಳು ದುಬೈನ ಇಂಟರ್ ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ ಪತ್ತೆಯಾಗಿವೆಯಂತೆ. ಬರೀ ಕಾರುಗಳಷ್ಟೇ ಪತ್ತೆಯಾಗಿದ್ದರೆ ಇದು ಆಶ್ಚರ್ಯದ ಸುದ್ದಿಯಾಗುತ್ತಿರಲಿಲ್ಲ. ಕಾರಿನ ಕೀ ಸಮೇತ ಅವು ಪತ್ತೆಯಾಗಿವೆ.

ಕಾರಣ ಏನೆಂದು ತಲೆ ಕೆಡಿಸಿಕೊಳ್ಳುತ್ತಿದ್ದೀರಾ? ನಿಲ್ಲಿ ಅದರ ಹಿಂದಿನ ಸತ್ಯ ಇಲ್ಲಿದೆ. ಅಂದಹಾಗೆ ಈ ಕಾರುಗಳು ಮಾಲೀಕರು ಯಾರು ಗೊತ್ತೆ? ಇವೆಲ್ಲಾ ದುಬೈನಲ್ಲಿ ಕಳೆದ ಹಲವಾರು ವರ್ಷಗಳಿಂದ ವಿವಿಧ ತೆರನಾದ ಕೆಲಸಗಳಲ್ಲಿದ್ದ ವಿವಿಧ ದೇಶಗಳ ವಲಸಿಗರೇ ಅದರ ಮಾಲೀಕರು!

ಈಗ್ಗೆ ಕೆಲ ತಿಂಗಳಿಂದ ಅಮೇರಿಕಾದಲ್ಲಿ ಆರಂಭಗೊಂಡ 'ಆರ್ಥಿಕ ಕುಸಿತ' ದುಬೈನಲ್ಲಿರುವ ವಲಸಿಗರನ್ನು ತಟ್ಟಿದೆ. ಈ ಆರ್ಥಿಕ ಕುಸಿತದಿಂದಾಗಿ ಕೆಲಸ ಕಳೆದುಕೊಂಡ ಜನರು ಈಗ ಕಾರಿಗಾಗಿ ಮಾಡಿದ ಸಾಲವನ್ನು ತೀರಿಸಲು ಆಗುತ್ತಿಲ್ಲವಂತೆ. ಒಂದು ಕಡೆ ಕೈಯಲ್ಲಿದ್ದ ಕೆಲಸ ಹೋಗಿದೆ. ಮತ್ತೊಂದೆಡೆ ಕಾರು, ಮನೆಗಾಗಿ ಮಾಡಿದ್ದ ಸಾಲ ತೀರಿಸಲು ಆಗುತ್ತಿಲ್ಲ. ಇನ್ನು ದುಬೈನಲ್ಲಿ ಸಾಲ ತೀರಿಸದಿದ್ದರೆ ಜೈಲು ಶಿಕ್ಷೆ ಗ್ಯಾರಂಟಿಯಂತೆ! ಹಾಗಾಗಿ ಇರೋ ಬರೋ ಹಣವನ್ನು ಕೈಯಲ್ಲಿಟ್ಟುಕೊಂಡು ಕಾರುಗಳನ್ನು ಏರ್‌ಪೋರ್ಟ್‌ವರೆಗೂ ತಂದು ಕೀಯನ್ನು ಅದರಲ್ಲೇ ಬಿಟ್ಟು ತಮ್ಮ ದೇಶಗಳಿಗೆ ವಲಸಿಗರು ವಾಪಸ್ಸಾಗುತ್ತಿದ್ದಾರೆ.

ಕಾರುಗಳಲ್ಲಿ ತಿರುಗುವವರೇ ಕಾರು ಬಿಟ್ಟು ಓಡುವ ಸ್ಥಿತಿ ಬಂದಿರುವುವಾಗ ಇನ್ನೂ ದುಬೈ, ಸುಡಾನ್, ಖತರ್, ಮತ್ತಿತರೆ ಗಲ್ಫ್ ದೇಶಗಳಲ್ಲಿ, ಕಾವಲುಗಾರ, ಡ್ರೈವರ್, ಮನೆಗೆಲಸ ಇತ್ಯಾದಿಗಳಲ್ಲಿ ತೊಡಗಿರುವ ಸಾವಿರಾರು ಕಾರ್ಮಿಕರ ಸ್ಥಿತಿ ಹೇಗಿರಬೇಡ? ನಿಜ ಈಗ ಆರಂಭಗೊಂಡಿರುವುದು ಆರ್ಥಿಕ ಬಿಕ್ಕಟ್ಟಿನ ಸುನಾಮಿಯ ಒಂದೊಂದೇ ಅಲೆಗಳು ಮಾತ್ರ !



ಆರ್ಥಿಕ ಬಿಕ್ಕಟ್ಟಿನ ಅನಾವರಣದತ್ತ.......

ಆತ್ಮೀಯರೆ,

ಈ ಜಗತ್ತು ಅತ್ಯಂತ ಸಂಕೀರ್ಣ ಸಂದಿಗ್ಧಮಯ ಸನ್ನಿವೇಶದತ್ತ ಸಾಗುತ್ತಿದೆ.

ಜಾಗತಿಕ ಆರ್ಥಿಕ ಮಹಾಕುಸಿತ- ಆ ಬಿಕ್ಕಟ್ಟು ನಿಧಾನವಾಗಿ ಎಲ್ಲಾ ಕಡೆ ಪಸರಿಸುತ್ತಿದೆ. ಜೀವದ ಉಸಿರನ್ನು ಇಷ್ಟಿಷ್ಟೇ ಕಸಿಯುತ್ತಾ ಆವರಿಸುತ್ತಿದೆ. ದೊಡ್ಡ ದೊಡ್ಡ ಕಂಪನಿಗಳು, ಆರ್ಥಿಕತೆಯ ಮಹಾ ಉತ್ತುಂಗ ಶಿಖರದಲ್ಲಿದ್ದೇವೆ ಎಂದೆಲ್ಲಾ ಬಡಾಯಿ ಕೊಚ್ಚಿಕೊಂಡವರು ಮಹಾಕುಸಿತದ ಸುನಾಮಿಯಲ್ಲಿ ಬಿಕ್ಕಟ್ಟಿನ ಹೊಡೆತಕ್ಕೆ ತತ್ತರಿಸಿದ್ದಾರೆ. ಹಾಗೆ ದುಡಿಯುವ ಜನ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಬೆಂಗಳೂರಿನಲ್ಲಿಯೇ ಲಕ್ಷಲಕ್ಷಾಂತರ ಜನ ಇದ್ದಕೆಲಸ ಕಳೆದುಕೊಂಡು ಕಂಗಾಲಾಗಿ ಪರದಾಡುತ್ತಿದ್ದಾರೆ. ಆದರೆ ಸರ್ಕಾರಗಳು ಕಣ್ಣುಮುಚ್ಚಿ ಕುಳಿತಿವೆ.

ಈಗಿನದು ಕೇವಲ ಆರಂಭ. ಮುಂದಿನದು ನೂರು ಪಟ್ಟು ಘೋರ. ಹೀಗೆ ಹೇಳಿದರೆ ಉತ್ಪ್ರೇಕ್ಷೆ ಎನ್ನುವವರೇ ಅಧಿಕ. ಆದರೆ ಜಗತ್ತು ಈ ಬಂಡವಾಳಶಾಹಿ ವ್ಯವಸ್ಥೆಯು ಇಂತಹುದೇ ಬಿಕ್ಕಟ್ಟು ಕಂಡಿರುವುದು ವಾಸ್ತವ. ಆದರೆ ಈಗಿನದರ ಬಗ್ಗೆ ನಮ್ಮ ಮಾಧ್ಯಮಗಳು ಆಳುವವರು ಬೇಕೆಂದೇ ಸತ್ಯ ಮರೆ ಮಾಚುತ್ತಿದ್ದಾರೆ. ಆದ್ದರಿಂದಲೇ ಜನಶಕ್ತಿ ಈ ಮಹಾಕುಸಿತದ ಬಿಕ್ಕಟ್ಟಿನ ಬಗ್ಗೆ ಎಲ್ಲಾ ಮಗ್ಗುಲುಗಳನ್ನು ತೆರೆದಿಡಲು ಹೊರಟಿದೆ. ಕಳೆದ ವಾರದಿಂದಲೇ ವಿಶೇಷ ಬರಹಗಳು 'ಆರ್ಥಿಕ ಸುನಾಮಿಯ ಸುಳಿಯಲ್ಲಿ' ಆರಂಭಗೊಂಡಿವೆ. ಪ್ರತಿಬಿಕ್ಕಟ್ಟು ಹೊಸ ಹುಟ್ಟಿಗೆ ಕಾರಣವಾಗಬೇಕು. ಈ ಸಂದರ್ಭ ಬಳಸಿ ವ್ಯವಸ್ಥೆಯ ಬದಲಾವಣೆಗೆ ದುಡಿವ ಜನ ಸನ್ನದ್ಧರಾಗಬೇಕು. ಪ್ರತಿವಾರವೂ ಹೊಸ ಮಾಹಿತಿ, ವಿಶಿಷ್ಟ ವಿಶ್ಲೇಷಣೆಗಳು....

-ಸಂ

ರಾಜ್ಯದಲ್ಲಿ, ರಾಜಧಾನಿಯಲ್ಲಿ ಚಳುವಳಿಗಳೋ ಚಳುವಳಿಗಳು



ಸ್ತ್ರೀ ಶಕ್ತಿ - ಸ್ವಸಹಾಯ ಗುಂಪುಗಳಿಗೆ ಸುತ್ತುನಿಧಿ, ಸಬ್ಸಿಡಿ ಸಾಲ ಹಾಗೂ ತರಬೇತಿ, ಅವರ ಉತ್ಪನ್ನಗಳಿಗೆ ಮಾರುಕಟ್ಟೆ, ಶೇ. 3 ರ ಬಡ್ಡಿದರದ ಸಾಲ, ಮಹಿಳಾ ಭವನಕ್ಕೆ ಹೆಚ್ಚಿನ ಅನುದಾನ ಇತ್ಯಾದಿ ಬೇಡಿಕೆಗಳಿಗಾಗಿ ಆಗ್ರಹಿಸಿ, ಎಲ್ಲ ಬಡವರಿಗೂ ಬಿಪಿಎಲ್ ಕಾರ್ಡ್ ವಿತರಣೆಗಾಗಿ ಮತ್ತು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ ಒತ್ತಾಯಿಸಿ ಫೆಬ್ರವರಿ 27, 2009 ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಸ್ತ್ರೀ ಶಕ್ತಿ - ಸ್ವಸಹಾಯ ಗುಂಪುಗಳ ಒಕ್ಕೂಟ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ನಡೆದ ಈ ಬೃಹತ್ ರ್‍ಯಾಲಿಯ ಭಾಗವಾಗಿ ನಗರ ರೈಲ್ವೆ ನಿಲ್ದಾಣದಿಂದ ಹಳೇ ಸೆಂಟ್ರಲ್ ಜೈಲ್‌ವರೆಗೆ ಮೆರವಣಿಗೆ ಹಾಗೂ ನಂತರ ಬೃಹತ್ ಬಹಿರಂಗ ಸಭೆ ನಡೆಯಿತು. ಸ್ತ್ರೀ ಶಕ್ತಿ - ಸ್ವಸಹಾಯ ಗುಂಪುಗಳ ಒಕ್ಕೂಟದ ರಾಜ್ಯ ಸಂಚಾಲಕಿ ಸಿ.ಕುಮಾರಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರು ಸಭೆಯಲ್ಲಿ ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕೆಲವೊಂದು ಬೇಡಿಕೆಗಳ ಈಡೇರಿಕೆ ಹಾಗೂ ಉಳಿದಂತೆ ಮಾತುಕತೆ ವ್ಯವಸ್ಥೆಗೆ ಭರವಸೆ ನೀಡಿದರು.

ಕಲೆ - ಕಲಾವಿದರ ಅವಮಾನ ಸಚಿವರ ವಿರುದ್ಧ ಪ್ರತಿಭಟನೆ



ಆಧುನಿಕ ಕಲೆಗಳ ಗ್ಯಾಲರಿ ಉದ್ಘಾಟನಾ ಸಮಾರಂಭದಲ್ಲಿ ಸಾಹಿತಿ, ಕಲಾವಿದರನ್ನು ಖೋಟಾ ಜಾತ್ಯತೀತವಾದಿಗಳು, ಸಂಸ್ಕೃತಿ ತಿಳಿಯದ ವಿಕೃತಿಗಳು ಎಂದೆಲ್ಲಾ ಬಾಯಿಬಂದಂತೆ ಬಯ್ದಿದ್ದಲ್ಲದೇ ಸ್ವಾಭಿಮಾನದಿಂದ ಎದ್ದು ನಿಂತು ಪ್ರತಿಭಟಿಸಿದ ಕಲಾವಿದ ಎಂ.ಎಸ್.ಮೂರ್ತಿಯವರನ್ನು ಪೋಲೀಸರನ್ನು ಬಳಸಿ ಹೊರದಬ್ಬಿಸಿದರು ಸಚಿವ ರಾಮಚಂದ್ರಗೌಡರು. ಸ್ವತಃ ತಾನು ಸರ್ಕಾರದ ಜನಪ್ರತಿನಿಧಿ ಎಂಬುದನ್ನೇ ಮರೆತು 'ಗೇಟ್ ಔಟ್' ಎಂದೂ, ನಾನೇ ಸರ್ಕಾರ, ಎಂದೆಲ್ಲಾ ಮನಸ್ಸಿಗೆ ಬಂದಂತೆ ಕಿರುಚಾಡಿದ್ದನ್ನು ರಾಜ್ಯದ ಪ್ರಜ್ಞಾವಂತರು ಖಂಡಿಸುತ್ತಲೇ ಇದ್ದಾರೆ.

ಇಂತಹ ಸಂಸ್ಕೃತಿಹೀನ ನಡವಳಿಕೆ, ಕಲಾವಿದರ ಅಭಿವ್ಯಕ್ತಿಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನೇ ಮೊಟಕು ಮಾಡುವ ಸಂಘ ಪರಿವಾರದ ಹುನ್ನಾರಗಳ ವಿರುದ್ಧ ಬೆಂಗಳೂರಿನಲ್ಲಿ ನೂರಾರು ಕಲಾವಿದರು ಎದ್ದುನಿಂತು ಪ್ರತಿಭಟಿಸಿ ಚೆಡ್ಡಿ ಪಡೆಯ ಹೂಂಕಾರಗಳಿಗೆ ಧಿಕ್ಕಾರ ಕೂಗಿ ಸವಾಲು ಸ್ವೀಕರಿಸಿದರು.

ಫೆಬ್ರವರಿ 22ರಂದು ಬೆಂಗಳೂರಿನ ಟೌನ್ ಹಾಲ್ ಬಳಿ ನೆರೆದವರು ಖ್ಯಾತ ಕಲಾವಿದರು, ಚಿಂತಕರು ನಡೆಸಿದ ಪ್ರತಿಭಟನೆಯೂ ವಿನೂತನವೇ. ಮಾತುಗಳಲ್ಲಿ ಅಭಿವ್ಯಕ್ತಿಸಿದ ಬಗೆಯೊಂದಾದರೆ ಕಾವ್ಯದಲ್ಲಿ ಅನಾವರಣಗೊಂಡುದ್ದು ಇನ್ನೊಂದು ಬಗೆ. ಕುಂಚದಲ್ಲಿ-ಕ್ಯಾನ್‌ವಾಸ್ ಮೇಲೆ ಚಿತ್ರಗಳು ಹಲವು ರೂಪು ಹೊತ್ತು ವ್ಯಂಗ್ಯದ ಈಟಿಯ ತುದಿಯಿಂದ ಚುಚ್ಚಿದ್ದು ಮತ್ತೊಂದು ಬಗೆ. ಹಾಡು, ಮಾತು, ಕವನ ವಾಚನ, ಚಿತ್ರಗಳು... ಮೌನ ಪ್ರತಿಭಟನೆ ಎಲ್ಲದರಲ್ಲಿಯೂ ಗುರುತಿಸಿದ್ದು ಬದಲಾದ ರಾಜಕೀಯ ಸನ್ನಿವೇಶಗಳನ್ನು. ರಾಮಚಂದ್ರಗೌಡನ ಮಾತಿನ ಹಿಂದಿನ ರಾಜಕಾರಣವನ್ನು. ರಾಮಚಂದ್ರಗೌಡರ ರಾಜೀನಾಮೆಗೆ ಆಗ್ರಹಿಸುತ್ತಲೇ, ಇಂದು ಎಚ್ಚರಗೊಳ್ಳದಿದ್ದರೆ ಮುಂದೆ ಒದಗಲಿದೆ ಭಾರಿ ಅಪಾಯ ಎಂಬ ವಾಸ್ತವವನ್ನು. ಅಲ್ಲಿದ್ದ ಪ್ರಮುಖರು ಡಾ|| ಕೆ. ಮರುಳಸಿದ್ದಪ್ಪ, ಬಿ.ಸುರೇಶ್, ಎ. ಎಸ್. ಮೂರ್ತಿ, ಎಂ.ಎಸ್.ಮೂರ್ತಿ, ಎಸ್.ಜಿ.ಸಿದ್ಧರಾಮಯ್ಯ, ನಾಗತಿಹಳ್ಳಿ ಚಂದ್ರಶೇಖರ್, ಚಿ.ಸು.ಕೃಷ್ಣ ಶೆಟ್ಟಿ. ಟಿ.ಸುರೇಂದ್ರ, ಬಿ. ಉಮೇಶ್ ಮುಂತಾದವರು. ಇದು ಕಲಾವಿದರ ಗಮನಾರ್ಹ ಪ್ರತಿಭಟನೆಯಾಗಿತ್ತು.



ಉದ್ಯೋಗ ಖಾಯಮಾತಿ, ನಿವೃತ್ತಿ ವೇತನ ಸೌಲಭ್ಯ ಇತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಫೆಬ್ರವರಿ 27, 2009 ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ಬಳಿ ನಡೆದ ಪ್ರತಿಭಟನೆಯ ಚಿತ್ರ. ಮುಖ್ಯಮಂತ್ರಿಯ ಭೇಟಿಗಾಗಿ ಆಗ್ರಹಿಸಿದ ಪ್ರತಿಭಟನಾಕಾರರನ್ನು ಬಂಧಿಸುತ್ತಿರುವ ಪೊಲೀಸರು.

ಸಾರಿಗೆ ಸಂಸ್ಥೆಯ ಬಸ್ಸುಗಳು ಕೊಳಕಾಗಿದ್ದಲ್ಲಿ ಚಾಲಕರು ಮತ್ತು ನಿರ್ವಾಹಕರನ್ನು ಒದೆಯಿರಿ ಎಂಬ ಬೇಜವಾಬ್ದಾರಿ ಹೇಳಿಕೆ ನೀಡಿದ ಸಾರಿಗೆ ಸಚಿವ ಆರ್.ಅಶೋಕ್ ಅವರ ಹೊಣೆಗೇಡಿ ಧೋರಣೆ ಖಂಡಿಸಿ ಸಿಐಟಿಯು ನೇತೃತ್ವದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಒಕ್ಕೂಟದಿಂದ ಪ್ರತಿಭಟನೆ



JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor: **S.Y.GURUSHANTH**